1. Petition signed by public of Sirsi Taluk regarding running of a bus to Ankanakatte, Sirsi Taluk.

2. Petition signed by the Chairman, School Development Committee, Sevakar of Ankola Taluk regarding construction of a bridge at Pansaguli in Yellapur, Ankola Taluk.

3. Petition signed by the villagers of Kallagara regarding construction of a bridge at Kallagara on Thankal road.

4. Petition signed by the villagers of Sharagani regading providing of a polling booth at Shiragani in Sirsi Taluk.

5. Petition Signed by the villagers of Shiragani regarding construction of a road between Shiragari and Mathegatta at Sirsi Taluk.

6. Petition signed by several villagers of Karwar Taluk regarding delay in the repairs of Malavalli Road, Yellapura Taluk. Karwar District,

MR. SPEAKER.—The petitions stand referred to the Committee on Petitions.

DISCUSSION FOR SHORT DURATION UNDER RULE 59

re. Grave Situation arising as a result of heavy floods and sea erosion in the state.

SRI P. N. REDDY.—I raise a point of order Sir. The matter that is proposed to be raised pertains to the discussion on the grave situation arising as a result of heavy floods and sea eros on in the State. ಇದು ಇಡೀ ರಾಜ್ಯಕ್ಕೇ ಅನ್ವಯಿಸುವ ಹಾಗೆ ಕಾಣುತ್ತಿದೆ. ಆದರೆ, ಕೋಲಾರ ಮತ್ತಿತರ ಕಡೆಗಳಲ್ಲಿ ಮಳೆ ಬಿದ್ದಿಲ್ಲ ಮತ್ತು ಕುಡಿಯುವುದಕ್ಕೂ ನೀರಿಲ್ಲ. ಆದುದರಿಂದ, "ರಾಜ್ಯ" ಎನ್ನುವ ಪದದ ಬದಲು ಭೀಕರ ಮಳೆ ಮತ್ತು ಸಮುದ್ರದ ಉಬ್ಬರದಿಂದಾಗಿ ತೊಂದರೆಗೀಡಾರುವ ಪ್ರದೇಶಗಳನ್ನು ಸೇರಿಸಬೇಕೆಂದು ಹೇಳುತ್ತೇನೆ. We should have accepted under rule 59. the matter proposed to be raised by Mr. S. R. Bommai. The rule either should be amended or they should only pertains to the areas of North Kanara. South Kanara and Dharwar Districts.

ಶ್ರೀ ಭಾಸ್ಕರಶೆಟ್ಟಿ.-ಮಾನ್ಯ ರೆಡ್ಡಿಯವರಿಗೆ ಸಮುದ್ರದ ಉಬ್ಬರದ ಪರಿಣಾಮವು ಗೊತ್ತಿಲ್ಲವೆಂದು ಕಾಣುತ್ತದೆ.

ಅಧ್ಯಕ್ಷರು.—ರಾಜ್ಯದ ನಾನಾ ಕಡೆಗಳಲ್ಲಿ ಪ್ರವಾಹದ ಹಾವಳಿ ಮತ್ತು ಸಮುದ್ರದ ಕೊರೆತದಿಂದಾಗಿರುವ ಅನಾಹುತಗಳ ಬಗ್ಗೆ ಚರ್ಚೆ ಮಾಡಲು ಅನೇಕ ಮಾನ್ಯ ಸದಸ್ಯರುಗಳು ಕಳಕಳಿ ವ್ಯಕ್ತಪಡಿಸಿದರು. ಆದುದರಿಂದ, ಅನೇಕರು ಅದರ ಬಗ್ಗೆ ಚರ್ಚೆ ಮಾಡಲು ಅವಕಾಶ ದೊರಕಲಿ ಎನ್ನುವ ದೃಷ್ಟಿಯಿಂದ ಕಾರ್ಯಕ್ರಮದ ಪಟ್ಟಿಯಲ್ಲಿ ಅದನ್ನು ಸೇರಿಸಲಾಗಿದೆ. ಈ ಕಾರಣ, ನಿಮ್ಮ ಕ್ರಿಯಾಲೋಪ ನಿಲ್ಲುವುದಿಲ್ಲ.

†Sri S. R. Bommai.—Mr. Speaker Sir, during the last week the State has witnessed unprecedented floods is most of the rivers in the State particularly Krishna, Cauvery, Thunga, Bhadra, Varada, Kabini and other rivers. I must at the outset say that the floods are unprecedented. During the last 25 years such a devastating floods have not occurred in the State (In 1961, in some parts, Varada and Thunga rivers, there was some flood) but this time almost all the Malnad areas and also the rivers flowing in the plains are flooded. Sir, I have found from the press Reports and the statement made by the Hon. Minister for Finance that certain damages and loss of life have been reported. It has also been reported that some villages have been shifted and certain measures are taken by the authorities.

(Sri S. Muniraju in the Chair)

I have received trunk-calls and telegrams and also information that on the banks of the rivers, particularly in Dharwar and Shimoga Districts and also in Mysore District, many of the villages have been flooded and there is no means of communication to reach the people. These people are completely cut off from the rest of the world. According to my information, there are about 50 villages which are completely cut off. In some of the villages, the villagers have vacated their villages since they have been given warning of the danger. I am not giving the particulars of the places where such things have occurred because it will take lot of time. I will give general information which I have received. In a number of places, crops have been completely washed away. In such cases, I must say, the Government has not acted diligently and rushed to the needs of the people. In Dharwad District, two villages are there where the villagers have vacated the villages completely. May I know whether the Government has made any arrangements for the shelter and food for those people? In Mangalore, there is a different problem because the nature of the damage occurred there is different. Likewise, in Dharwad, Belgaum, Shimoga and other places, they have got a different problem. I do not want to narrate all these things, the Government will give the details while making a statement. What I would suggest is, immediately, there should be an assessment of the damage, the nature of the damage, whetner the villages have been vacated *etc.* Then, camps must be opened, food must be rushed and shelter must be given to the affected people. Wherever the crops have been washed away or damaged, the ryots must be immediately provided with funds to purchase seeds, fertilisers *etc*., so that they can once again start sowing work after a week or a fortnight. Wherever houses have collapsed, arrangements should be made to construct

temporary sheds or houses for giving shelter to the affected people. Adequate compensation must be given to them.

There is no employment for the agriculturists in the flood affected areas and the agricultural labourers cannot get employment for another one month. Some arrangement must be made to give them employment so that they can maintain themselves. These are some of the suggestions I would like to make.

I am very sorry to say that none of the Ministers has cared to visit these affected areas. Of course the Chief Minister was sick. But the most important factor is that we do not find the Ministers here in this House also. Even at the when the Finance Minister was replying to the debate on the Budget, hardly one or two Ministers were sitting in this House and one or two Ministers were sitting in the Upper House. Where have all the other Ministers gone?

ಶ್ರೀ ಎಂ. ಚಂದ್ರಶೇಖರ್.—ಸ್ವಾಮಿ, ಶಾಸನ ಸಭೆ ನಡೆಯುವಾಗ ಮಂತ್ರಿಗಳು ಹೇಗೆ ಹೋಗುವುದಕ್ಕೆ ಆಗುತ್ತದೆ.

ಶ್ರೀ ಆರ್. ಎಸ್. ಪಾಟೀಲ್.—ಇಲ್ಲೂ ಇಲ್ಲ; ಅಲ್ಲಿಗೂ ಹೋಗಿಲ್ಲ; ಎಲ್ಲಿಗೆ ಹೋಗಿದ್ದಾರೆ.?

SRI S. R. BOMMAI.—I am very sorry, Sir. My hon. friend must know that if the situation demands and the Ministers go there, the House will not take notice of it. If the Ministers rush to the spots where people are facing a question of life and death, will the House question the Ministers of their absence? I do not think so. I think, the Government is taking this very casually. I know the state owns a Helicopter and it should be used for public interest. If this helicopter is not used to make an air survey of the flood affected areas, what better work can be done with the use of this helicopter? Therefore, without going into the details, I only want to suggest that a House Committee should be constituted immediately consisting of 10 Legislators, Let them divide themselves into groups and visit different areas along with the Ministers of the respective areas and see personally what is the actual damage, whether measures have been taken, whether the Officers have been alert *etc.* I read in the newspaper that the Deputy Commissioner of the Chief Minister's District has taken care and has already visited the places affected by the floods. What about the other Districts? Are the Deputy Commissioners visiting the areas personally or getting information only from the Tahsildars or the subordinate officers sitting in the District Headquarters and sending the same to Bangalore? The Officers must go to the places where there the question of life and death of the people is involved I am sure, Government will not hesitate to release the necessary funds and give all facilities to the

people affected by floods. If I give more details, perhaps it may look exaggerated or there are chances of my omitting some details also. Moreover, we cannot assess the damage by sitting here. Therefore. with these suggestions I request the Government to act as early as possible and take a decision to make arrangements.

† ಶ್ರೀ ಬಿ. ಭಾಸ್ಕರಶೆಟ್ಟಿ (ಕಾಪು).-ಸನ್ಮಾನ್ಯ ಅಧ್ಯಕ್ಷರೆ, ನಾಲ್ಕು ದಿನದಿಂದಲೂ ಸತತವಾಗಿ ಸುರಿಯುತ್ತಿರುವ ಮಳೆಯಿಂದಾಗಿ ನಮ್ಮ ಜಿಲ್ಲೆ ಮಾತ್ರವಲ್ಲ ಕರ್ನಾಟಕ ರಾಜ್ಯದ ೧೯ ಜಿಲ್ಲೆಗಳಲ್ಲಿ ಅನೇಕ ಹಳ್ಳಿಗಳು ಅಲ್ಲಿಯ ಜನಜೀವನ ಅಸ್ತವ್ಯಸ್ತಗೊಂಡಿದ್ದು ಕೆಲವು ಕುಟುಂಬಗಳು ನಿರ್ಗತಿಕವಾಗಿವೆ ಎಂಬ ವಿಚಾರ ಪತ್ರಿಕೆಗಳಲ್ಲಿ ಬಂದಿರುವುದು ಮಾತ್ರವಲ್ಲದೆ, ನಮಗೆ ಬಂದಿರುವ ತಂತಿ, ಇನ್ನಿತರ ಸಂದೇಶಗಳ ಮೂಲಕ ತಿಳಿದು ಬಂದಿದೆ. ಈ ಸಾರಿಯ ವೈಶಿಷ್ಟ ಏನು ಅಂದರೆ ಮಲೆನಾಡು ಪ್ರದೇಶದಲ್ಲಿ ಯಾವಾಗಲೂ ಅತಿವೃಷ್ಟಿ ಇರುವಂಥಾದ್ದು. ಆದರೆ, ಅನಾವೃಷ್ಟಿ ಪ್ರದೇಶವಾದ ಮೈಸೂರಿನ ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಅಧಿಕವಾಗಿ ಮಳೆ ಬಿದ್ದಿರುವುದು ಶುಭ ಸೂಚನೆ.

ಶ್ರೀ ಆರ್.ಎಸ್. ಪಾಟೀಲ್.—ಸ್ವಾಮಿ, ಶುಭ ಸೂಚನೆ ಅಂತ ಮಂತ್ರಿಗಳ ಗಮನವನ್ನು ತಮ್ಮ ಕಡೆಗೆ ತೆಗೆದುಕೊಳ್ಳಬೇಡಿ.

ಶ್ರೀ ಬಿ. ಭಾಸ್ಕರಶೆಟ್ಟಿ.—ಅಧ್ಯಕ್ಷರೆ, ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಈಗ ಮಳೆ ಅತಿವೃಷ್ಟಿಯಾಗಿರುವಂಥ ಕಡೆಯಲ್ಲಿ ಕೆಲವು ವರ್ಷ ಬಿತ್ತನೆಯೇ ಆಗುತ್ತಿರಲಿಲ್ಲ. ಅನಾವೃಷ್ಟಿ ಪ್ರದೇಶವಾಗಿರುತ್ತಿತ್ತು. ಅಂಥಾ ಪ್ರದೇಶದಲ್ಲಿ ಇವತ್ತು ಅತಿವೃಷ್ಟಿಯಾಗಿದೆ. ಈ ನೆರೆ ಹಾವಳಿಗೆ ತುತ್ತಾದ ಜನರಿಗೆ ಏನು ಪರಿಹಾರ ಕೊಡಬೇಕೊ ಅದನ್ನು ಸರ್ಕಾರ ಕೂಡಲೇ ಕೊಡುವಂತೆ ಏರ್ಪಾಡು ಮಾಡಬೇಕು. ಈಗ ಯಾವ ಯಾವ ಕುಟುಂಬಗಳಿಗೆ ಹಾನಿಯಾಗಿದೆ, ಎಲ್ಲಿ ಬೆಳೆಗಳಿಗೆ ನಷ್ಟವಾಗಿದೆ, ರೈತರಿಗೆ ಏನು ತೊಂದರೆಯಾಗಿದೆ ಇದನ್ನೆಲ್ಲಾ ವಿಚಾರಿಸಿ ಮಾನ್ಯ ಬೊಮ್ಮಾಯಿಯವರು ಹೇಳಿದ ಹಾಗೆ ಅಲ್ಲಿಗೆ ಒಂದು ಸಮಿತಿಯನ್ನಾಗಲಿ, ಅಥವಾ ಅಧಿಕಾರಿಗಳನ್ನಾಗಲಿ ಕಳುಹಿಸಿ ಸರ್ಕಾರಕ್ಕೆ ವಿವರಗಳನ್ನು ಕೂಡಲೇ ತರಿಸಿಕೊಂಡು ಸರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಇನ್ನು ಎರಡನೆಯದಾಗಿ, ತಮಗೆಲ್ಲಾ ಗೊತ್ತಿರಬಹುದು ೧೯೭೪ರಲ್ಲಿ ಅತಿ ಭೀಕರವಾದಂಥ ನೆರೆ ಹಾವಳಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂದಿತ್ತು. ಆ ಸಂದರ್ಭದಲ್ಲಿ ಆಗಿನ ಸರ್ಕಾರ ಎಲ್ಲಾ ತುರ್ತು ಕಾರ್ಯಕ್ರಮ ಕೈಗೊಂಡು ತಗ್ಗು ಪ್ರದೇಶದಲ್ಲಿದ್ದಂತಹ ಜನರನ್ನು ಬೇರೆ ಕಡೆಗೆ ವರ್ಗಾಯಿಸಿ ಅವರಿಗೆ ಮನೆಗಳನ್ನು ಕಟ್ಟಿಸಿಕೊಟ್ಟಿದ್ದರು ಅವರು ಈಗ ಅಲ್ಲೇ ವಾಸವಾಗಿದ್ದಾರೆ. ಅಂದಿನ ಆ ಸಂದರ್ಭದಲ್ಲಿ ಜನರನ್ನು ಮೇಲಿನ ಜಾಗಕ್ಕೆ ಸ್ಥಳಾಂತರಿಸದೇ ಹೋಗಿದ್ದರೆ, ಕಳೆದ ಮೂರು, ನಾಲ್ಕು ವರ್ಷದಿಂದ ಬಂದಿರುವ ನೆರೆ ಹಾವಳಿ ಏನಿದೆ ಇದರಿಂದ ಹಿಂದಿನ ಅನಾಹುತಕ್ಕಿಂತ ಹೆಚ್ಚಿನ ಅನಾಹುತವಾಗುತ್ತಿತ್ತು. ೧೯೭೪ರಲ್ಲಿ ಸರ್ಕಾರ ಅವರಿಗೆ ಏನು ಮನೆಗಳನ್ನು ಕಟ್ಟಿಕೊಟ್ಟಿದೆ, ಅದರಲ್ಲಿ ಕೆಲವು ಧರ್ಮಾರ್ಥವಾಗಿ ಕೊಟ್ಟಿದೆ, ಇನ್ನು ಕೆಲವನ್ನು ಸಾಲದ ರೂಪದಲ್ಲಿ ಕೊಟ್ಟಿದೆ. ಈ ವರ್ಷ ಕೂಡ ಅಂತಾದ್ದೇ ಭಯಂಕರವಾದ ನೆರೆ ಹಾವಳಿ ಬಂದಿದೆ. ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಪ್ರದೇಶಗಳು ನೆರೆ ಹಾವಳಿಯಿಂದ ಆವರಿಸಿಕೊಂಡಿದೆ. ಉದಾಹರಣೆಗೆ ಉಪ್ಪಿನಂಗಡಿ, ಬಂಟ್ವಾಳ, ಬೆಂಗ್ರೆ ಮುಂತಾದ ಪ್ರದೇಶಗಳಲ್ಲಿ ೭-೮ ಅಡಿಯವರೆಗೆ ನೀರು ನಿಂತಿರುತ್ತದೆ. ಅಲ್ಲಿ ಜನ ಭಯಭೀತರಾಗಿದ್ದಾರೆ. ವಾಹನ ಸಂಪರ್ಕ ಕಡಿದು ಹೋಗಿದೆ. ಬಂಟವಾಳ ಮತ್ತು ಮಂಗಳೂರು ಈ ಮಧ್ಯೆ ಇರುವ ರಸ್ತೆಯ ಮೇಲೆ ೮-೧೦ ಅಡಿಗಳಷ್ಟು ನೀರು ನಿಂತು ಇಂದಿಗೂ ಆ ಸಂಪರ್ಕ ಸರಿಯಾಗಿಲ್ಲ. ಅಲ್ಲಿ ವಾಹನ ಸಂಚಾರ ಜನಜೀವನ ಸ್ತಬ್ಧಗೊಂಡಿರುವುದು ಮಾತ್ರವಲ್ಲದೆ ಬೆಂಗಳೂರು-ಮಂಗಳೂರು ರಸ್ತೆಯಲ್ಲಿರುವ ಶಿರಾಡಿ ಘಾಟ್ ರಸ್ತೆ ಏನಿದೆ ಅಲ್ಲಿ ಮಣ್ಣು ಬಿದ್ದು ರಸ್ತೆ ಸಂಪೂರ್ಣ ನಾಶಗೊಂಡಿದೆ. ಮಾನ್ಯ ಬೊಮ್ಮಾಯಿಯವರು, ಮಾತನಾಡುವಾಗ ಕೊಡಗು ಜಿಲ್ಲಾಧಿಕಾರಿಯವರು ಮಾತ್ರ ತುರ್ತಾಗಿ ಕೆಲಸ ಮಾಡಿದ್ದಾರೆ ಅಂತ ಹೇಳಿದರು. ನಮ್ಮ ಜಿಲ್ಲಾಧಿಕಾರಿಗಳು ಮತ್ತು ನಮ್ಮ ಪೋಲೀಸ್ ಅಧಿಕಾರಿಗಳು ಎಲ್ಲರೂ ಆ ಭಾಗದಲ್ಲಿ ತಿರುಗಿ ಈ ಪರಿಹಾರ ಕ್ರಮದಲ್ಲಿ ಅತಿ ಮುತುವರ್ಜಿ ವಹಿಸಿ ಕೆಲಸ ಮಾಡಿದ್ದಾರೆ ಅಂತ ನನಗೆ ತಿಳಿದುಬಂದಿದೆ. ಅದಕ್ಕಾಗಿ ಅವರಿಗೆಲ್ಲಾ ಶಹಭಾಸ್‌ಗಿರಿಯನ್ನು ಕೊಡುತ್ತಿದ್ದೇನೆ. ಶಿರಹಟ್ಟಿ ಭಾಗಕ್ಕೆ ಹೋಗಿ ಅಲ್ಲಿ ಇದ್ದಂಥ ಮಣ್ಣನ್ನು ಸ್ವತಃ ನಿಂತು ತೆಗೆಸಿದ್ದಾರೆ. ಇಷ್ಟು ಮಾತ್ರವಲ್ಲದೆ ಬೇರೆ ಕಡೆಗಳಲ್ಲಿ

ಹೋಗಿ ಏನೇನು ಪರಿಹಾರ ಕ್ರಮ ಕೈಗೊಳ್ಳಬೇಕು ಅದನ್ನು ಸಕಾಲದಲ್ಲಿ ಕೈಗೊಂಡಿದ್ದಾರೆ. ಈಗ ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರವನ್ನು ಅತಿ ಕಳಕಳಿಯಿಂದ ವಿನಂತಿಸಿಕೊಳ್ಳುವುದೇನೆಂದರೆ, ಯಾರು ಯಾರು ಮನೆಮಾರುಗಳನ್ನು ಕಳೆದುಕೊಂಡಿದ್ದಾರೆ ಅವರನ್ನು ಸ್ಥಳಾಂತರಿಸಿ ಅವರಿಗೆ ಮನೆಗಳನ್ನು ಕಟ್ಟಿಸಿಕೊಡುವ ವ್ಯವಸ್ಥೆಯನ್ನು ಮಾಡಿಕೊಡಬೇಕು. ಈ ಪ್ರವಾಹದಿಂದಾಗಿ ಬೇರೆ ವಿಧದಲ್ಲಿ ನಷ್ಟ ಹೊಂದಿದವರಿಗೂ ಕೂಡ ಕೂಡಲೇ ಪರಿಹಾರವನ್ನು ಒದಗಿಸಿಕೊಡಬೇಕು. ಹೋದ ಸಾರಿ ನೆರೆ ಹಾವಳಿ ಬಂದಾಗ ಸರ್ಕಾರ ಲೆವಿಯನ್ನು ಮಾಫಿ ಮಾಡಿದೆ. ಭೂ ಕಂದಾಯ ಮಾಫಿ ಮಾಡಿದೆ. ಅದೇ ರೀತಿ ಈ ಸಾರಿ ನೆರೆ ಹಾವಳಿಯಿಂದ ಯಾರು ತಮ್ಮ ಬೆಳೆಗಳನ್ನು ಕಳೆದುಕೊಂಡಿದ್ದಾರೆ ಅಂತಹವರಿಗೆ ಬೇಕಾದಂಥ ಬೀಜವನ್ನು ಸರ್ಕಾರದ ಖರ್ಚಿನಿಂದ ಒದಗಿಸಿಕೊಡುವುದಲ್ಲದೆ ಅವರಿಗೆ ಲೆವಿಯನ್ನು ವಿನಾಯ್ತಿ ಮಾಡುವುದರ ಜೊತೆಗೆ ಭೂ ಕಂದಾಯವನ್ನು ಸಹ ವಿನಾಯತಿ ಮಾಡಬೇಕೆಂದು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಇನ್ನು ದುರ್ಭಿಕ್ಷದಲ್ಲಿ ಅಧಿಕಮಾಸ ಎಂಬಂತೆ ಐದಾರು ವರ್ಷಕ್ಕೆ ಒಮ್ಮೆ ನಮ್ಮ ಕಡೆ ನೆರೆ ಹಾವಳಿ ಬಂದರೂ ಈ ಸಮುದ್ರದ ಕೊರೆತ ಏನಿದೆ ಇದು ಪ್ರತಿವರ್ಷ ಬರುತ್ತದೆ. ಸಾಧಾರಣವಾಗಿ ೧೯೬೦ನೇ ಇಸವಿಯಿಂದ ಈ ಸಮುದ್ರದ ಕೊರೆತ ಇದೆ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಪ್ರತಿವರ್ಷ ಸಮುದ್ರ ೧-೨ ಕಿಲೋಮೀಟರ್ ಭೂಮಿಯನ್ನು ನುಂಗುತ್ತದೆ. ಇದರಿಂದ ನನಗೆ ಏನು ಭಯವಾಗುತ್ತಿದೆ ಅಂದರೆ ಇನ್ನು ೫-೧೦ ವರ್ಷ ಇದೇ ರೀತಿ ಮುಂದುವರೆದರೆ ನಮ್ಮ ಮತದಾರರ ಕ್ಷೇತ್ರದ ಮುಕ್ಕಾಲು ಪಾಲು ಭಾಗವೆಲ್ಲಾ ಸಮುದ್ರದ ಪಾಲಾಗುತ್ತದೆ. ಪ್ರತಿವರ್ಷ ಸಮುದ್ರದ ಕೊರೆತವಾಗುತ್ತಿದೆ. ಕಳೆದ ವರ್ಷ ಸಮುದ್ರ ಕೊರೆತದಲ್ಲಿ ಸಾಧಾರಣವಾಗಿ ಸಾವಿರಾರು ತೆಂಗಿನ ಮರಗಳು, ಒದಾರು ನೀರು ನಿಲ್ಲತಕ್ಕ ಟ್ಯಾಂಕ್‌ಗಳು ಮತ್ತು ನೂರಾರು ಮನೆಗಳು ಹೋಗಿವೆ. ಸರ್ಕಾರ ಆ ಸಂದರ್ಭದಲ್ಲಿ ಪರಿಹಾರ ಕ್ರಮ ತೆಗೆದುಕೊಳ್ಳಲಿಕ್ಕೆ ತುರ್ತಾಗಿ ಧಾವಿಸಿ ಬಂದರೂ ಕೂಡ ಅನಂತರ ಆ ಪರಿಹಾರ ಕ್ರಮ ಸ್ಥಗಿತಗೊಂಡಿದೆ. ಕಾಪು ಒಂದರಲ್ಲಿಯೇ ಸುಮಾರು ೨೭ ಕುಟುಂಬಗಳು ನಿರ್ಗತಿಕರಾಗಿದ್ದಾರೆ. ಅಲ್ಲಿ ಹೆಚ್ಚಾಗಿ ಮೀನುಗಾರರ ಕುಟುಂಬದವರೆ ಇರುವುದು. ಅವರು ಯಾವಾಗಲೂ ಸಮುದ್ರದ ಹತ್ತಿರವೇ ಇರಬೇಕು. ಅವರ ಕೆಲಸ ಕಾರ್ಯಗಳು ಆಗಬೇಕಾದರೆ ಅವರು ದೂರದಿಂದ ಬಂದು ಈ ಮೀನು ಹಿಡಿಯುವ ಕೆಲಸ ಮಾಡಲಿಕ್ಕೆ ಆಗುವುದಿಲ್ಲ. ಆದುದರಿಂದ, ಈ ಮೀನುಗಾರಿಕೆ ಇಲಾಖೆಯ ಸ್ವಾಧೀನದಲ್ಲಿದ್ದ ಭೂಮಿಯಲ್ಲಿ ಕೆಲವು ಸಂಘ ಸಂಸ್ಥೆಗಳವರು ಸುಮಾರು ೧೦-೨೦ ಮನೆಗಳನ್ನು ಕಟ್ಟಿಸಿ ಕೊಟ್ಟರು, ಸಾಧಾರಣವಾಗಿ ೧೦೦ ಕುಟುಂಬಗಳಿಗಾದರೂ ಮನೆಗಳನ್ನು ಒದಗಿಸಲಿಕ್ಕೆ ಪ್ರಯತ್ನಪಟ್ಟೆವು. ಆದರೆ ಸಮುದ್ರದ ಬದಿಯಲ್ಲಿ ಅವರಿಗೆ ಬೇಕಾದಂಥ ಸ್ಥಳ ಸಿಗಲಿಲ್ಲ. ಈ ಭೂಗರ್ಭ ಗಣಿ ಇಲಾಖೆಯಿಂದ ಸಿಲಿಕಾ ಸ್ಯಾಂಡ್ ತೆಗೆಯಲಿಕ್ಕಾಗಿ ಆ ಪ್ರದೇಶದಲ್ಲಿ ೪೦ ಎಕರೆ ಜಾಗವನ್ನು ಗುತ್ತಿಗೆಗೆ ಪಡೆದಿದ್ದ

ಶ್ರೀಮಾನ್ ಶಿವಾಜಿ ಮೆನನ್‌ರವರ ಹತ್ತಿರ ನಾನೇ ಹೋಗಿ, ಮಾತನಾಡಿ, ಅಲ್ಲಿ ೫ ಎಕರೆ ಜಾಗವನ್ನು ಬಿಟ್ಟುಕೊಡಬೇಕು, ಕಾರಣ ಈ ಮೊಗವೀರ ಬಂಟ್ಸ್‌ಗಳಿಗೆ ಸುಮಾರು ೨೦-೪೦ ಕುಟುಂಬಗಳು ಮನೆಯಿಲ್ಲದೆ ನಿರ್ಗತಿಕರಾಗಿದ್ದಾರೆ ಎಂಬುದಾಗಿ ಅವರಲ್ಲಿ ಕೇಳಿಕೊಂಡಿದ್ದಕ್ಕೆ ಅವರು ಬಹಳ ಉದಾರ ಮನಸ್ಸಿನಿಂದ ಜಾಗವನ್ನು ಬಿಟ್ಟುಕೊಟ್ಟರು. ನಂತರ ಏನಾಗಿದೆ ಎಂಬುದು ಮಾನ್ಯ ಕಂದಾಯ ಸಚಿವರ ಗಮನಕ್ಕೆ ಬಂದಿದೆಯೋ ಅಥವಾ ಬಂದಿಲ್ಲವೊ ನನಗೆ ಸರಿಯಾಗಿ ಗೊತ್ತಿಲ್ಲ. ಆ ಜಾಗದಲ್ಲಿ ಮನೆ ನಿವೇಶನವನ್ನು ಹಂಚುವ ಸಂದರ್ಭಕ್ಕೆ ಸರಿಯಾಗಿ ಕಂದಾಯ ಸಚಿವರು ಅದಕ್ಕೆ ತಡೆ ಆಜ್ಞೆ ಕೊಟ್ಟಿದ್ದಾರೆ. ಇದರ ಬಗ್ಗೆ ನಾನೂ ಕೂಡ ಕಾಗದ ಬರೆದಿದ್ದೇನೆ. ಆ ತಡೆ ಆಜ್ಞೆಯನ್ನು ತೆಗೆದು ಹಾಕಿದ ಪಕ್ಷದಲ್ಲಿ ೨೫ ಮೀನುಗಾರರ ಕುಟುಂಬಗಳಿಗೆ ಸ್ಥಳ ನಿವೇಶಗಳನ್ನು ಕೊಟ್ಟು ಮತ್ತೆ ಸರ್ಕಾರದ ವತಿಯಿಂದಲೇ ಅಂದರೆ ಹುಡ್ಕೋ ಸ್ಕೀಮಿನಿಂದ ಮನೆಗಳನ್ನೂ ಕೂಡ ಕಟ್ಟಿಸಿಕೊಡಬೇಕೆಂದು ಕಾಗದ ಬರೆದು ತಿಳಿಸಿದ್ದೇನೆ. ಇದೇ ವಿಚಾರವನ್ನು ನಮ್ಮ ಜಿಲ್ಲೆಯ ಮಾನ್ಯ ಜಿಲ್ಲಾಧಿಕಾರಿಗಳೂ ಕೂಡ ಮಾನ್ಯ ಕಂದಾಯ ಸಚಿವರ ಗಮನಕ್ಕೆ ತಂದಿದ್ದಾರೆಂದು ನನ್ನ ತಿಳುವಳಿಕೆಗೆ ಬಂದಿದೆ.

ಮತ್ತೊಂದು ವಿಚಾರವೇನೆಂದರೆ, ಈ ಸಮುದ್ರದ ಕೊರತೆ ಪ್ರತಿ ವರ್ಷವೂ ನನ್ನ ಕ್ಷೇತ್ರದಲ್ಲಿ ಇದ್ದೇ ಇದ್ದೆ ಆದರೆ ಈ ವರ್ಷ ಸಮುದ್ರ ಕೊರತೆ ಸಾಧಾರಣ ನಾನು ತಿಳಿದ ಮಟ್ಟಿಗೆ ಶ್ರೀಮಾನ್ ಸುಬ್ಬಯ್ಯ ಶೆಟ್ಟಿಯವರ ಕ್ಷೇತ್ರವಾದ ಸೂರತ್‌ಕಲ್‌ನಲ್ಲೂ ಕೂಡ ನಿನ್ನೆಯಿಂದ ಈ ಸಮುದ್ರ ಕೊರತ ಪ್ರಾರಂಭವಾಗಿದೆ ಎಂಬುದಾಗಿ ನನ್ನ ತಿಳುವಳಿಕೆಗೆ ಬಂದಿದೆ. ಇದು ಇಷ್ಟರವರೆಗೆ ಕಾಪು ಉಡುಪಿ, ಮರಿವಂತೆ ಇಲ್ಲಿ ಮಾತ್ರ ಈ ಸಮುದ್ರ ಕೊರತ ಇತ್ತು. ಇದು ಬಹಳ ಗಂಭೀರವಾದ ವಿಚಾರವಾಗಿದೆ ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಇದು ಪತ್ರಿಕೆಯಲ್ಲೂ ಈ ವಿಚಾರ ಬಂದಿದೆ. ಇದಕ್ಕೆ ಸರ್ಕಾರ

ಏನಾದರೂ ಒಂದು ಶಾಶ್ವತವಾದ ಪರಿಹಾರವನ್ನು ಕಂಡು ಹಿಡಿಯಬೇಕು. ಕಳೆದವರ್ಷ ಇಷ್ಟೊಂದು ಹಾನಿಯಾಗಿರಲಿಲ್ಲ. ಈ ಸಾರಿ ಅಪಾರವಾದ ಹಾನಿ ಉಂಟಾಗಿದೆ ಎಂಬುದನ್ನು ಪತ್ರಿಕೆಯವರೂ ಕೂಡ ಬರೆದಿದ್ದಾರೆ. ಈ ಸಮುದ್ರ ಕೊರತ ಪ್ರತಿ ವರ್ಷ ನಡೆಯುತ್ತಲೇ ಇದೆ. ನಾನು ೧೯೬೨ನೇ ವರ್ಷದಿಂದಲೂ ಸತತವಾಗಿ ಇದಕ್ಕೆ ಏನಾದರೂ ಒಂದು ಶಾಶ್ವತ ಪರಿಹಾರ ಕಂಡುಹಿಡಿಯಬೇಕೆಂದು ಅನೇಕ ಭಾರಿ ಸರ್ಕಾರಕ್ಕೆ ತಿಳಿಸಿದ್ದರೂ ಕೂಡ, ಮತ್ತೆ ಕೇಂದ್ರ ಸರ್ಕಾರಕ್ಕೂ ಈ ವಿಚಾರವಾಗಿ ಅನೇಕ ಭಾರಿ ಕಾಗದ ಬರೆದಿದ್ದರೂ ಕೂಡ ನಮ್ಮ ಸರ್ಕಾರದವರು ಹೆಚ್ಚಿನ ಗಮನವನ್ನು ಈ ಬಗ್ಗೆ ಇದು ವರೆಗೂ ಕೊಟ್ಟಂತಿಲ್ಲ. ಇದು ಸಮುದ್ರದ ಕಿನಾರಿನಲ್ಲಿರುವ ಜನಗಳ ಪ್ರಶ್ನೆ ಇದರಲ್ಲಿ ಹೆಚ್ಚು ಅಡಕ ವಾಗಿದೆ. ಏಕೆಂದರೆ ಮಳೆಗಾಲ ಪ್ರಾರಂಭವಾಯಿತು ಎಂದರೆ ಅಲ್ಲಿಯ ಜನರು ಭಯ ಬೀತರಾಗಿರು ತ್ತಾರೆ. ಕಾರಣ ಯಾವ ಕಾಲದಲ್ಲಿ ಯಾವ ನಿಮಿಷದಲ್ಲಿ ಸಮುದ್ರ ತಮ್ಮ ಪ್ರಕೋಪವನ್ನು ಬೀರು ತ್ತದೋ? ಯಾವಾಗ ನೀರು ಮೇಲೆ ಬರುತ್ತದೋ ಎಂಬುದಾಗಿ ಹೇಳುವುದಕ್ಕಾಗುವುದಿಲ್ಲ. ಈ ಸಮುದ್ರದ ಅಲೆ ಕಣ್ಣು ಮುಚ್ಚಿ ತೆರೆಯುವುದರೊಳಗೆ ಸಾವಿರಾರು ತೆಂಗಿನ ಗಿಡಗಳನ್ನು ಮನೆಗಳನ್ನು ಕೊಚ್ಚಿಕೊಂಡು ಹೋಗುತ್ತವೆ. ಆದ್ದರಿಂದ ಈ ವಿಷಯದ ಗಂಭೀರತೆಯನ್ನು ಈಗಲಾದರೂ ಸರ್ಕಾರ ದವರು ಅರ್ಥಮಾಡಿಕೊಂಡು ಇದಕ್ಕೆ ಶಾಶ್ವತವಾದ ಪರಿಹಾರವನ್ನು ಕಂಡು ಹಿಡಿಯಬೇಕು. ಇದರ ಬಗ್ಗೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಸೂಪರಿಟೆಂಡೆಂಟ್ ಇಂಜಿನೀಯರ್ (ಲೋಕೋಪಯೋಗಿ ಇಲಾಖೆ) ಒಂದು ಯೋಜನೆಯನ್ನು ತಯಾರು ಮಾಡಿದ್ದಾರೆ. ಇದರ ಶಾಶ್ವತ ಪರಿಹಾರಕ್ಕಾಗಿ ಸುಮಾರು ೨೨ ಕೋಟಿ ರೂಪಾಯಿಗಳ ವೆಚ್ಚ ತಗಲುತ್ತದೆ. ಈ ವರದಿಯನ್ನು ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದರೋ ಇಲ್ಲವೋ ಗೊತ್ತಿಲ್ಲ, ಇದರ ಬಗ್ಗೆ ೧೬-೬-೧೯೬೮ರ ಕನ್ನಡ ಪ್ರಭಾದಲ್ಲಿ ಈ ಬಗ್ಗೆ ಸರ್ಕಾರ ಇಟ್ಟಂತಹ ಕಳಕಳಿ ಕೂಡ ಪತ್ರಿಕೆಯಲ್ಲಿ ಬಂದಿದೆ, ಇದರಲ್ಲಿ ನಮ್ಮ ಸುಧೃವ ಏನೆಂದರೆ, ನಮ್ಮ ಪುಣ್ಯಕ್ಕೆ ನಮ್ಮ ಜಿಲ್ಲೆಗೆ ಇಬ್ಬರಿಗೆ ಮಂತ್ರಿಗಳ ಸ್ಥಾನ ಸಿಕ್ಕಿದೆ, ಅದರಲ್ಲೂ ನಮ್ಮ ಸೌಭಾಗ್ಯ ಏನೆಂದರೆ ಅರ್ಥ ಸಚಿವರು ನಮ್ಮವರೇ. ಇನ್ನೊಬ್ಬ ಸಚಿವೆಯರಾದ ಶ್ರೀಮತಿ ಮನೋರಮ ಮಧ್ವರಾಜ್‌ರವರು ಈ ಮೀನುಗಾರರ ಪರಿಸರದಲ್ಲೇ ಬೆಳೆದವರು. ಅವರು ಮನಸ್ಸು ಮಾಡಿದರೆ ಯಾವ ಕಾರ್ಯವನ್ನೂ ಮಾಡಬಹುದು. ಏಕೆಂದರೆ ನಮ್ಮ ನಾಯಕರು ಬಹಳ ವಿಶಾಲ ಹೃದಯಿಗಳು, ಒಬ್ಬರಿಗೆ ಅರ್ಥ ಇಲಾಖೆಯನ್ನು ವಹಿಸಿದ್ದಾರೆ. ಇದರ ಜೊತೆಗೆ ಯೋಜನೆ ಇಲಾಖೆಯನ್ನೂ ಕೂಡ ವಹಿಸಿದ್ದಾರೆ. ಈ ಸಂದರ್ಭದಲ್ಲಾದರೂ ನಾವು ಇದರ ಪೂರ್ಣ ಪ್ರಯೋಜನ ವನ್ನು ಪಡೆದು ಕೊಳ್ಳಬಹುದೆಂದು ನನಗನ್ನಿಸುತ್ತದೆ. ನಮ್ಮ ಜಿಲ್ಲೆಯ ಸಚಿವರಾದ ಶ್ರೀ ಎಂ. ವೀರಪ್ಪ ಮೊಯ್ಲಿಯವರು ಅರ್ಥ ಇಲಾಖೆಯ ಜೊತೆಗೆ ಯೋಜನಾ ಇಲಾಖೆಯನ್ನೂ ಹೊಂದಿರು ತ್ತಾರೆ. ಆದ್ದರಿಂದ ಈ ಒಂದು ೨೦ ಕೋಟಿ ರೂಪಾಯಿಯ ಯೋಜನೆ ಏನಿದೆ ಇದನ್ನು ಮಂಜೂರು ಮಾಡಿದರೆ ಇದರಿಂದ ಸಮುದ್ರ ಕೊರೆತವನ್ನು ಶಾಶ್ವತವಾಗಿ ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತಿದೆ ಇದನ್ನು ಆದಷ್ಟು ಶೀಘ್ರವಾಗಿ ಮಾಡಿಕೊಡಬೇಕೆಂದು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುವುದರ ಜೊತೆಗೆ ಈ ನೆರೆ ಹಾವಳಿಯಿಂದ ತೆಂಗಿನ ಗಿಡಗಳನ್ನು ಕಳೆದುಕೊಂಡವರಿಗೆ, ಗಿಡ ಒಂದಕ್ಕೆ ೧೦೦ ರೂಪಾಯಿಗಳ ಪರಿಹಾರಧನವನ್ನು ಕೊಡುವ ಒಂದು ಯೋಜನೆ ಇದೆ. ಈ ಯೋಜನೆಯಲ್ಲಿ ಪರಿಹಾರ ಧನವನ್ನು ಕೊಡುವಾಗ ಆ ಕುಟುಂಬದವರ ಒಟ್ಟು ಆದಾಯ ೩೬೦೦ ರೂ. ಗಳಿಗಿಂತ ಕಡಿಮೆ ಇರ ಬೇಕು, ಅಂತಹವರಿಗೆ ಮಾತ್ರ ಈ ಒಂದು ಯೋಜನೆ ವತಿಯಿಂದ ಪರಿಹಾರಧನವನ್ನು ಕೊಡತಕ್ಕಂತಹ ವ್ಯವಸ್ಥೆ ಇದೆ. ಇದರಿಂದಾಗಿ ಒಂದು ಕುಟುಂಬದಲ್ಲಿರುವವರ ಪ್ರತಿಯೊಬ್ಬರ ಆದಾಯ ೫೦೦ ರೂ. ಗಳೆಂದು ಮಾಡಿದ್ದಾರೆ. ಇದರಿಂದಾಗಿ ಯಾರಿಗೂ ಈ ಒಂದು ಸೌಲಭ್ಯ ಸಿಕ್ಕುತ್ತಿಲ್ಲ ಆದ್ದರಿಂದ ಇರತಕ್ಕಂತಹ ಕಾನೂನನ್ನು ಬದಲಾವಣೆ ಮಾಡಿ ನೊಂದವರೆಲ್ಲರಿಗೂ ಸಂಪೂರ್ಣವಾಗಿ ಪರಿಹಾರವನ್ನು ಕೊಡಿಸುವುದು. ಮಾತ್ರವಲ್ಲದೆ ಯಾರ್‍ಯಾರು ಮನೆ ಮಾರುಗಳನ್ನು ಕಳದುಕೊಂಡಿದ್ದಾರೋ ಅಂತಹ ವರಿಗೆಲ್ಲಾ ಹಡ್ಕೋ ಸ್ಕೀಮಿನಿಂದ ಮನೆಗಳನ್ನು ಕಟ್ಟಿಸಿಕೊಡಬೇಕು. ಮತ್ತೆ ನಮ್ಮಲ್ಲಿರತಕ್ಕಂತಹ ಮೀನುಗಾರರಿಗೆ ಸಮುದ್ರದ ಕಿನಾರಿನಲ್ಲಿ ಸ್ಥಳ ಸಿಕ್ಕುವುದಿಲ್ಲ, ಈ ರೀತಿ ಎಲ್ಲೆಲ್ಲಿ ಸ್ಥಳ ಸಿಕ್ಕುವುದಿಲ್ಲವೋ ಅಂತಹ ಕಡೆಗಳಲ್ಲೆಲ್ಲಾ ಖಾಸಗಿಯವರ ಜಮೀನನ್ನು ಆಕ್ವೈರ್ ಮಾಡಿಕೊಂಡು ಅಲ್ಲಿ ನಿವೇಶಗಳನ್ನು ಕೊಡಿಸಬೇಕು. ಮತ್ತೆ ಅದೇ ಸ್ಥಳದಲ್ಲಿ ಸರ್ಕಾರೀ ವೆಚ್ಚದಿಂದಲೇ ಮನೆಗಳನ್ನೂ ಕಟ್ಟಿಸಿಕೊಡಬೇಕೆಂದು ನಾನು ಸರ್ಕಾರವನ್ನು ಬಹಳ ಕಳಕಳಿಯಿಂದ ಕೇಳಿಕೊಂಡು ಈ ಒಂದು ಗಂಭೀರತೆಯನ್ನು ಪರಿಶೀಲಿಸಿ ಮುಂದಿನ ವರ್ಷಗಳಲ್ಲಿ ಈ ರೀತಿ ಆಗದಂತೆ ನೋಡಿಕೊಳ್ಳಬೇಕು. ಸರ್ಕಾರ ಈ ವಿಚಾರದಲ್ಲಿ ತೀವ್ರ

ಗಮನಹರಿಸಬೇಕೆಂದು ಹೇಳುತ್ತಾ ನನಗೆ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್.—ಶ್ರೀ ಪಿ. ರಾಮದೇವ್ ನೀವು ಮಾತನಾಡಿ

ಶ್ರೀ ಶೀರ್ನಾಳಿ ಚಂದ್ರಶೇಖರ್ —ಶಿವಮೊಗ್ಗ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಬಹಳಷ್ಟು ತೊಂದರೆಗೆ ಒಳಗಾಗಿವೆ. ಮಳೆ ಬಂತು ಅಂತ ಉಪ್ಪಿನ ಮೂಟೆಯುವನು ಅತ್ತರೆ ಅದೇ ರೀತಿ ಕಾಯಿ ಮೂಟೆ ಯುವನೂ ಅತ್ತನಂತೆ ಎಂಬ ಗಾದೆ. ಆ ಪ್ರಕಾರ ಸಂಬಂಧಪಡದೇ ಇರುವವರ ಹೆಸರನ್ನು ತಾವು ಕರೆದರೆ ಏನು ಮಾಡೋಣ.

ಶ್ರೀ ಪಿ. ರಾಮದೇವ್.—ನಾನೇ ಮೊದಲು ಈ ವಿಚಾರದ ಬಗ್ಗೆ ಗಮನ ಸೆಳೆಯುವ ಸೂಚನೆ ಯನ್ನು ಕೊಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ನೋಟೀಸನ್ನು ಕೆಲವು ಮಾನ್ಯ ಸದಸ್ಯರು ಕೊಟ್ಟಿದ್ದರೂ ಕೂಡ ಆ ಬಗ್ಗೆ ಮಾನ್ಯ ಬೊಮ್ಮಾಯಿಯವರು ಈಗಾಗಲೇ ಮಾತನಾಡಿದ್ದಾರೆ. ಮತ್ತೆ ಕೆಲವು ಮಾನ್ಯ ಸದಸ್ಯರು ರುಜು ಮಾಡದೇ ಇದ್ದವರೂ ಕೂಡ ಎಲ್ಲೆಲ್ಲಿ ಈ ಒಂದು ನೆರೆ ಹಾವಳಿಯಿಂದ ತೊಂದರೆ ಯಾಗಿದೆ, ಆ ಭಾಗದಿಂದ ಬಂದಿರತಕ್ಕಂತಹ ಸದಸ್ಯರಿಗೆ ಮೊದಲು ಆದ್ಯತೆಯನ್ನು ಕೊಡಬೇಕು. ಉದಾಹರಣೆಗೆ ಹೇಳುವುದಾದರೆ. ದಕ್ಷಿಣ ಕನ್ನಡ ಜಿಲ್ಲೆ, ಕಾರವಾರ, ಶಿವಮೊಗ್ಗ, ಚಿಕ್ಕಮಗಳೂರು, ಮೈಸೂರು, ಬೆಳಗಾಂ ಧಾರವಾಡ, ಈ ಜಿಲ್ಲೆಗಳಿಂದ ಬಂದಿರತಕ್ಕಂತಹ ಸದಸ್ಯರಿಗೆ ಮೊದಲು ಆದ್ಯತೆ ಕೊಡಿ. ಬೇರೆ ಸದಸ್ಯರೂ ಮಾತನಾಡಲಿ, ಬೇಡ ಎಂಬುದಾಗಿ ಹೇಳುತ್ತಿಲ್ಲ. ಆದರೆ ಈ ಮೇಲ್ಕಂಡ ಭಾಗದಿಂದ ಬಂದಿರತಕ್ಕಂತಹ ಸದಸ್ಯರಿಗೆ ಈ ವಿಚಾರದಲ್ಲಿ ದೂರವಾಣಿ ಬಂದಿರುತ್ತದೆ, ಅಥವಾ ಅಲ್ಲಿಯ ಜನರೇ ಬಂದು ಹೇಳಿರಬಹುದು. ಆದ್ದರಿಂದ ಮೊದಲು ತೊಂದರೆಯಾಗಿರತಕ್ಕಂತಹ ಪ್ರದೇಶಗಳಿಂದ ಬಂದಿರತಕ್ಕಂತಹ ಸದಸ್ಯರಿಗೆ ಮೊದಲು ಆದ್ಯತೆಯನ್ನು ಕೊಡಿ. ಮತ್ತೆ ಉಳಿದವರೂ ಮಾತನಾಡಲಿ, ಬೇಡ ಎಂಬುದಾಗಿ ನಾನು ಹೇಳುತ್ತಿಲ್ಲ.

ಶ್ರೀ ಎಸ್.ಎಂ. ಚಂದ್ರಶೇಖರ್.—ಮಳೆ ಬಂದಾಗ ಉಪ್ಪಿನ ಮೂಟೆಯನ್ನು ಹೊತ್ತುಕೊಂಡು ಹೋಗುವವರಿಗಿಂತ ಕಾಯಿ ಮೂಟೆಯನ್ನು ಹೊತ್ತುಕೊಂಡು ಹೋಗುವವರಿಗೆ ಅವಸರವಾಗುವಂತಹು ಪರಿಸ್ಥಿತಿ ಬಂದಿದೆ....

ಛೇರ್ಮನ್.—ಶ್ರೀ ಬೊಮ್ಮಾಯಿಯವರು ಈಗಾಗಲೆ ಈ ವಿಷಯದ ಬಗ್ಗೆ ಚರ್ಚೆ ಮಾಡಿದ್ದಾರೆ. ಮಾನ್ಯ ಮಂತ್ರಿಯವರೂ ಸಹಾ ಸಹಿ ಮಾಡಿರುವವರಿಗೆ ಅದರಲ್ಲೂ ಸಂಬಂಧಪಟ್ಟ ಜಿಲ್ಲೆಯವರಿಗೆ ಆದ್ಯತೆ ಕೊಡಬೇಕೆಂದು ತಿಳಿಸಿದ್ದಾರೆ. ಆದ್ದರಿಂದ ಈ ವಿಷಯದ ಬಗ್ಗೆ ಮಾತನಾಡಬಯಸುವರು ೩ ನಿಮಿಷಗಳ ಕಾಲ ಮಾತನಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎ.ಜಿ. ಕೊಡಗಿ (ಬೈಂದೂರು)—ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ನೆರೆ ಹಾವಳಿ ಬಗ್ಗೆ ಮಾನ್ಯ ಬೊಮ್ಮಾಯಿಯವರು ಹಾಗೂ ಮಾನ್ಯ ಭಾಸ್ಕರ ಶೆಟ್ಟಿಯವರು ಏನು ಹೇಳಿದ್ದಾರೆ ಆ ವಿಚಾರವನ್ನು ನಾನು ಮತ್ತೊಮ್ಮೆ ಪ್ರಸ್ತಾಪ ಮಾಡುವುದಕ್ಕೆ ಹೋಗದೆ ಕೇವಲ ಒಂದು ವಿಷಯವನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಈಗ ನಾವು ಮಳೆಯ ಹಾವಳಿಯನ್ನು ಹತೋಟಿ ಮಾಡುವುದ ಕ್ಕಾಗುವುದಿಲ್ಲ. ಈ ನೆರೆ ಬಂದಿರತಕ್ಕದ್ದು ಈ ವರ್ಷವೇ ಹೊಸದೇನಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಥವಾ ಮಲೆನಾಡಿನಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಸ್ವಾಭಾವಿಕವಾಗಿ ನೆರೆಯ ಹಾವಳಿ ಬಂದಿದೆ. ಮತ್ತು ಇದರಿಂದ ಆಗಿರುವ ಅನಾಹುತಗಳ ಬಗ್ಗೆ ಮಾನ್ಯ ಶೆಟ್ಟಿಯವರು ಸವಿಸ್ತಾರವಾಗಿ ಸಭೆಯ ಗಮನಕ್ಕೆ ತಂದಿದ್ದಾರೆ. ಈ ನೆರೆಯ ಹಾವಳಿಯಿಂದ ಸಮುದ್ರದ ದಡದಲ್ಲಿರತಕ್ಕಂತಹ ಜನರಿಗೆ ಬಹಳ ತೊಂದರೆಯಾಗಿದೆ. ಅವರಿಗೆ ಬೇಕಾಗಿರತಕ್ಕಂತಹ ಸಹಾಯ, ಸವಲತ್ತುಗಳನ್ನು ಸರ್ಕಾರ ಒದಗಿಸಿಕೊಡ ಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯಿಸುತ್ತಿದ್ದೇನೆ. ಇಂತಹ ಮಳೆ ಹಾಗೂ ಸಮುದ್ರದ ನೆರೆ ಯಾವಾಗಲೂ ಮಳೆಗಾಲದಲ್ಲಿ ಬರುತ್ತಿರುವುದರಿಂದ ಸರ್ಕಾರ ಈ ಬಗ್ಗೆ ಶಾಶ್ವತವಾದ ಕಾರ್ಯಕ್ರಮ ಗಳನ್ನು ತೆಗೆದುಕೊಳ್ಳುವ ವಿಚಾರದಲ್ಲಿ ಏನು ಆಲೋಚಿಸಿದೆ. ಈ ಬಗ್ಗೆ ತಾತ್ಕಾಲಿಕವಾದಂತಹ ಕಾರ್ಯ ಕ್ರಮಗಳನ್ನು ವರ್ಷೇ ವರ್ಷೇ ನಾವು ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಈ ಬಗ್ಗೆ ಶಾಶ್ವತವಾದಂತಹ ನೆರೆ ಪರಿಹಾರ ಕಾರ್ಯಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕೆನ್ನುವುದರ ಬಗ್ಗೆ ನಾವು ಅನೇಕ ಸಾರಿ ಸದನದಲ್ಲಿ ಪ್ರಸ್ತಾಪ ಮಾಡಿದ್ದೇವೆ. ಈ ಬಗ್ಗೆ ಸೆಂಟ್ರಲ್ ಸೀ ಎರೋಷನ್ ಬೋರ್ಡ್ ಎಂದು ಇದೆ.

ಆದರಿಂದ ಸಾಕಷ್ಟು ಹಣದ ಸಹಾಯವನ್ನು ಈ ಬಗ್ಗೆ ಪಡೆದುಕೊಳ್ಳಬಹುದು. ಕೇರಳದಲ್ಲಿ ಸಮುದ್ರ ನೆರೆಯನ್ನು ತಪ್ಪಿಸಲು ಈ ಸಂಸ್ಥೆ ಸಾಕಷ್ಟು ಹಣವನ್ನು ಖರ್ಚು ಮಾಡಿದೆ. ಸಮುದ್ರದ ನೆರೆ ಬಂದಾಗ ಅದನ್ನು ತಡೆಗಟ್ಟಲು ನೆರವಾಗುವ ಇಂತಹ ಒಂದು ಸಂಸ್ಥೆ ಅಸ್ತಿತ್ವದಲ್ಲಿ ಇದೆ ಎಂಬುದು ಕರ್ನಾಟಕ ರಾಜ್ಯ ಸರ್ಕಾರಕ್ಕೆ ಗೊತ್ತಿಲ್ಲವೆಂದು ನನಗನ್ನಿಸುತ್ತಿದೆ. ಈ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದರೂ ಅವರು ಆ ಬಗ್ಗೆ ಗಮನ ಕೊಟ್ಟಿಲ್ಲವೆಂದು ಕಾಣುತ್ತದೆ. ಆದ್ದರಿಂದ ನಮ್ಮ ಮಂತ್ರಿಗಳು ಈ ಒಂದು ಬೋರ್ಡಿನ ಸಹಾಯದೊಂದಿಗೆ ನಮ್ಮ ರಾಜ್ಯದಲ್ಲಿ ಯಾವ ಯಾವ ಪ್ರದೇಶದಲ್ಲಿ ನೆರೆ ಹಾವಳಿ ಸತತವಾಗಿ ತಲೆದೋರುತ್ತಿದೆ ಅಂತಹ ಕಡೆಗಳಲ್ಲಿ ಶಾಶ್ವತವಾದಂತಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಸರ್ಕಾರಕ್ಕೆ ಸೂಚಿಸಬಯಸುತ್ತೇನೆ.

ಇನ್ನು ಎರಡನೆಯದಾಗಿ, ಸಾರಿಗೆ ಸಂಪರ್ಕ ಅಸ್ತವ್ಯಸ್ತವಾಗಿದೆ. ಇಂತಹ ಕಡೆಗಳಲ್ಲಿ ಶಾಶ್ವತವಾದಂತ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಈಗ ರಸ್ತೆಗಳಲ್ಲಿ ನೀರು ನಿಂತಿರುವುದರಿಂದ ಸಂಪರ್ಕದ ವ್ಯವಸ್ಥೆ ಅಸ್ತವ್ಯಸ್ತವಾಗಿದೆ. ಈ ಬಗ್ಗೆ ನಿಯಮ ೩೧೨ರ ಕೆಳಗೆ ನಾನು ಒಂದು ಸೂಚನೆಯನ್ನು ಕಳುಹಿಸಿದ್ದೆನು. ಮಳೆ ಬಂದಾಗ ಸಾರಿಗೆ ವಿಷಯದಲ್ಲಿ ತೊಂದರೆಯಾಗುವುದು ಎಲ್ಲರಿಗೂ ಗೊತ್ತಿರತಕ್ಕಂತಹ ವಿಷಯ. ಸಾರಿಗೆ ಸಂಸ್ಥೆಯವರಿಗೆ ಇದು ತಿಳಿದಂತಹ ವಿಷಯವೇ ಆಗಿದೆ. ಶಿರಾಡಿ ಘಾಟ್‌ನಲ್ಲಿ ಸಂಚಾರಕ್ಕೆ ತೊಂದರೆಯಾಗಿರತಕ್ಕಂತಹ ವಿಷಯ ಎಲ್ಲರ ಗಮನಕ್ಕೂ ಬಂದಿದೆ. ಮಂಗಳೂರು ಕೆ.ಎಸ್.ಆರ್.ಟಿ.ಸಿ. ಡಿವಿಜನ್‌ನವರು, ಏನು ಕಾರ್ಯಕ್ರಮವನ್ನು ಈ ಬಗ್ಗೆ ಕೈಗೊಂಡರು ಸ್ವಾಮಿ ? ಈ ರೀತಿ ರಸ್ತೆಯಲ್ಲಿ ತೊಂದರೆಯಿರುವುದರಿಂದ ಅವರುಗಳು ಬಸ್‌ಗಳನ್ನು ಯಾವ ಮಾರ್ಗಗಳಲ್ಲಿ ಸುರಕ್ಷಿತವಾಗಿ ಓಡಿಸಬೇಕೆಂಬ ಬಗ್ಗೆ ಒಂದು ತಿಳುವಳಿಕೆ ಇರಬೇಕಾದ್ದು ಮುಖ್ಯ. ಒಂದನೇ ತಾರೀಖು ದಕ್ಷಿಣ ಕನ್ನಡ ಜಿಲ್ಲೆಯಿಂದ ಏಕಕಾಲದಲ್ಲಿ ರಾತ್ರಿ ೧೦-೩೦ ಗಂಟೆಗೆ ೮ ಬಸ್ಸುಗಳನ್ನು ಬೆಂಗಳೂರಿನ ಕಡೆಗೆ ಓಡಿಸಲಾಯಿತು. ಏಕೆ ಇವರು ಈ ತೀರ್ಮಾನವನ್ನು ಕೈಗೊಂಡರು ?

ಶ್ರೀ ಎಸ್.ಎಂ ಚಂದ್ರಶೇಖರ್.—ಇದೇನು ಸ್ವಾಮಿ ಇವರು.........

(ಗೊಂದಲ)

ಛೇರ್ಮನ್.—ಅವರು ನಿಯಮ ೩೧೨ರ ಕೆಳಗೆ ಮಾತನಾಡುತ್ತಿದ್ದಾರೆ.

ಶ್ರೀ ಎ.ಜಿ. ಕೊಡಗಿ.—ಈ ಬಸ್‌ಗಳನ್ನು ಮುಂದೆ ರಸ್ತೆ ಅಸ್ತವ್ಯಸ್ತಗೊಂಡಿದೆ ಎಂಬ ಕಾರಣದಿಂದ ಉಪ್ಪಿನಂಗಡಿ ಚೆಕ್‌ಪೋಸ್ಟ್ ಬಳಿ ನಿಲ್ಲಿಸಲಾಯಿತು. ಆಗ ಮಧ್ಯರಾತ್ರಿ ೧೨ ಗಂಟೆಯಾಗಿತ್ತು. ಈ ೮ ಬಸ್‌ಗಳಲ್ಲಿ ಸುಮಾರು ೨೦೦ ರಿಂದ ೩೦೦ ಜನರು ಇದ್ದರು. ಶಿರಾಡಿ ಘಾಟ್‌ನಲ್ಲಿ ರಸ್ತೆ ಅಸ್ತವ್ಯಸ್ತವಾಗಿದೆ ಮುಂದೆ ಬಸ್ ಬಿಡಲಾಗುವುದಿಲ್ಲವೆಂದು ಹೇಳಿದರು. ಮುಂದೆ ಬೇರೆ ಯಾವ ಮಾರ್ಗದಲ್ಲಿಯಾದರೂ ಬಸ್ ಬಿಡಬೇಕೇ ಬೇಡವೇ ಎಂಬ ಬಗ್ಗೆ ಬಸ್ ಚಾಲಕರಿಗೆ ಆದೇಶವಿಲ್ಲದ್ದರಿಂದ ಅವರು ಅಲ್ಲೇ ನಿಂತರು. ಬಸ್‌ಗಳು ಅಲ್ಲಿ ನಾಲ್ಕು ಗಂಟೆಗಳ ಕಾಲ ನಿಂತವು. ಈ ಜನರಲ್ಲಿ ಎಷ್ಟೋ ತ್ವರಿತ ಕಾರ್ಯಗಳಿಗೆ ಹೋಗುವವರಿದ್ದರು. ಮದುವೆಗೆ ಹೊರಟ ಒಂದು ಮದುವೆ ದಿಬ್ಬಣ ಕೂಡ ಆ ಜನರಲ್ಲಿ ಇತ್ತು. ಇಂತಹ ಪರಿಸ್ಥಿತಿಯಲ್ಲಿ ಹಾಸನದ ಡಿಪೋದವರಿಗೆ ವಿಷಯ ಗೊತ್ತಿರಲಿಲ್ಲವೇ? ನಾಲ್ಕು ಗಂಟೆಗಳಾದ ನಂತರ ನಾನು ಅಲ್ಲಿಯ ಸಬ್ ಇನ್‌ಸ್ಪೆಕ್ಟರ್‌ರವರನ್ನು ಕಂಡು ಕೆ.ಎಸ್.ಆರ್.ಟಿ.ಸಿ. ಇನ್‌ಪೆಕ್ಟರ್‌ರವರನ್ನು ನೋಡಲಾಗಿ ಬಸ್ ಡ್ರೈವರ್‌ನ ಆಕ್ಷೇಪ ಇದ್ದರೂ ಕೂಡ ಬಸ್‌ನ್ನೂ ಬೇರೆ ಮಾರ್ಗದಲ್ಲಿ ಬೆಂಗಳೂರಿನ ಕಡೆಗೆ ಓಡಿಸಲಾಯಿತು. ಮಡಕೇರಿ ಮೂಲಕ ಮೈಸೂರಿಗೆ ಬಂದು ಅಲ್ಲಿಂದ ಬೆಂಗಳೂರನ್ನು ತಲುಪಬೇಕಾಯಿತು. ಬೆಂಗಳೂರನ್ನು ತಲುಪುವಹೊತ್ತಿಗೆ ಮಧ್ಯಾಹ್ನ ೨ ಗಂಟೆಯಾಗಿತ್ತು. ಈ ರೀತಿ ಸಾರಿಗೆಯಲ್ಲಿ ಅಸ್ತವ್ಯಸ್ತತೆ ಇದೆ. ಈ ರೀತಿ ಮಳೆ ಬಂದು ರಸ್ತೆ ಅಸ್ತವ್ಯಸ್ತವಾದಾಗ ಬಸ್‌ಗಳನ್ನು ಬೇರೆ ಮಾರ್ಗಗಳಲ್ಲಿ ಓಡಿಸುವಂತಹ ಒಂದು ವ್ಯವಸ್ಥೆ ಇರಬೇಕು. ಈ ಬಗ್ಗೆ ಒಂದು ಶಾಶ್ವತವಾದ ಆದೇಶವನ್ನು ಕೊಡಬೇಕಾದುದು ಅವಶ್ಯವಿದೆ. ಇಲ್ಲದಿದ್ದರೆ ಮಧ್ಯ ದಾರಿಯಲ್ಲಿ ಬಸ್ಸುಗಳು ನಿಂತು ಸಾರ್ವಜನಿಕರಿಗೆ ತೊಂದರೆಯಾಗುತ್ತದೆ. ಶಿರಾಡಿ ಘಾಟ್‌ನಲ್ಲಿ ಮಧ್ಯದಲ್ಲೇ ಅನೇಕ ವಾಹನಗಳು ನಿಂತು ಸಾರ್ವಜನಿಕರಿಗೆ ಬಹಳ ತೊಂದರೆಯಾಗಿದೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿನ ಖಾಸಗಿ ಬಸ್‌ಗಳು ಬೇರೆ ಬೇರೆ ಮಾರ್ಗಗಳ ಮೂಲಕ ತಮ್ಮ ಬಸ್‌ಗಳನ್ನು ಓಡಿಸಿ ಜನರಿಗೆ ಆಗತಕ್ಕ ಬವಣೆಯನ್ನು ಅವರು ತಪ್ಪಿಸುತ್ತಾರೆ ಆದರೆ ರಾಜ್ಯ ಸರ್ಕಾರದ ಸಂಸ್ಥೆಯವರು ೨ನೇ ತಾರೀಖು ರಾತ್ರಿ ಶಿರಾಡಿ ಘಾಟ್‌ನಲ್ಲಿ ರಾತ್ರಿ ಏತಕ್ಕೆ ಬಸ್‌ಗಳನ್ನು ಬಿಡಬೇಕಾಗಿತ್ತು ? ಇಲಾಖೆಯ ಮೇಲಿನ ಅಧಿಕಾರಿಗಳು ಸ್ವಲ್ಪ ಜವಾಬ್ದಾರಿತನದಿಂದ

ವರ್ತಿಸಿದ್ದಲ್ಲಿ ಜನರಿಗೆ ಆಗತಕ್ಕ ತೊಂದರೆಗಳನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಸೂಚಿಸಬಯಸುತ್ತೇನೆ. ಆದ್ದರಿಂದ ಒಂದು ರಸ್ತೆಯಲ್ಲಿ ಬಸ್ ಓಡಿಸಲು ತೊಂದರೆಯಾದ ಪಕ್ಷದಲ್ಲಿ ಬೇರೆ ರಸ್ತೆಯಲ್ಲಿ ಬಸ್‌ಗಳನ್ನು ಓಡಿಸುವುದಕ್ಕೆ ತಕ್ಷಣ ಕ್ರಮ ಕೈಗೊಳ್ಳುವಂತಹ ಒಂದು ಏರ್ಪಾಡನ್ನು ಮಾಡಿ ಜನರಿಗೆ ತೊಂದರೆ ಆಗುವುದನ್ನು ತಪ್ಪಿಸಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

೧೧-೩೦ ಎ.ಎಂ.

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್. (ಹೊಸನಗರ)—ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಜಿಲ್ಲೆಯಲ್ಲಿ ಆಗಿರತಕ್ಕಂಥ ಅನಾಹುತಗಳ ಬಗ್ಗೆ ವಿವರಗಳನ್ನು ಕೊಡುವುದಕ್ಕೆ ಹೋದರೆ ಆ ಪ್ರದೇಶದಲ್ಲಿರತಕ್ಕಂಥ ಸಾಗರ, ಹೊಸನಗರ, ಶಿಕಾರಿಪುರ, ತೀರ್ಥಹಳ್ಳಿ ಇವೇ ಮುಂತಾದ ನಾಲ್ಕೈದು ತಾಲ್ಲೂಕುಗಳಲ್ಲಿರತಕ್ಕಂಥ ಹಳ್ಳಿಗಳಲ್ಲಿ ನೆರೆಯುಹಾವಳಿಯಿಂದ ಅಡಿಕೆಮರಗಳು ಬಿದ್ದುಹೋಗಿರುತ್ತವೆ. ಗದ್ದೆ ಹೊಲಗಳಲ್ಲಿ ನೀರು ನುಗ್ಗಿ ಬೆಳೆಗಳು ನಾಶವಾಗಿ ರೈತರಿಗೆ ಬಹಳವಾಗಿ ನಷ್ಟ ಉಂಟಾಗಿ ಆತನಿಗೆ ಸಿಕ್ಕಬೇಕಾದ ಪ್ರತಿಫಲ ಈ ವರ್ಷ ಸಿಕ್ಕದಂತಾಗಿದೆ. ಹೊಸನಗರ ತಾಲ್ಲೂಕಿನಲ್ಲಿ ವರಾಹಿ ನದಿಯ ಯೋಜನೆಯನ್ನು ಮಾಡುವುದಕ್ಕೆ ಸರ್ಕಾರ ಯೋಚನೆ ಮಾಡಿದೆ ರೈತರಿಗೆ ಈ ಒಂದು ತೊಂದರೆಗೆ ಕಾರಣವಾಗಿದೆ. ಅವರು ಕಟ್ಟೆಕಟ್ಟಲಿಕ್ಕೆ ಪ್ರಾರಂಭ ಮಾಡಿಬಿಟ್ಟಿದ್ದಾರೆ. ಇದಕ್ಕೆ ನಾವು ಮೊದಲೇ ಸೂಚನೆಗಳನ್ನು ಕೊಟ್ಟಿದ್ದೇವೆ. ಅನೇಕ ಗ್ರಾಮಗಳ ರೈತರುಗಳನ್ನು ಬೇರೆ ಕಡೆಗೆ ಸಾಗಿಸದೆ ಹೋದರೆ ಬಹಳ ತೊಂದರೆಯಾಗುತ್ತದೆಂದು ಮಾನ್ಯ ಮಿತ್ರರಾದ ಶ್ರೀ ಬಂಗಾರಪ್ಪನವರಿಗೆ ಮೊದಲೇ ಹೇಳಿದ್ದೇವೆ. ಅಲ್ಲಿಯ ಜನರು ಬಹಳ ದಾರುಣ ಪರಿಸ್ಥಿತಿಯಲ್ಲಿ ಸಿಲುಕಿಕೊಂಡಿರುತ್ತಾರೆ. ೧೯೭೪ನೇ ಇಸವಿಯಿಂದ ಈಚೆಗೆ ಈ ರೀತಿಯಾದ ಮಳೆ ಎಂದೂ ಆಗಿರಲಿಲ್ಲ. ಹೊಸನಗರ ತಾಲ್ಲೂಕಿನಲ್ಲಂತೂ ಅನೇಕ ಗ್ರಾಮಗಳಲ್ಲಿ ಅಂದರೆ ಕುಂಬಗಾಳ್, ನೀರು ತೊಟ್ಟಿಲು ಮುಂತಾದ ಕಡೆಗಳ ಬಾಗಾಯ್ತು ಅಡಿಕೆ, ತೆಂಗು, ಗದ್ದೆಗಳಿಗೆ ನೀರು ನುಗ್ಗಿ ಬಹಳಷ್ಟು ಅನಾಹುತಗಳಾಗಿವೆ. ಹತ್ತಾರು ಗ್ರಾಮಗಳಿಂದ ಟೆಲಿಗ್ರಾಂ ಕೂಡ ಕಳುಹಿಸಿ ಕೊಟ್ಟಿದ್ದಾರೆ. ಶಿವಮೊಗ್ಗ ನಗರದಲ್ಲಿ ಹರಿಯುತ್ತಿರುವ ತುಂಗಾನದಿ ತಗ್ಗು ಪ್ರದೇಶದ ಪರಿಸ್ಥಿತಿಯನ್ನು ತಾವು ಅರಿತಿದ್ದೀರಿ. ಸತತವಾಗಿ ಮಳೆಯಾದರೆ ಕುಂಬಾರಗುಂಡಿ, ಕೋಸ್ಟ್‌ಲೈನ್ ಛತ್ರದ ಮಂಟಪದಮೇಲೆ ಐದು ಅಡಿ ನೀರು ನಿಂತು ಕೊಳ್ಳುತ್ತದೆ. ಕೆಲವು ಕಡೆ ಅನೇಕ ಮನೆಗಳು ಕೂಡ ಕೊಚ್ಚಿ ಹೋಗಿರುತ್ತದೆ. ಶಿಕಾರಿಪುರಕ್ಕೆ ಏನು ತುರ್ತು ಪರಿಹಾರವನ್ನು ಕೊಡಬೇಕೆಂದು ಮಾನ್ಯ ಮಂತ್ರಿಗಳಿಗೂ ಕೂಡ ಗೊತ್ತಿರುತ್ತದೆ. ಅನೇಕ ಕಡೆಗಳಲ್ಲಿ ಗುಡಿಸಲುಗಳು ಬಿದ್ದುಹೋಗಿರುತ್ತವೆ. ಶಿಕಾರಿಪುರದಲ್ಲಿ ಒಂದು ಕುಟುಂಬದಲ್ಲಿ ಮೂರು ಜನ ಸತ್ತಿರುವುದು ಕೂಡ ಮಾನ್ಯ ಸಚಿವರಿಗೆ ತಿಳಿದಿರುತ್ತದೆ. ಹೊಸನಗರದಲ್ಲಿ ಅನೇಕ ಜನತಾ ಗೃಹಗಳನ್ನು ಕಟ್ಟಿದ್ದೀರಿ. ಈ ಜನತಾ ಗೃಹಗಳು ನೆರೆಹಾವಳಿಯಿಂದ ನೆಲಸಮವಾಗಿ ಹೋಗಿರುತ್ತದೆ. ಇಂಥ ಒಂದು ದಾರುಣವಾದ ಪರಿಸ್ಥಿತಿಯನ್ನು ಅರಿತು ಒಂದು ಸಮಿತಿಯನ್ನು ಮಾಡಿ ಸೂಕ್ತವಾದ ಪರಿಹಾರವನು ಕೊಡಬೇಕೆಂದು ಕೇಳಿಕೊಳ್ಳುತ್ತಾ ಮಾನ್ಯ ಬೊಮ್ಮಾಯಿಯವರು ಏನು ಸಲಹೆಯನ್ನು ಕೊಟ್ಟಿರುತ್ತಾರೆ, ಆ ಸಲಹೆಯನ್ನು ಬೆಂಬಲಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಿ. ಎಂ. ಘಾಡಿ. (ಹಳಿಯಾಳ)—ಮಾನ್ಯ ಅಧ್ಯಕ್ಷರೇ ಕಾರವಾರ ಜಿಲ್ಲೆಯಲ್ಲಿ ವಿಶೇಷವಾಗಿ ಕರಾವಳಿ ಪ್ರದೇಶಗಳಲ್ಲಿ ದೊಡ್ಡ ಅನಾಹುತವೇ ಆಗುತ್ತಾ ಇದೆ ೧೯೭೮ನೇ ಇಸವಿಯಲ್ಲಿ ನೆರೆಬಂದು ಒಂದು ಸುಂದರವಾದ ಐ ಲ್ಯಾಂಡ್ ಹಾಳಾಗಿ ಹೋಗಿದೆ. ಮಾವಿನಕೆರೆ, ಹೊನ್ನಾವರ ಈ ಭಾಗದಲ್ಲಿ ಸುಮಾರು ೧೫೦೦ ಜನರು ಇದ್ದಾರೆ. ಪಂಚಾಯಿತಿ ಹಾಲ್, ಸ್ಕೂಲ್ ಕಟ್ಟಡ ಎಲ್ಲವೂ ಕೂಡ ನಾಶವಾಗಿ ಹೋಗಿರುತ್ತದೆ. ಮುಂದೆ ದೊಡ್ಡ ದೊಡ್ಡ ಮಳೆಯಾಗತಕ್ಕಂಥ ಸಂದರ್ಭಗಳು ಇರುತ್ತವೆ, ಮೃಗಶಿರ ಆರಿದ್ರಾ, ಮಘ ಮಳೆ ಇವು ಬಹಳ ದೊಡ್ಡ ಮಳೆಗಳಾಗಿರುತ್ತದೆ. ಆದ್ದರಿಂದ ಈಗಾಗಲೇ ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು.........

ಶ್ರೀ ಆರ್.ಎಸ್. ಪಾಟೀಲ್.—ನಮ್ಮ ಬೆಳಗಾಂ ಜಿಲ್ಲೆಯಲ್ಲೂ.........

ಶ್ರೀ ವಿ. ಎಂ. ಘಾಡಿ.—ನನಗೂ ಗೊತ್ತಿದೆ ನಿಮಗೆ ಏನು ತೊಂದರೆಯಾಗಿದೆ ಎಂದು. ನಿಮ್ಮ ರಾಮದುರ್ಗಕ್ಕೆ ನೆರೆಹಾವಳಿ ಬಂದಿಲ್ಲ. If I were a Lord, my bed would be ivory ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಉತ್ತರ ಕನ್ನಡ ಜಿಲ್ಲೆಯಲ್ಲಿ ೨೦೦ ಕಿಲೋ ಮೀಟರ್ ನಷ್ಟು

ಕರಾವಳಿ ಪ್ರದೇಶವಿದೆ. ಸೌತ್ ಕೆನರಾದಲ್ಲಿ ೧೪೦–೧೫೦ ಕಿಲೋ ಮೀಟರ್ಸ್ ನಷ್ಟು ಕರಾವಳಿ ಪ್ರದೇಶವಿದೆ. ಇಲ್ಲಿಗೆ ಯಾವವಿಧವಾದ ಶಾಶ್ವತವಾದ ಪರಿಹಾರ ಕ್ರಮವನ್ನೂ ತೆಗೆದುಕೊಂಡಿಲ್ಲ. "ಸೀ ಎರೋಷನ್ ಬೋರ್ಡ್" ಟೆಕ್ನಿಕಲ್ ಸ್ಟಡಿಯನ್ನು ಮಾಡುತ್ತಿದ್ದಾರೆಂದು ಹೇಳುತ್ತಿದ್ದೀರಿ. ಅದು ಆಗುವುದರಲ್ಲಿ ಎಲ್ಲ ಹಾಳಾಗಿ ಹೋಗುತ್ತದೆ. ಎಕ್ಸ್‌ಪರ್ಟ್ ಕಮಿಟಿ ಅಲ್ಲಿಗೆ ಹೋಗಿ ಸ್ಟಡಿಮಾಡಿ ಪೂರ್ಣ ವಿವರಗಳನ್ನು ಕೊಟ್ಟಮೇಲೆ ಆದಷ್ಟು ಜಾಗ್ರತೆಯಾಗಿ ಕೆಲಸಗಳನ್ನು ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕರಾವಳಿ ಪ್ರದೇಶದಲ್ಲಿ ಕಲ್ಲಿನ ಗೋಡೆಯನ್ನು ಕಟ್ಟಿದರೆ ಮುಂದೆ ಆಗುವ ಅನಾಹುತಗಳನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ "ತಾವು ಮನಸ್ಸುಮಾಡಿ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ಹೇಳುತ್ತೇನೆ.

ಎರಡನೆಯದಾಗಿ ಕರಾವಳಿ ಪ್ರದೇಶಗಳಲ್ಲಿರುವ ಗದ್ದೆಗಳಿಗೆ ಉಪ್ಪಿನ ನೀರು ನುಗ್ಗಿ ಬೆಳೆಗಳ ನಾಶವಾಗುವಂಥ ಪರಿಸ್ಥಿತಿಯಿರುತ್ತದೆ. ಇಂಥ ತೊಂದರೆಗಳಿಗೆ ತುತ್ತಾದ ರೈತನಿಗೆ ಗೊಬ್ಬರ, ಬೀಜ ಇವೇ ಮುಂತಾದ ಸವಲತ್ತುಗಳನ್ನು ಒದಗಿಸಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಕರಾವಳಿ ಪ್ರದೇಶಗಳಲ್ಲಿರುವ ಮೀನುಗಾರರ ಗುಡಿಸಲುಗಳು ನಾಶವಾಗಿ ಹೋಗಿರುತ್ತದೆ. ಬೆಲೆ ಬಾಳುವಂಥ ಅಡಿಕೆ, ತೆಂಗಿನಮರಗಳು ನಾಶವಾಗಿ ಹೋಗಿರುತ್ತದೆ. ಆದ್ದರಿಂದ ಸರ್ಕಾರದವರು ಹೆಚ್ಚಿನ ಸಹಾನುಭೂತಿಯನ್ನು ತೋರಿಸಬೇಕು. ಉತ್ತರ ಕನ್ನಡ ಜಿಲ್ಲೆಗೆ ಮಲತಾಯಿ ಧೋರಣೆಯನ್ನು ಮಾಡುತ್ತಿರುವುದು ಕಂಡುಬರುತ್ತಿದೆ, ಎಲ್ಲ ಮಂತ್ರಿಗಳು ಬರುತ್ತಾರೆ ಅಲ್ಲಿಯ ಸಿರಿಸಂಪತ್ತುಗಳನ್ನು ಹೊಗಳುತ್ತಾರೆ ಆದರೆ ಕೊಡುವುದು ಏನು ಇರುವುದಿಲ್ಲ. ಅಲ್ಲಿರುವ ಎಲ್ಲ ಉತ್ಪನ್ನಗಳನ್ನು ತೆಗೆದು ಕೊಂಡು ಹೋಗುತ್ತಾರೆ. "ಹೊಗಳಿ ಹೊಗಳಿ ಎನ್ನ ಹೊನ್ನ ಶೂಲಕ್ಕೆ ಏರಿಸಿದರಯ್ಯ" ಎಂದು ಸರ್ವಜ್ಞನು ಹೇಳಿದಂತಾಗಿರುತ್ತದೆ ಬ್ರಿಟೀಷರ ಕಾಲದಲ್ಲಿ ಈ ಪ್ರದೇಶದಲ್ಲಿ ಉತ್ಪತ್ತಿಯಾಗುತ್ತಿದ್ದದರಲ್ಲಿ ಎರಡು ಪರ್ಸೆಂಟ್ ಕೊಡುತ್ತಿದ್ದರು. ಈವತ್ತಿನ ದಿವಸದವರೆಗೂ ೧೯–೨೦ ಕೋಟಿ ರೂಪಾಯಿಗಳಷ್ಟು ಉತ್ಪತ್ತಿಯನ್ನು ನಮ್ಮ ರಾಜ್ಯಕ್ಕೆ ಕೊಡುತ್ತಿದ್ದರೂ ಸಹ ಅಲ್ಲದೇ ಕೇವಲ ೨೦ ಲಕ್ಷ ರೂಪಾಯಿಗಳನ್ನು ಕೊಡುತ್ತಿರುವುದನ್ನು ನೋಡಿದರೆ ಇದು ಏನೇನು ಸಾಲದು ಎಂದು ಹೇಳಬೇಕಾಗುತ್ತದೆ. ಹಿಂದೆ ಬ್ರಿಟೀಷರು ಡೆವಲಪ್‌ಮೆಂಟ್ಸ್‌ಗಾಗಿ ಕೊಡುತ್ತಿದ್ದ ಎರಡು ಪರ್ಸೆಂಟ್ ನಷ್ಟನ್ನಾದರೂ ಕೊಟ್ಟರೆ ಸಾಕು ಎಂದು ಹೇಳುತ್ತೇನೆ. ವಿಶೇಷವಾಗಿ ಮಳೆಯ ಹಾವಳಿ ಮತ್ತು ನೆರೆಯ ಹಾವಳಿಯಿಂದ ಬೆಂಗಳೂರು ನಗರದಿಂದ ಬಸ್‌ಗಳೂ ಕೂಡ ಹೋಗದಂತೆ ರಸ್ತೆಗಳೆಲ್ಲ ಹಾಳಾಗಿ ಹೋಗಿರುತ್ತವೆ. ಆದ್ದರಿಂದ ಮೊಟ್ಟ ಮೊದಲನೆಯದಾಗಿ ಕರಾವಳಿ ಪ್ರದೇಶಗಳಿಗೆ ಲಕ್ಷ್ಯ ಕೊಡಬೇಕೆಂದು ತಮ್ಮ ಮುಖೇನ ಸರ್ಕಾರವನ್ನು ಒತ್ತಾಯಪಡಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ ಬಿ. ಶಿವಯ್ಯ (ನಂಜನಗೂಡು).—ಸನ್ಮಾನ್ಯ ಅಧ್ಯಕ್ಷರೇ, ಮೈಸೂರು ಜಿಲ್ಲೆಯಲ್ಲಿ ಎರಡು ಪ್ರಮುಖವಾದ ಜೀವನದಿಗಳು ದೊಡ್ಡ ಪ್ರಮಾಣದಲ್ಲಿ ಹರಿಯುತ್ತಿರುವುದು ತಮಗೆಲ್ಲ ತಿಳಿದಿರುತ್ತದೆ. ಎಂಟು ದಿವಸಗಳಿಂದ ಹೆಚ್ಚಿನ ಪ್ರವಾಹದಿಂದಾಗಿ ಆದರ ಅಡಿಯಲ್ಲಿ ಬರತಕ್ಕಂಥ ಎಲ್ಲ ತಾಲ್ಲೂಕುಗಳ ಹಳ್ಳಿಗಳಿಗೆ ನೀರು ನುಗ್ಗಿ ಹೆಚ್ಚಿನ ಹಾನಿಯುಂಟಾಗಿರುತ್ತದೆ. ಸುಮಾರು ೪೦–೫೦ ಗ್ರಾಮಗಳು ಈ ನದಿಗಳ ಪ್ರವಾಹದಿಂದ ಜನ ಜಾನುವಾರುಗಳು ತೊಂದರೆಗೆ ಒಳಗಾಗಿರುತ್ತಾರೆ. ಆಹಾರ ಪದಾರ್ಥಗಳ ಸಾಗಾಣಿಕೆಗೂ ತೊಂದರೆಯಾಗಿರುತ್ತದೆ. ದನಕರುಗಳಿಗೆ ಹುಲ್ಲು ಮೇವು ಇಲ್ಲದಂತಾಗಿರುತ್ತದೆ. ತಾತ್ಕಾಲಿಕವಾಗಿ ಉಂಟಾಗಿರತಕ್ಕಂಥ ಈ ತೊಂದರೆಯನ್ನು ಪರಿಹರಿಸಲು ಸರ್ಕಾರದವರು ಹೆಚ್ಚಿನ ಗಮನವನ್ನು ಕೊಡಬೇಕಾಗಿರುತ್ತದೆ. ಇಂಥ ಸಂದರ್ಭಗಳಲ್ಲಿ ತೊಂದರೆ ಇಲ್ಲದವರೂ ಸಹಾಯ ಸೌಕರ್ಯಗಳನ್ನು ಪಡೆಯುತಕ್ಕಂಥದ್ದು ಸಾಮಾನ್ಯವಾಗಿ ನಡೆದುಕೊಂಡು ಬಂದಿರುತ್ತದೆ. ಸರ್ಕಾರದವರು ಇದನ್ನು ಗಮನಿಸಿ ಯಾರು ನಿಜವಾಗಿಯೂ ತೊಂದರೆಗೆ ಒಳಗಾಗಿರುತ್ತಾರೊ ಅಂಥವರನ್ನು ಗುರುತಿಸುವ ಕಾರ್ಯ ಮೊದಲು ಮಾಡಬೇಕು. ಆ ರೀತಿಯಾಗಿ ಗುರ್ತಿಸುವಾಗ ಅಲ್ಲಿಯ ಸ್ಥಳೀಯ ಮುಖಂಡರುಗಳು, ತಾಲ್ಲೂಕು ಬೋರ್ಡ್ ಸದಸ್ಯರು ಮತ್ತು ಅಧ್ಯಕ್ಷರುಗಳು, ಇನ್ನೂ ಮುಂತಾದವರನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಂಡು ಯಾರು ನಿಜವಾಗಿಯೂ ತೊಂದರೆಯಲ್ಲಿದ್ದಾರೆಂಬುದನ್ನು ನೋಡಿ ಅವರಿಗೆ ತಾತ್ಕಾಲಿಕ ಪರಿಹಾರವನ್ನು ಒದಗಿಸಿಕೊಡಬೇಕು.

ಇನ್ನು ಎರಡನೆಯದಾಗಿ, ಇಂಥ ಪರಿಸ್ಥಿತಿಗಳನ್ನು ಗಮನಿಸಿ ಶಾಶ್ವತವಾದ ರೀತಿಯಲ್ಲಿ ಅವುಗಳನ್ನು ತಡೆಗಟ್ಟಬೇಕು. ಏಕೆಂದರೆ, ಇಂಥ ಘಟನೆಗಳು ಪದೇ ಪದೇ ಆಗುತ್ತಲೇ ಇರುತ್ತವೆ. ಈ ನೆರೆ ಹಾವಳಿ

ಗಳನ್ನು ನಾವು ಇದೇರೀತಿ ಬಿಡುತ್ತಾ ಹೋದರೆ ಆಗಿಂದಾಗ್ಗೆ ಉಂಟಾಗುವ ಅತಿವೃಷ್ಟಿ, ಅನಾವೃಷ್ಟಿಗಳಿಗೆ ತಾತ್ಕಾಲಿಕ ಪರಿಹಾರಗಳನ್ನು ಕೊಡುತ್ತಲೇ ಇರಬೇಕಾಗುತ್ತದೆ. ಈ ಅನಾಹುತಗಳು ಪದೇ ಪದೇ ಸಂಭವಿಸುತ್ತಿರುವುದು, ನಾವು ಅದನ್ನು ಈ ಮನೆಯಲ್ಲಿ ಚರ್ಚೆಗೆ ತರುವುದು, ಆ ಮೇಲೆ ತಾತ್ಕಾಲಿಕ ಪರಿಹಾರ ಒದಗಿಸುವುದು ಇದು ತಪ್ಪುವುದಿಲ್ಲ. ಆದ್ದರಿಂದ ಸರ್ಕಾರದವರು ಎಲ್ಲೆಲ್ಲಿ ಇಂಥ ನೆರೆಹಾವಳಿಗಳು ಆಗಿಂದಾಗ್ಗೆ ಆಗುತ್ತಿರುತ್ತವೆ ಎಂಬುದನ್ನು ಗುರ್ತಿಸಿ ಅಲ್ಲಿ ಶಾಶ್ವತ ಪರಿಹಾರ ಕಾರ್ಯಗಳನ್ನು ಕೈಗೊಳ್ಳಬೇಕು ಮತ್ತು ಈಗ ಎಲ್ಲೆಲ್ಲಿ ನೆರೆಹಾವಳಿ ಬಂದಿದೆ ಅಲ್ಲೆಲ್ಲಾ ಅತಿ ಶೀಘ್ರವಾಗಿ, ವಾರ್ ಫುಟಿಂಗ್ ರೀತಿಯಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಈ ದಿವಸ ಮಧ್ಯಾಹ್ನ ಮತ್ತು ನಾಳೆ ಈ ಸದನಕ್ಕೆ ಬಿಡುವು ಇರುವುದರಿಂದ ಆಯಾಯ ಜಿಲ್ಲೆಗಳಿಗೆ ಸಂಬಂಧಪಟ್ಟ ಶಾಸಕರು ಹಾಗೂ ಸಚಿವರುಗಳು ಹೋಗಿ ತೊಂದರೆಗೆ ಒಳಗಾಗಿರುವವರಿಗೆ ಪರಿಹಾರವನ್ನು ಒದಗಿಸಿಕೊಟ್ಟು ಬರಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ.

† ಶ್ರೀ ಸಿ. ಎ. ಚಂದ್ರೇಗೌಡ (ಚಿಕ್ಕಮಗಳೂರು).—ಸನ್ಮಾನ್ಯ ಅಧ್ಯಕ್ಷರೇ, ಮಲೆನಾಡಿನ, ಅತಿ ಮೂಲೆಯಲ್ಲಿರುವ, ಅತಿ ಹೆಚ್ಚಿನ ಮಳೆ ಬೀಳತಕ್ಕ ಜಿಲ್ಲೆ ಎಂದರೆ ಚಿಕ್ಕಮಗಳೂರು. ಇತ್ತೀಚೆಗೆ ಬಿದ್ದ ಮಳೆಯಿಂದಾಗಿ ಈ ಚಿಕ್ಕಮಗಳೂರು ಜಿಲ್ಲೆ ಬಹಳ ಅನಾಹುತಕ್ಕೆ ಈಡಾಗಿದೆ. ಆದರೆ ನಾನು ಪತ್ರಿಕೆಯಲ್ಲಿ ನೋಡಿದಾಗ ಬರೀ ದಕ್ಷಿಣ ಕನ್ನಡ ಜಿಲ್ಲೆ, ಮತ್ತಿತರ ಕೆಲವು ಪ್ರದೇಶಗಳಲ್ಲಿ ಮಾತ್ರ ಮಳೆಯಾಗಿದೆ ಎಂದು ಬಂದಿದೆ. ಚಿಕ್ಕಮಗಳೂರು ಜಿಲ್ಲೆಯ ವಿಚಾರ ಪೇಪರ್‌ನಲ್ಲೇ ಇರಲಿಲ್ಲ. ಇತ್ತೀಚೆಗೆ ನಮ್ಮ ಮಾನ್ಯ ಸಚಿವರಾದ ಶ್ರೀಮಾನ್ ಬೇಗಾನೆ ರಾಮಯ್ಯನವರು ಪ್ರವಾಸ ಹೋಗಿದ್ದಾಗ ಪ್ರಾಣಾಪಾಯದಿಂದ ಪಾರಾಗಿ ಬಂದಿದ್ದಾರೆಂದು ಪತ್ರಿಕೆಗಳಲ್ಲಿ ಬಂದಿದೆ. ಅವರು ನೆರೆಗೆ ಸಿಕ್ಕಿ ಹೋಗಬೇಕಾಗಿತ್ತು. ಆದರೆ ಪ್ರಾಣಾಪಾಯದಿಂದ ಪಾರಾಗಿ ಬಂದಿದ್ದಾರೆ. ಚಿಕ್ಕಮಗಳೂರು, ಶೃಂಗೇರಿ, ಮೂಡಿಗೆರೆ, ಕೊಪ್ಪ ಈ ೪ ಊರುಗಳಲ್ಲಿ ೬-೭ ಅಂಗುಲ ಮಳೆ ಆಗುವ ಕಡೆ ಕೇವಲ ೨೪ ಗಂಟೆಗಳಲ್ಲಿ ೨೮ ಅಂಗುಲ ಮಳೆ ಆಗಿದೆ. ಅಂದಮೇಲೆ ಅಲ್ಲಿರತಕ್ಕ ಜನರ ಗತಿ ಏನಾಗಿರಬಹುದು ? ಅವರು ಹೇಗೆ ಜೀವನ ನಡೆಸುತ್ತಿರಬಹುದು ? ಎಂಬುದನ್ನು ನಾವು ಯೋಚನೆ ಮಾಡಬೇಕು. ಅಲ್ಲಿ ಅನೇಕ ಮನೆಗಳು ಬಿದ್ದು ಹೋಗಿವೆ ; ಜನತಾ ಮನೆಗಳಂತೂ ಇಲ್ಲವೇ ಇಲ್ಲ. ಜನಗಳ ಸ್ಥಿತಿ ಹೇಳುವುದಕ್ಕಾಗುವುದಿಲ್ಲ. ಇಷ್ಟೆಲ್ಲಾ ಆಗಿದ್ದರೂ ಕೂಡ ಪತ್ರಿಕೆಗಳಲ್ಲಿ ಕೇವಲ ೪ ಮನೆಗಳು ಮಾತ್ರ ಬಿದ್ದುಹೋಗಿವೆ ಎಂದು ಬಂದಿದೆ. ನಾನು ಆ ಪ್ರದೇಶಗಳಿಗೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಕೆಲವು ಕಡೆ ಜೀಪಿನಲ್ಲೇ ಹೋಗಬೇಕಾಯಿತು. ಅಲ್ಲಿನ ರಸ್ತೆಗಳ ಸ್ಥಿತಿ ಹೇಳುವುದಕ್ಕಾಗುವುದಿಲ್ಲ. ರಸ್ತೆಗಳಲ್ಲೆಲ್ಲಾ ಕೊರಕಲು ಬಿದ್ದಿವೆ. ಒಂದು ಹಿಡಿ ಜೋಳ ಕೂಡ ಸಿಕ್ಕುವುದಿಲ್ಲ. ಎಲ್ಲಾ ಕೊಚ್ಚಿ ಹೋಗಿವೆ ಚರಂಡಿಗಳೆಲ್ಲಾ ಮುಚ್ಚಿ ಹೋಗಿವೆ ; ಕಲ್ವರ್ಟ್ಸ್ ಮುರಿದು ಬಿದ್ದಿವೆ, ಇನ್ನೂ ಅನೇಕ ರೀತಿಯಲ್ಲಿ ಅಸ್ತವ್ಯಸ್ತತೆ ಉಂಟಾಗಿದ್ದು ಸಾರಿಗೆ ಸಂಪರ್ಕ ಕೂಡ ನಿಂತು ಹೋಗಿದೆ. ೨೦–೩೦ ಲಕ್ಷ ರೂಪಾಯಿಗಳನ್ನು ಫ್ಲಡ್ ರಿಲೀಫ್ ವರ್ಕ್ಸ್‌ಗೋಸ್ಕರ ಪ್ರತಿವರ್ಷವೂ ಖರ್ಚು ಮಾಡುವ ಬದಲು ಮಾನ್ಯ ಸದಸ್ಯರಾದ ಶ್ರೀಮಾನ್ ಕೊಡಗಿಯವರು ಹೇಳಿದಂತೆ ಯಾವ ಯಾವ ಪ್ರದೇಶಗಳಲ್ಲಿ ಇಂಥ ಭೀಕರ ಪರಿಸ್ಥಿತಿಗಳು ಆಗಿಂದಾಗ್ಗೆ ಉಂಟಾಗುತ್ತಿರುತ್ತವೆ, ಅಂಥ ಕಡೆಗಳಲ್ಲಿ ೫ ವರ್ಷಗಳಲ್ಲಿ ಮಾಡತಕ್ಕ ಕೆಲಸವನ್ನು ಒಂದೇ ವರ್ಷದಲ್ಲಿ ಮಾಡಿ ಮುಗಿಸುವುದಾದರೆ ಒಂದು ರೀತಿಯ ಶಾಶ್ವತ ಪರಿಹಾರವನ್ನು ಒದಗಿಸಿದಂತಾಗುತ್ತದೆ. ಮಾನ್ಯ ಅಧ್ಯಕ್ಷರೆ, ನೆರೆ ಹಾವಳಿ ಪ್ರದೇಶಗಳಲ್ಲಿ ಪರಿಹಾರ ಕಾಂಗಾರಿಗಳನ್ನು ತೆಗೆದುಕೊಳ್ಳುವ ಬದಲು ಇಲ್ಲಿನ ಮಂತ್ರಿಗಳ ಮನೆಗಳಿಗೆ, ದೊಡ್ಡ ದೊಡ್ಡ ಅಧಿಕಾರಿಗಳ ಮನೆಗಳಿಗೆ ರಿಪೇರಿ ಮಾಡಿಸುವುದು, ಅರ್ಧ ಅಡಿ ಕಾಂಕ್ರೀಟ್ ಹಾಕಿಸುವುದು ಮಾಡುತ್ತಿದ್ದಾರೆ. ಆದರೆ ಅದೇ ಹಳ್ಳಿಗಳ ಕಡೆ ಹೋಗಿ ನೋಡಿದರೆ ರಸ್ತೆಗಳಿಗೆ ಸರಿಯಾಗಿ ಜೆಲ್ಲಿ ಹಾಕಿರುವುದಿಲ್ಲ ; ಕಾಂಕ್ರೀಟಂತೂ ಇಲ್ಲವೇ ಇಲ್ಲ. ಹಳ್ಳಿಗಳ ಕಡೆ ಪ್ರತಿವರ್ಷವೂ ರಸ್ತೆಗಳನ್ನು ರಿಪೇರಿ ಮಾಡಿಸುತ್ತಲೇ ಇರುತ್ತಾರೆ, ಆದರೆ ಕೇವಲ ೬ ತಿಂಗಳೊಳಗೆ ಆ ರಸ್ತೆಗಳೆಲ್ಲಾ ಕೊಚ್ಚಿ ಹೋಗುತ್ತವೆ. ನಾನು ಎಷ್ಟೋ ಸಾರಿ ಸರ್ಕಾರದವರಿಗೆ ಹೇಳಿದ್ದೇನೆ, ರಸ್ತೆಗಳಿಗೆ ನೀವು ಕಾಂಕ್ರೀಟ್ ಹಾಕಿಸುವುದು ಬೇಡ, ಟಾರ್‌ನಾದರೂ ಹಾಕಿಸಿ ಎಂದು. ಇವರು ಅದನ್ನೂ ಮಾಡುತ್ತಿಲ್ಲ, ಆದ್ದರಿಂದ ನಾನು ಸರ್ಕಾರದ ಗಮನಕ್ಕೆ ತರುವುದೇನೆಂದರೆ, ಮಲೆನಾಡು ಪ್ರದೇಶದಲ್ಲಿ ಖಾಯಂ ಪರಿಹಾರ ಕಾಂಗಾರಿಗಳನ್ನು ತೆಗೆದುಕೊಳ್ಳಬೇಕು. ಏಕೆಂದರೆ ಬಯಲು ಸೀಮೆಯಲ್ಲಿ ೨೦–೩೦ ಅಂಗುಲ ಮಳೆಯಾದರೆ ನಮ್ಮ ಮಲೆನಾಡು ಭಾಗದಲ್ಲಿ ೨೦೦–೩೦೦ ಅಂಗುಲ ಮಳೆಯಾಗುತ್ತದೆ. ಹೆಚ್ಚು ಮಳೆಬರತಕ್ಕ ಪ್ರದೇಶಗಳಿಗೆ ಎಷ್ಟು ಹಣವನ್ನು ಖರ್ಚು ಮಾಡುತ್ತೀರೋ, ಅಷ್ಟೇ ಹಣವನ್ನು ಮಳೆಯಾಗದ ಪ್ರದೇಶಗಳಿಗೂ ಖರ್ಚು ಮಾಡುತ್ತಿದ್ದೀರಿ, ಇದು ಸರಿಯೇ ? ಹಸಿದವರಿಗೆ ಊಟ ಹಾಕಬೇಕೇ

ಹೊರತು ಹಸಿಯುದಿದ್ದವರಿಗೂ ಊಟ ಹಾಕುವುದು ಸರಿಯಲ್ಲ. ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಎಲ್ಲೆಲ್ಲಿ ಪರಿಹಾರ ಕಾಂಗಾರಿಗಳ ಅವಶ್ಯಕತೆ ಇದೆ ಎಂಬುದನ್ನು ನೋಡಿ ಮಾಡಬೇಕು. ನಮ್ಮ ಕಡೆ ಜನತಾ ಮನೆಗಳು ಬಿದ್ದು ಹೋಗಿವೆ, ಆ ಜನಗಳಿಗೆ ನಿಲ್ಲಲು ನೆಲೆಯಿಲ್ಲ, ಹೆಂಚುಗಳನ್ನೆಲ್ಲಾ ಗುಡ್ಡೆ ಹಾಕಿಕೊಂಡು ಕುಳಿತಿದ್ದಾರೆ, ಅವರಿಗೆ ಇನ್ನೂ ಮನೆಗಳನ್ನು ಕಟ್ಟಿಸಿಕೊಟ್ಟಿಲ್ಲ.

ಆದ್ದರಿಂದ ನಾನು ತಮ್ಮ ಮೂಲಕ ಸರ್ಕಾರದವರನ್ನು ಕೇಳಿಕೊಳ್ಳುವುದೇನೆಂದರೆ ಈಗ ನೆರೆ ಹಾವಳಿಗೆ ಈಡಾಗಿರತಕ್ಕವರಿಗೆ ತಕ್ಷಣ ಪರಿಹಾರ ಕೊಡುವುದಲ್ಲದೆ, ಶಾಶ್ವತ ಪರಿಹಾರಗಳನ್ನೂ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಆರ್. ಎಸ್. ಪಾಟೀಲ್ (ರಾಮದುರ್ಗ). – ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀಮಾನ್ ಭಾಸ್ಕರ ಶೆಟ್ಟಿಯವರು ಭಾಷಣ ಮಾಡುವಾಗ ಬಯಲು ಸೀಮೆಯಲ್ಲಿ ಭಾರೀ ಮಳೆ ಆಗಿರುವುದು ಒಂದು ಶುಭ ಸೂಚನೆ ಎಂದು ಹೇಳಿದರು. ಸ್ವಲ್ಪಮಟ್ಟಿಗೆ ಅದು ನಿಜ ಹೌದು. ಪ್ರತಿ ವರ್ಷವೂ ನಾವು ಕ್ಷಾಮವನ್ನು ಎದುರಿಸುತ್ತಿರುತ್ತೇವೆ. ನಮಗೆ ಮಳೆಯಾದರೂ ಹದವಾಗಿ ಆದರೆ ಸಾಕು. ನಮ್ಮ ಕಡೆ ಹೇಳುತ್ತಾರೆ. ''ರೋಹಿಣಿ ಮಳೆಯಾದರೆ ಓಣಿ ತುಂಬಾ ಜೋಳ'' ಎಂದು ಈ ವರ್ಷ ನಾವು ಅಸಾಧಾರಣ ಪರಿಸ್ಥಿತಿಯನ್ನು ಎದುರಿಸುತ್ತಿದ್ದೇವೆ. ಹೇಗೆಂದರೆ ನಮಗೆ ಎಷ್ಟು ಮಳೆ ಬೇಕೋ ಅದಕ್ಕಿಂತ ಹೆಚ್ಚಾಗಿ ಈಸಾರಿ ಮಳೆಯಾಗಿದೆ. ಮಲೆನಾಡಿನಲ್ಲಿ ಜಾಸ್ತಿ ಮಳೆ ಆಗಿದೆ ಆದರೆ ಅದರಲ್ಲಿ ನಾವು ಕೊಚ್ಚಿಕೊಂಡು ಹೋಗುತ್ತೇವೆ. ಅಂದರೆ ಒಂದುಕಡೆ ನಮಗೆ ಮಳೆ ಬರದೆ ಕ್ಷಾಮ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ, ಇನ್ನೊಂದು ಕಡೆ ಮಲೆನಾಡಿನಲ್ಲಿ ಜಾಸ್ತಿ ಮಳೆಯಾದರೆ ಆಗಲೂ ನಾವು ಆ ನೀರಿನಿಂದ ತೊಂದರೆಯನ್ನು ಎದುರಿಸಬೇಕಾಗುತ್ತದೆ. ಮಲಪ್ರಭ, ಘಟಪ್ರಭ, ದೂದಗಂಗ, ಮಾದಗಂಗ. ಹಿರಣ್ಯಕೇಶಿ ಈ ಐದು ನದಿಗಳು ತುಂಬಿ ಹರಿಯುತ್ತಿವೆ. ಅಲ್ಲಿ ಸಾರಿಗೆ ಸಂಪರ್ಕ ಸಂಪೂರ್ಣವಾಗಿ ಅಸ್ತವ್ಯಸ್ತವಾಗಿದೆ. ಈ ನದಿಗಳಲ್ಲಿ ಹರಿಯುವ ಪ್ರವಾಹವನ್ನು ತಡೆದು ನೀರನ್ನು ತಡೆಗಟ್ಟುವ ಸಲುವಾಗಿ ರಾಮದುರ್ಗದ ಸೌಂದತ್ತಿ ಹತ್ತಿರ ಅಣೆಕಟ್ಟನ್ನು ಕಟ್ಟಲಾಗಿದೆ. ಇದರಲ್ಲಿ ಹೆಚ್ಚು ಪ್ರವಾಹ ಬಂದಾಗ ೫೦–೬೦ ಕ್ಯೂಸೆಕ್ಸ್ ನೀರನ್ನು ಬಿಟ್ಟರೆ ಆ ಅಣೆಕಟ್ಟಿನ ಕೆಳಭಾಗದಲ್ಲಿರುವವರ ಗತಿ ಏನಾಗಬಹುದು ನೀವು ರಾತ್ರಿ ೧೦ ಗಂಟೆಗೆ ಬಂದು ಈ ಜಾಗವನ್ನು ತಕ್ಷಣ ಖಾಲಿ ಮಾಡಬೇಕು ಎಂದು ಹೇಳಿದರೆ. ಅಷ್ಟು ಹೊತ್ತಿನಲ್ಲಿ ಆ ಜನ ಮಕ್ಕಳು ಮರಿಗಳನ್ನು ಕಟ್ಟಿಕೊಂಡು ಎಲ್ಲಿಗೆ ಓಡಿಹೋಗಬೇಕು? ಈಗ ೧೩ ಹಳ್ಳಿಗಳಲ್ಲಿ ವೀಕ್ ಪಾಯಿಂಟ್ಸ್‌ನ್ನು ಗಾರ್ಡ್ ಮಾಡುವುದೇ ನಮ್ಮ ಕೆಲಸವಾಗಿದೆ. ಇಲ್ಲಿ ಸುಮಾರು ೨೦ ಸಾವಿರ ಕೃಷಿಕರಿದ್ದಾರೆ. ನೀವು ಮೇಲಿನಿಂದ ೫೦–೬೦ ಸಾವಿರ ಕ್ಯೂಸೆಕ್ಸ್ ನೀರನ್ನು ಒಟ್ಟು ಬಿಟ್ಟರೆ ಅವರ ಗತಿ ಏನು? ಅವರು ಬೆಳೆದಿರತಕ್ಕ ಕಬ್ಬು, ಹತ್ತಿ. ಶೇಂಗಾ ಇವುಗಳ ಗತಿ ಏನು ? ಹಂಪಿ. ಚಿಕ್ಕಮೂಲಂಗಿ, ದೊಡ್ಡ ಮೂಲಂಗಿ ಈ ಹಳ್ಳಿಗಳು ನದಿಯ ದಂಡೆಯ ಮೇಲಿರತಕ್ಕವು. ಇಲ್ಲಿನ ಜನಗಳ ಗತಿ ಏನು ? ಅಲ್ಲಿ ಪ್ರವಾಹ ನುಗ್ಗಿ ಜನಗಳು, ಮನೆಮಠಗಳು ಎಲ್ಲಾ ಕೊಚ್ಚಿಹೋದಮೇಲೆ ನಿಮಗೆ ಸುದ್ದಿ ಬರುತ್ತದೆ. ಅದನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದಾದಮೇಲೆ ನಿಮ್ಮ ಅಧಿಕಾರಿಗಳನ್ನು ಕಳಿಸಿ ನೋಡಿಕೊಂಡು ಬನ್ನಿ ಎಂದು ಹೇಳುತ್ತೀರಿ. ಅವರು ಹೋಗಿ ನೋಡಿಕೊಂಡು ಬಂದು ನಿಮಗೆ ರಿಪೋರ್ಟ್ ಕೊಡುವ ಹೊತ್ತಿಗೆ ಒಂದುವಾರ ಹದಿನೈದು ದಿವಸ ಆಗಿಹೋಗಿ ಆ ಪ್ರದೇಶದಲ್ಲಿ ಪ್ರವಾಹ ಇಳಿದು ಹೋಗಿರುತ್ತದೆ. ಈ ರೀತಿ ತೊಂದರೆಗೆ ಒಳಗಾದವರಿಗೆ ಪರಿಹಾರವನ್ನು ಕೊಡಿಸಬೇಕೆಂದು ೨ ವರ್ಷಗಳಿಂದ ಪ್ರಯತ್ನ ಮಾಡಿದರೂ ಅದು ಸಾಧ್ಯವಾಗಿಲ್ಲ. ಕಬ್ಬಿನ ಬೆಳೆಗೆ ಹಾನಿಯಾಗಿದೆ. ಸುಮಾರು ೫ ವರ್ಷಗಳಲ್ಲಿ ಕನಿಷ್ಟ ಪಕ್ಷ ೩ ವರ್ಷಗಳಾದರೂ ಇಂಥಾ ತೊಂದರೆಯನ್ನು ಅನುಭವಿಸಲೇ ಬೇಕಾಗಿದೆ. ಇದರಲ್ಲಿ ಒಂದು ಎರಡುವರ್ಷಗಳು ಅರ್ಧ ಕರ್ದ ಬೆಳೆಯಾಗುತ್ತದೆ. ಜೊತೆಗೆ ಗೊಬ್ಬರದ ಬೆಲೆ ವಿದ್ಯುಚ್ಛಕ್ತಿಯ ಚಾರ್ಜು ಮತ್ತು ದಿನನಿತ್ಯದ ಕೂಲಿಕಾರರ ಕೂಲಿ ಇದೆಲ್ಲವನ್ನು ಲೆಕ್ಕಹಾಕಿ ಬೆಳೆದರೆ, ಅವರು ತಿನ್ನಲಿಕ್ಕೆ ಕೂಡ ಸಾಕಾಗುವುದಿಲ್ಲ, ಆ ರೀತಿಯಾಗಿದೆ. ಆದ್ದರಿಂದ ಅವರು ಬದುಕಬೇಕು ಎಂದರೆ. ಸರ್ಕಾರದ ವತಿಯಿಂದ ಏನಾದರೂ ಆಶ್ವಾಸನೆ ಇದ್ದರೆ ಮಾತ್ರ ಅದರ ಮೇಲೆಯೇ ಬದುಕಬೇಕಾಗುತ್ತದೆ. ಇದನ್ನು ನಾವು ಯಾರಿಗೆ ಹೇಳಬೇಕು? ಇದರ ಜೊತೆಗೆ ನಿಸರ್ಗದ ಹಾವಳಿ ಬೇರೆ, ಅವರನ್ನೆಲ್ಲಾ ನಿಸರ್ಗಕ್ಕೆ ಬಿಟ್ಟಿದ್ದೇವೆಂದು ಹೇಳಿದರೆ ಇದರಲ್ಲಿ ಏನು ಅರ್ಥವಿದೆ. ತಾವು ಏನಾದರೂ ಮಾಡುವುದು ಇದ್ದರೆ ಒಂದು ಶಾಶ್ವತವಾದ ಪರಿಹಾರವನ್ನು ಆ ಭಾಗಕ್ಕೆ ಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ಅಲ್ಲಿ ಹೆಚ್ಚು ಮಳೆ ಬಿದ್ದು ಇವತ್ತು ಕಬ್ಬು ಎಲ್ಲಾ ಕೊಚ್ಚಿಕೊಂಡು ಹೋಗಿದೆ. ಇನ್ನು ಮಲಪ್ರಭಾದಿಂದ ನೀರನ್ನು ಹೆಚ್ಚಿಗೆ ಬಿಡುತ್ತಿದ್ದಾರೆ, ಅಲ್ಲಿ ಯಾರೂ ಇಂಜನಿಯರುಗಳು ಇರುವುದಿಲ್ಲ, ಅಲ್ಲಿ ಕೆಲಸಕ್ಕೆ ಬಾರದ ನೌಕರರನ್ನು ಇಟ್ಟಿ

ರುತ್ತಾರೆ. ಈಗ ಏನು ಮಹಾಪೂರ ಬಂದಿದೆ ಅದರಿಂದ ಆ ದುರ್ದೈವಿ ಜನರನ್ನು ದಯವಿಟ್ಟು ರಕ್ಷಣೆ ಮಾಡಿ. ಅವರಿಗೆ ಒಂದು ರಕ್ಷಣೆ ಮಾಡುವುದನ್ನು ತತ್‌ಕ್ಷಣ ಮಾಡಿ ಅವರು ಬದುಕಲಿಕ್ಕೆ ಒಂದು ಆಸೆ ಯನ್ನು ಕೊಡಬೇಕೆಂದು ಹೇಳಿ ಏನು ಎರಡು ವರ್ಷಕ್ಕೊಂದು ಬಾರಿ ಈ ಭರವನ್ನು ಎದುರಿಸುವ ಪರಿಸ್ಥಿತಿ ಯಿಂದ ತಪ್ಪಿಸಬೇಕೆಂದು ಸಭೆಯ ಮುಂದೆ ಸೂಚಿಸುತ್ತೇನೆ. ಈ ಪ್ರವಾಹದಿಂದ ಅವರಿಗೆ ಒಂದು ಶಾಶ್ವತ ಪರಿಹಾರ ಕೊಡಲಿಕ್ಕೆ ಸಾಧ್ಯವಾಗಿಲ್ಲ, ಜನ ಏನು ಕಂಗಾಲಾಗಿದ್ದಾರೆ ಅವರಿಗೆ ಬಹಳ ಕಷ್ಟವಾಗಿದೆ. ಕಂದಾಯ ಮಂತ್ರಿಗಳು ವ್ಯವಸಾಯಗಾರರ ಕುಟುಂಬದಿಂದ ಬಂದವರು. ಅವರಿಗೆ ಕಷ್ಟ ಗೊತ್ತಿದೆ. ಭವಣೆ ಗೊತ್ತಿದೆ. ಆದ್ದರಿಂದ ಈ ಮಾತನ್ನು ಹೇಳುತ್ತಿದ್ದೇನೆ.

ಇನ್ನು ಕೆಲವು ಜನತಾ ಮನೆಗಳನ್ನು ಕಟ್ಟಿದ್ದಾರೆ. ಅನೇಕ ವಿಧವಾದ ಅಗ್ರಿಕಲ್ಚರ್ ಲೋನ್‌ಗಳನ್ನು ಕೊಡುತ್ತಾರೆ. ಆದರೂ ಸಹ ಅವರ ಜೀವನದ ಹೊಣೆ ಬಹಳ ತುರ್ತಾಗಿ ಬಗೆ ಹರಿಸಬೇಕು. ಆದ್ದರಿಂದ ಮಾನ್ಯ ಕಂದಾಯ ಮಂತ್ರಿಗಳು ಕೂಡಲೇ ಅವರಿಗೆ ರಕ್ಷಣೆ ಕೊಡುವಂಥ ಒಂದು ಭರವಸೆಯನ್ನು ಕೊಟ್ಟರೆ ಅವರು ಅದರ ಹಿನ್ನೆಲೆಯಲ್ಲಿ ಇನ್ನು ಕೆಲವು ದಿವಸಗಳು ಬದುಕುತ್ತಾರೆಂದು ಹೇಳ ಬಯಸುತ್ತೇನೆ. ಈಗಾಗಲೇ ಹತ್ತಾರು ವರ್ಷಗಳಿಂದ ಕೇವಲ ಆಶ್ವಾಸನೆಯ ಮೇಲೆ ಬದುಕಿಕೊಂಡು ಬರುತ್ತಿದ್ದಾರೆ ಆದ್ದ ರಿಂದ ಅವರು ಬದುಕಲಿಕ್ಕೆ ಅನುಕೂಲ ಮಾಡಿ ಕೊಡಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಶಿರ್ನಾಳಿ ಎಂ. ಚಂದ್ರಶೇಖರ್.—ಮಾನ್ಯ ಸ್ನೇಹಿತರಾದ ಶ್ರೀಮಾನ್ ಆರ್.ಎಸ್. ಪಾಟೀಲ್ ರವರು ಮಾತನಾಡುವಾಗ ನಾನು ಮಂತ್ರಿಗಳನ್ನು ಟೀಕೆ ಮಾಡಿದ ರೀತಿಯಲ್ಲಿ ಹೇಳಿದರು ಆದರೆ ಯಾರನ್ನೂ ಟೀಕೆ ಮಾಡುವ ಕೆಲಸಕ್ಕೆ ಹೋಗಿಲ್ಲ......

ಅಧ್ಯಕ್ಷರು.—ಮಾನ್ಯ ಚಂದ್ರಶೇಖರ್ ರವರು ದಯಮಾಡಿ ಕುಳಿತುಕೊಳ್ಳಿ ನೀವು ಹೇಳಿದ್ದನ್ನು ಅವರು ಏನು ಟೀಕೆ ಮಾಡಿದರು ಎಂದು ಹೇಳಲಿಲ್ಲ......

ಶ್ರೀ ಯು. ಟಿ. ಫರೀದ್.— ಮಾನ್ಯ ಅಧ್ಯಕ್ಷರೇ, ...

ಒಬ್ಬ ಸದಸ್ಯರು.—ನಮ್ಮ ಧಾರವಾಡ ಜಿಲ್ಲೆಯವರಿಗೆ ಅವಕಾಶವನ್ನೇ ಕೊಟ್ಟಿಲ್ಲ.

ಅಧ್ಯಕ್ಷರು.—ಎಲ್ಲರಿಗೂ ಅವಕಾಶ ಕೊಡಲಾಗುತ್ತದೆ. ದಯಮಾಡಿ ಅವರು ಮಾತನಾಡಲಿ, ಆಮೇಲೆ ನಿಮಗೂ ಅವಕಾಶ ಕೊಡುತ್ತೇನೆ.

ಮತ್ತೊಬ್ಬ ಸದಸ್ಯರು.—ಸ್ವಾಮಿ, ಈ ವಿಷಯದ ಬಗ್ಗೆ ನನ್ನ ಕ್ಷೇತ್ರದಲ್ಲಿ ಕೂಡ ಬಹಳ ತೊಂದರೆ ಯಾಗಿದೆ ದಯಮಾಡಿ ನನಗೆ ಅವಕಾಶ ಮಾಡಿಕೊಡಿ?

ಅಧ್ಯಕ್ಷರು.—ಆಗಲಿ, ತಮಗೂ ಅವಕಾಶ ಕೊಡೋಣ, ಇವತ್ತಿನ ಸಭೆಯ ಮುಂದಿರುವ ವಿಚಾರ ದಲ್ಲಿ ಎಲ್ಲರಿಗೂ ಅವಕಾಶ ಕೊಡಲಾಗುತ್ತದೆ. ಮೊದಲು ಮಾನ್ಯ ಫರೀದ್‌ರವರು ಮಾತನಾಡಲಿ

† ಶ್ರೀ ಯು. ಟಿ. ಫರೀದ್ (ಮಂಗಳೂರು).—ಮಾನ್ಯ ಅಧ್ಯಕ್ಷರೆ, ಇನ್ನು ಅನೇಕ ಮಾನ್ಯ ಸದಸ್ಯರು ಈ ವಿಷಯದಲ್ಲಿ ಹೆಚ್ಚಾಗಿ ಮಾತನಾಡಿದ್ದಾರೆ ಅದರಲ್ಲೂ ನಮ್ಮ ಜಿಲ್ಲೆಯವರಾದ ಮಾನ್ಯ ಭಾಸ್ಕರ್‌ಶೆಟ್ಟರು ಈಗಾಗಲೇ ಸಾಕಷ್ಟು ವಿಷಯಗಳನ್ನು ಪ್ರಸ್ತಾಪಮಾಡಿದ್ದಾರೆ. ಆದರೆ ನಮ್ಮ ಜಿಲ್ಲೆಯ ಬಗ್ಗೆ ಹೇಳುವುದಾದರೆ ಹೆಚ್ಚು ತೊಂದರೆ ಯಾಗಿರುವ ಗ್ರಾಮಗಳು ನನ್ನ ಕ್ಷೇತ್ರದಲ್ಲಿ ಇವೆ. ಅವುಗಳಿಗೆ ಜಾಸ್ತಿಯಾಗಿ ಹಾನಿಯಾಗಿದೆ. ಸುಮಾರು ೧೨ ಗ್ರಾಮಗಳನ್ನು ನೆರೆಯಲ್ಲಿ ಮುಳುಗಡೆ ಯಾಗಿವೆ, ೧೯೭೪ರಲ್ಲಿ ಇದೇ ರೀತಿಯಾಗಿತ್ತು. ಈ ಸಾರಿ ನಾನು ಅಸೆಂಬ್ಲಿ ಇದ್ದಕಾರಣ ಅಲ್ಲಿಗೆ ಹೋಗ ಲಿಕ್ಕೆ ಆಗಲಿಲ್ಲ, ಆದರೆ ಜಿಲ್ಲಾಧಿಕಾರಿಗಳ ಹತ್ತಿರ ಮತ್ತು ಸಂಬಂದಪಟ್ಟ ಅಧಿಕಾರಿಗಳ ಹತ್ತಿರ ಫೋನಿನಲ್ಲಿ ಮಾತನಾಡಿ ತಿಳಿದುಕೊಂಡಿದ್ದೇನೆ. ಜಿಲ್ಲಾಧಿಕಾರಿಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಸಾಕಷ್ಟು ಕೆಲಸಮಾಡಿದ್ದಾರೆ ಅದಕ್ಕೆ ತುಂಬ ಸಂತೋಷ, ಅವರಿಗೆ ಅಭಿನಂದನೆಗಳನ್ನು ಹೇಳಬೇಕಾಗುತ್ತದೆ. ಫೋನ್ ಮೂಲಕ ಮಾತನಾಡಿದಾಗ ಅಲ್ಲಿ ಏನೇನು ಆಗಿದೆ ಅದರ ವಿವರಗಳನ್ನೆಲ್ಲಾ ಕೊಟ್ಟರೇ. ಅಲ್ಲಿ ಕೆಲವು ಶಾಲೆಗಳಲ್ಲಿ ನೆರೆಗೆ ತುತ್ತಾದವರನ್ನು ಕ್ಯಾಂಪ್ ಮಾಡಿದ್ದೇವೆಂದು ತಿಳಿಸಿದರು. ಅವರಿಗೆ ಬೇಕಾ ದಂತಹ ಆಹಾರ ಮುಂತಾದ ಸೌಕರ್ಯಗಳನ್ನು ಒದಗಿಸಿದ್ದೇವೆಂದು ಹೇಳಿದರು ಅಲ್ಲಿ ಸುಮಾರು ೬೦ ಫ್ಯಾಮಿಲಿಯವರಿಗೆ ಅವಕಾಶ ಮಾಡಲಾಗಿದೆ ಎಂದು ತಿಳಿಯಿತು. ಅದೇ ಪ್ರಕಾರ ಕೂಲೂರು ಮತ್ತು ಇತರೆ ಕಡೆಗಳಲ್ಲಿ ಇದೇ ರೀತಿ ಮಾಡಿದ್ದಾರೆಂದು ತಿಳಿಯಿತು ಯಾರಿಗೆ ಏನು ನೆರವು ಬೇಕಿತ್ತು ಕೂಡಲೇ ಸರಿಯಾಗಿ ವ್ಯವಸ್ಥೆ ಮಾಡಲಿಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಅದರಲ್ಲೂ ನಮ್ಮ ಜಿಲ್ಲಾಧಿಕಾರಿಗಳು

ವ್ಯವಸ್ಥೆ ಮಾಡಿದ್ದಾರೆಂದು ತಿಳಿಯಿತು. ಆದರೆ ಇವರಿಗೆ ಒಂದು ಶಾಶ್ವತ ಪರಿಹಾರ ಮಾಡಲಿಕ್ಕೆ ಇಲ್ಲಿಯು ವರೆಗೆ ಸಾಧ್ಯವಾಗಿಲ್ಲವೆಂದು ವಿಷಾದವಾಗುತ್ತದೆ. ಮತ್ತೆ ನೀರು ಇಳಿಯುತ್ತಾ ಬಂದಿದೆ ಎಂದು ತಿಳಿಸಿದ್ದಾರೆ ಈ ನೀರಿನಿಂದ ಎಲ್ಲೆಲ್ಲಿ ಡ್ಯಾಮೇಜ್ ಆಗಿವೆ ಅಲ್ಲಿ ಮುಂದಿನ ಕಾರ್ಯಕ್ರಮ ತೆಗೆದು ಕೊಳ್ಳುತ್ತಾ ಇದ್ದಾರೆಂದು ಮತ್ತೆ ಇಡೀ ಜಿಲ್ಲೆಯ ಸರ್ವೆಯಾಗಬೇಕೆಂದು ನಾನು ಕೇಳಿಕೊಳ್ಳುತ್ತೇನೆ ಇನ್ನು ತೊಂದರೆಗೆ ಸಿಕ್ಕಿ ಕ್ಯಾಂಪುಗಳಲ್ಲಿ ಯಾರು ಇದ್ದಾರೆ ಅವರಿಗೆ ದುಡ್ಡಿನ ಅಡಚಣೆ ಬರದಂತೆ ನಮ್ಮ ಜಿಲ್ಲಾಧಿಕಾರಿಗಳು ಅದಕ್ಕೆ ಹಣ ಮಂಜೂರು ಮಾಡಿ ಈ ಒಂದು ಕಾರ್ಯವನ್ನು ಯಶಸ್ವಿಯಾಗಿ ಮಾಡು ತ್ತಾರೆಂದು ನನಗೆ ಗೊತ್ತಿದೆ. ೭೪ರಲ್ಲಿ ಯಾವರೀತಿ ತೊಂದರೆಯಾಗಿತ್ತು ಆಗ ಮನೆ ಕಟ್ಟಲಿಕ್ಕೆ ಒಂದೊಂದು ಕುಟುಂಬಕ್ಕೆ ಸುಮಾರು ೨-೩ ಸಾವಿರ ರೂಪಾಯಿ ಕೊಟ್ಟಿದ್ದರು, ಅದೇ ರೀತಿ ಈಗಲೂ ಅವರಿಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಕೊಟ್ಟರೆ ಮಾತ್ರ ಅವರು ಬದುಕಲಿಕ್ಕೆ ಸಾಧ್ಯ. ಏನು ಲೋನ್ ಮತ್ತು ಸಬ್ಸಿಡಿ ಕೊಟ್ಟಿದ್ದೀರಿ ಅದಕ್ಕಿಂಥ ಹೆಚ್ಚಿನ ಸಹಾಯ ಕೊಡಬೇಕಾಗುತ್ತದೆ. ಲೋನ್ ರಿಕವರಿ ಮಾಡುವುದಕ್ಕೆ ಬಂದ್ ಮಾಡಬೇಕು ಈಗ ಹೆಚ್ಚಿನ ರಿಯಾಯಿತಿ ಕೊಡಬೇಕು. ಇನ್ನು ಬೀಡಿ ಕಾರ್ಮಿಕರು ಏನು ಇದ್ದಾರೆ ಅವರಿಂದ ಯಾವ ಹಣವನ್ನು ವಸೂಲುಮಾಡಬಾರದೆಂದು ಸಲಹೆ ಮಾಡು ತ್ತೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ಯಾಡಿ ಫೀಲ್ಡ್ ಏನು ಇದೆ ಅಂಹತ ಕಡೆ ಹೆಚ್ಚಿನ ನೀರು ಹರಿದು ಹೋಗುತ್ತದೆ. ಅಲ್ಲಿ ಏನು ಬಂಡುಗಳು ಇರುತ್ತವೆ, ಅವೆಲ್ಲಾ ಒಡೆದುಹೋಗಿವೆ. ೭೭ ರಲ್ಲಿ ಆಗಲೂ ಕೂಡ ಇದೇ ರೀತಿಯಾಗಿ ಆಯಿತು ಅದನ್ನು ಇನ್ನು ಕೂಡಾ ಸರಿಪಡಿಸಲಿಕ್ಕೆ ಸಾಧ್ಯವಾಗಿಲ್ಲ, ಆದ್ದರಿಂದ ಈ ಸಭೆಯ ಮುಖಾಂತರ ಈ ಎಲ್ಲಾ ಕಾರ್ಯಗಳು ಬೇಗ ಪೂರೈಸಿ ಇವರಿಗೆ ಮಾನವೀಯ ತೆಯ ದೃಷ್ಟಿಯಿಂದ ಅವರು ಬದುಕುವುದಕ್ಕೆ ಅಸ್ಪದ ಮಾಡಿಕೊಡಬೇಕು ಎಂದು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮಂತ್ರಿಗಳನ್ನು ವಿನಂತಿಸಿಕೊಳ್ಳುತ್ತೇನೆ.

12.00 ಮಧ್ಯಾಹ್ನ

ಇನ್ನೊಂದು ವಿಷಯ. ಪ್ಯಾಡಿ ಫೀಲ್ಡ್‌ನಲ್ಲಿ ೩-೪ ದಿವಸಗಳು ನೀರು ನಿಂತರೆ ಈ ವರ್ಷ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭತ್ತದ ಬೆಳೆಯೆಲ್ಲಾ ಹಾಳಾಗಿ ಹೋಗುತ್ತದೆ. ಆದಕಾರಣ ಈ ಕೋ-ಆಪರೇಟೀವ್ ಸೊಸೈಟಿಗಳಿಂದ ರೈತರಿಗೆ ಕ್ರಾಪ್ ಲೋನ್, ಷಾರ್ಟ್ ಟರ್ಮ್ ಲೋನ್, ಮೀಡಿಯಂ ಟರ್ಮ್ ಲೋನ್ ಇವುಗಳ ವಸೂಲಾತಿಯ ಅವಧಿಯನ್ನು ಮುಂದಕ್ಕೆ ಹಾಕಬೇಕು. ಪ್ರವಾಹದ ಹಾವಳಿಯಿಂದ ಹಾನಿಯಾಗಿರುವ ಸಮಯದಲ್ಲಿ ಸೊಸೈಟಿಗಳಿಗೆ ಸಾಲದ ಕಂತುಗಳನ್ನು ಸಾಲಕ್ಕೆ ಸರಿಯಾಗಿ ಪಾವತಿ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಸಾಲದ ವಸೂಲಾತಿಯ ಅವಧಿಯನ್ನು ಮುಂದಕ್ಕೆ ಹಾಕುವ ಬಗ್ಗೆ ಸಂಬಂಧಪಟ್ಟ ಸೊಸೈಟಿಗಳಿಗೆ ಸರ್ಕಾರದವರು ಆದೇಶವನ್ನು ಕೊಡ ಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ. ರಸ್ತೆಗಳು ಕಡಿದು ಹೋಗಿರುವುದರಿಂದ ಜನಗಳು ಬಹಳ ತೊಂದರೆಗೆ ಈಡಾಗಿದ್ದಾರೆ ಎಂದು ನಮ್ಮ ಮಿತ್ರರನೇಕರು ಹೇಳಿದ್ದಾರೆ. ಮಾರ್ಗದ ಮಧ್ಯದಲ್ಲಿ, ಕಾಡಿನ ಮಧ್ಯದಲ್ಲಿ ಸಿಕ್ಕಿ ಹಾಕಿಕೊಂಡು ತೊಂದರೆಗೆ ಒಳಗಾದವರಿಗೆ ಹೆಲಿಕಾಪ್ಟರಿನಲ್ಲಿ ಆಹಾರವನ್ನು ಒದಗಿಸುವ ಪ್ರಯತ್ನ ವನ್ನು ಮಾಡಿದರೂ ಅದು ಯಶಸ್ವಿಯಾಗಲಿಲ್ಲ. ಇದರ ನಿರ್ವಹಣೆಯನ್ನು ಕೆ. ಎಸ್. ಆರ್. ಟಿ.ಸಿ ಯವರು ವಹಿಸಿಕೊಂಡಿದ್ದರೆ ಈ ಒಂದು ಪರಿಸ್ಥಿತಿ ಬರುತ್ತಾ ಇರಲಿಲ್ಲ. ಮಂಗಳೂರು-ಹಾಸನ ಮಧ್ಯ ಶಿರಾಡಿಯಲ್ಲಿ ಅನಾಹುತವಾಗಿದೆ ಎಂದು ತಿಳಿದ ಮೇಲೆ ಆ ದಾರಿಯಲ್ಲಿ ಬೆಂಗಳೂರಿಗೆ ಹೋಗಬೇಡಿ, ಕಾಡಿನ ಮಧ್ಯದಲ್ಲಿ ಬರುವುದು ಬೇಡ ಎಂದು ಕೆ.ಎಸ್.ಆರ್.ಟಿ ಸಿಯವರು ಪ್ರಯಾಣಿಕರಿಗೆ ಹೇಳಬಹು ದಾಗಿತ್ತು. ಶಿರಾಡಿ ಘಾಟಿನಲ್ಲಿ ಮಧ್ಯದಲ್ಲಿ ಬರುವುದು ಬೇಡ ಎಂದು ಕೆ.ಎಸ್.ಆರ್.ಟಿ ಸಿಯ ಸಂಬಂಧ ಪಟ್ಟ ಅಧಿಕಾರಿಗಳು ಪ್ರಯಾಣಿಕರಿಗೆ ಸೂಚನೆ ಕೊಡಬೇಕಾಗಿತ್ತು. ಆದ್ದರಿಂದ ಇದರ ಬಗ್ಗೆ ಯಾವ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕಾಗಿತ್ತೊ ಅವರು ತಮ್ಮ ಕರ್ತವ್ಯವನ್ನು ನಿರ್ವಹಿಸದೇ ಇರುವುದರಿಂದ ಅವರ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳಬೇಕು. ಕ್ರಮ ತೆಗೆದುಕೊಳ್ಳದೇ ಹೋದರೆ ಇದು ಮುಂದಕ್ಕೆ ಸರಿಬರುವುದಿಲ್ಲ. ಬಂಟ್ವಾಳ ಮತ್ತು ಮಂಗಳೂರಿನ ಮಧ್ಯೆ ಇರುವ ನ್ಯಾಷನಲ್ ಹೈವೇ ಒಡೆದು ಹೋಗಿ ಇನ್ನು ಎರಡೂವರೆ ತಿಂಗಳಾದರೂ ಅದು ಸರಿಯಾಗುವ ಪರಿಸ್ಥಿತಿಯಲ್ಲಿ ಇಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕ ರಸ್ತೆಗಳು ಕೊಚ್ಚಿಕೊಂಡು ಹೋಗಿ ನಾ ದುರಸ್ತಾಗಿವೆ. ಅದಕ್ಕೆ ಹಣ ವನ್ನು ಒದಗಿಸದಿದ್ದರೆ ಮಂಗಳೂರು-ಬೆಂಗಳೂರು ನ್ಯಾಷನಲ್ ಹೈವೇ ಕೂಡ ಸರಿ ಆಗುವುದಿಲ್ಲ.

ಮಲೆನಾಡಿನಲ್ಲಿ ರಸ್ತೆಗಳ ಮೇಲೆ ನೆರೆ ಬಂದು ಅನೇಕ ಹಾನಿಯುಂಟಾಗಿದೆ. ಆದ್ದರಿಂದ ಈಗ ಇರುವ ಹಣವಲ್ಲಿಯೇ ಈ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಹೆಚ್ಚಿನ ಹಣವನ್ನು ಒದಗಿಸಬೇಕು. ನನ್ನ ಕ್ಷೇತ್ರದಲ್ಲಿ ಸಮುದ್ರದ ಇರೋಷನ್ ಇದೆ. ಸಮುದ್ರದ ಬದಿಯಲ್ಲಿರುವ ಸಾಂಡ್ಯಲ್‌ಫೀಟ್ ಬೇಂಧ್ರೆಯ ಹತ್ತಿರ ಬಹಳ ಹತ್ತಿರ ಇದೆ. ಸುಮಾರು ೬-೭ ಮನೆಗಳನ್ನು ಸಮುದ್ರ ಕೊರೆದಿದೆ. ಇದರಿಂದ ಜನಗಳಿಗೆ ಅಲ್ಲಿ ಅನೇಕ ಹಾನಿಯುಂಟಾಗಿದೆ. ಪಬ್ಲಿಕ್‌ವರ್ಕ್ಸ್ ಡಿಪಾರ್ಟ್‌ಮೆಂಟಿನವರು ಈಗ ಎರಡು ವರ್ಷಗಳ ಹಿಂದೆ ಇನ್‌ವೆಸ್ಟಿಗೇಷನ್ ಡಿಪಾರ್ಟ್‌ಮೆಂಟನ್ನು ಓಪನ್ ಮಾಡಿದ್ದಾರೆ. ಆದರೆ ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತಿದ್ದಾರೆಯೋ ಅದುಗೊತ್ತಿಲ್ಲ ಏತಕ್ಕೆಂದರೆ ಇದು ಇಲ್ಲಿಯವರೆಗೆ ಕೇಂದ್ರ ಸರ್ಕಾರ ದಿಂದ ಫ್ಲಡ್ ಕಂಟ್ರೋಲ್ ಬಗ್ಗೆ, ಸೀಎರೋಷನ್ ಬಗ್ಗೆ ಹಣವನ್ನು ಪಡೆಯುವುದಕ್ಕೆ ಆಗಿಲ್ಲ. ಕೇರಳ ರಾಜ್ಯದವರು ಈಗಾಗಲೇ ಇದಕ್ಕೆ ಸಂಬಂಧಪಟ್ಟ ಹಣ ಸಹಾಯವನ್ನು ಕೇಂದ್ರ ಸರ್ಕಾರದಿಂದ ಪಡೆದು ಕೊಂಡಿದ್ದಾರೆ. ಆದರೆ ನಮ್ಮ ರಾಜ್ಯದವರು ಆ ಸಹಾಯವನ್ನು ಪಡೆಯುವುದಕ್ಕೆ ಸಾಧ್ಯವಾಗಿಲ್ಲ. ಕೊನೆಯ ಪಕ್ಷ ಇನ್ನು ಮುಂದಕ್ಕಾದರೂ ನಮ್ಮ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದಿಂದ ಹಣ ಸಹಾಯವನ್ನು ಪಡೆದುಕೊಂಡು ಸಮುದ್ರ ಕೊರತೆ ಬಗ್ಗೆ ಫ್ಲಡ್ ಕಂಟ್ರೋಲ್ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ ಸಮುದ್ರದ ಬದಿಯಲ್ಲಿ ಇರುವವರಿಗೆ ತೊಂದರೆಯುಂಟಾಗುತ್ತದೆ ಪ್ರತಿ ವರ್ಷವೂ ನಾವು ಈ ಮಾತನ್ನು ಹೇಳುತ್ತಲೇ ಇದ್ದೇವೆ. ತಾತ್ಕಾಲಿಕವಾದ ಒಂದು ಕ್ರಮವನ್ನು ತೆಗೆದು ಕೊಳ್ಳುತ್ತಾರೆಯೇ ಹೊರತು ಇದರ ಬಗ್ಗೆ ಒಂದು ಶಾಶ್ವತವಾದ ಕ್ರಮವನ್ನು ತೆಗೆದುಕೊಳ್ಳುವುದಿಲ್ಲ. ಇದಕ್ಕೆ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗಿರುವುದರಿಂದ ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಒತ್ತಾಯಮಾಡಿ ಸಾಕಷ್ಟು ಹಣವನ್ನು ತಂದು ಇದರ ಬಗ್ಗೆ ಒಂದು ಶಾಶ್ವತವಾದ ಕ್ರಮವನ್ನು ತೆಗೆದು ಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಇನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆಗಾಲದಲ್ಲಿ ಅಡಿಕೆ ಬೆಳೆಗೆ ರೋಗ ಬಂದರೆ ಇಡೀ ಒಂದು ವರ್ಷದ ಬೆಳೆ ನಷ್ಟವಾಗುತ್ತದೆ. ಆದ್ದರಿಂದ ಅಡಿಕೆ ಬೆಳೆಗಾರರಿಗೆ ಅನುಕೂಲ ಮಾಡುವ ದೃಷ್ಟಿಯಿಂದ ಇನ್ನು ಮುಂದಕ್ಕೆ ಅವರಿಗೆ ಒಂದು ಸರಿಯಾದ ಪರಿಹಾರವನ್ನು ಕಂಡುಹಿಡಿದು ಅವರಿಗೂ ಕೂಡ ಸಹಾಯವನ್ನು ದೊರಕಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಮೈನರ್ ಇರಿಗೇಷನ್ ಬಗ್ಗೆ ಹೇಳುವುದಾದರೆ ಸಣ್ಣ ಸಣ್ಣ ತೋಡುಗಳಿಗೆ ವೆಂಟೆಡ್ ಡ್ಯಾಮ್ಸ್ ಮಾಡುತ್ತಾರೆ. ಇವುಗಳಿಗೆ ನನಗೆ ತಿಳಿದ ಮಟ್ಟಿಗೆ ಈ ಮಳೆಯಿಂದ ಹೆಚ್ಚು ಹಾನಿಯುಂಟಾಗಿದೆ. ಅದಕ್ಕೆ ಹೆಚ್ಚಿನ ಹಣವನ್ನು ಕೊಟ್ಟು ಇದರ ಬಗ್ಗೆ ಸೂಕ್ತವಾದ ಕಾರ್ಯಕ್ರಮವನ್ನು ಕೈಗೊಳ್ಳಬೇಕು ಮತ್ತು ಇದರ ಬಗ್ಗೆ ಮಾನ್ಯ ಮಂತ್ರಿಗಳು ವಿಚಾರ ವಿನಿಮಯ ಮಾಡಬೇಕು. ೧೯೭೪ನೇ ಇಸವಿಯಲ್ಲಿ ಭಯಂಕರ ನೆರೆ ಬಂದಾಗ ಮೊಟ್ಟಮೊದಲು ತಕ್ಕ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದರು. ಆದರೆ, ಈಗ ಸಂಬಂಧಪಟ್ಟ ಅಧಿಕಾರಿಗಳಿಗೆ ಆ ಸ್ಥಳಕ್ಕೆ ಹೋಗುವುದಕ್ಕೆ ಆಗಿಲ್ಲ. ಏತಕ್ಕೆಂದರೆ ಪ್ರತಿದಿವಸ ನಮ್ಮ ತಾಲ್ಲೂಕಿಗೆ ४-೫ ಜನ ಮಂತ್ರಿಗಳು ಭೇಟಿ ಕೊಡುತ್ತಾರೆ, ಆದ್ದರಿಂದ ಅವರನ್ನು ನೋಡುವುದಕ್ಕೆ ಆಫೀಸರುಗಳು ಹೋಗಬೇಕಾಗುತ್ತಿದೆ ಎಂದು ಹೇಳಿದರು. ಅಂಥ ಒಂದು ಪರಿಸ್ಥಿತಿ ಉಂಟಾಗಬಾರದು. ಮಂತ್ರಿಗಳು ಆ ಸ್ಥಳಕ್ಕೆ ಭೇಟಿ ಕೊಡಬೇಕು, ಅಲ್ಲಿ ಉಂಟಾಗಿರತಕ್ಕ ತೊಂದರೆಯನ್ನು ಹೋಗಲಾಡಿಸು ವುದಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಆದರೆ ಅಲ್ಲಿಯೇ ನಿಲ್ಲಬಾರದು. ಏತಕ್ಕೆಂದರೆ ಅಧಿಕಾರಿಗಳು ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಸಮಯ ಕಡಿಮೆಯಾಗಬಾರದು. ಕಮಿಟಿಯನ್ನು ರಚನೆ ಮಾಡುವ ಬಗ್ಗೆ ಶ್ರೀ ಮಾನ್ ಆರ್. ಎಸ್. ಪಾಟೀಲ್ ಅವರು ಹೇಳಿದ ಹಾಗೆ ತೊಂದರೆಯುಂಟಾಗುತ್ತದೆ. ನೆರೆ ಹಾವಳಿಯ ಬಗ್ಗೆ ಮತ್ತು ಸಮುದ್ರದ ಕೊರೆತದ ಬಗ್ಗೆ ಕೇಂದ್ರ ಸರ್ಕಾರದಿಂದ ನೆರವನ್ನು ಪಡೆದುಕೊಂಡು ಇದಕ್ಕೆ ಒಂದು ಶಾಶ್ವತವಾದ ಕಾರ್ಯಕ್ರಮವನ್ನು ತೆಗೆದು ಕೊಳ್ಳಬೇಕು ಎಂದು ಕೇಳಿಕೊಂಡು ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಂ. ನಡಾಫ್ (ಶಿಗ್ಗಾವಿ)—ಮಾನ್ಯ ಅಧ್ಯಕ್ಷರೆ, ಧಾರವಾಡ ಜಿಲ್ಲೆಯಲ್ಲಿ ವರದಾ ಮತ್ತು ತುಂಗಭದ್ರಾ ನದಿಗಳ ಪ್ರವಾಹ ಜಾಸ್ತಿಯಾಗಿ ಜನರಿಗೆ ಅನೇಕ ತೊಂದರೆಯಾಗಿದೆ ಎಂದು ನನಗೆ ಈಗ ವರ್ತಮಾನ ಬಂದಿದೆ. ಜೊತೆಗೆ ಮಲಪ್ರಭಾ ಮತ್ತು ಘಟಪ್ರಭಾ ಎಲ್ಲಾ ನದಿಗಳೂ ತುಂಬಾ ವೇಗವಾಗಿ ಹರಿಯುತ್ತಿವೆ. ಇದರಿಂದಾಗಿ ಜನರು ಅನೇಕ ಕಷ್ಟನಷ್ಟಗಳಿಗೆ ಈಡಾಗಿದ್ದಾರೆ. ನದಿಗಳ ದಂಡೆಯಲ್ಲಿರತಕ್ಕ ಊರುಗಳಿಗೆ ನೀರು ನುಗ್ಗಿ ಅನೇಕ ಮನೆಗಳು ನಾಶವಾಗಿವೆ. ಆಸ್ತಿಪಾಸ್ತಿಗಳಿಗೆ

ಅಪಾರ ಹಾನಿಯುಂಟಾಗಿದೆ. ಇದರ ಕಡೆಗೆ ಮಾನ್ಯ ಮಂತ್ರಿಗಳು ತಮ್ಮ ಗಮನವನ್ನು ಹರಿಸಬೇಕು. ನನಗೆ ಒಂದು ಸಂತೋಷವೇನೆಂದರೆ ಈ ಪ್ರವಾಹದಲ್ಲಿ ತೊಂದರೆಯನ್ನು ಅನುಭವಿಸಿರುವವರಿಗೆ ಅನುಕೂಲ ಮಾಡುವ ದೃಷ್ಟಿಯಿಂದ ಜಿಲ್ಲಾಧಿಕಾರಿಗಳು ಶೀಘ್ರವಾಗಿ ಆಫೀಸರುಗಳ ಒಂದು ಸಭೆಯನ್ನು ಕರೆದು ವಿಚಾರ ಮಾಡಿದ್ದಾರೆ. ಈ ವಿಚಾರವನ್ನು ಪತ್ರಿಕೆಯಲ್ಲಿ ಓದಿ ನನಗೆ ತುಂಬಾ ಸಂತೋಷವಾಯಿತು. ಈ ಪ್ರವಾಹದ ಹಾವಳಿಯಲ್ಲಿ ತೊಂದರೆಗೆ ಒಳಗಾಗಿರತಕ್ಕವರಿಗೆ ಪರಿಹಾರವನ್ನು ಒದಗಿಸುವ ದೃಷ್ಟಿಯಿಂದ ಒಂದು ಕಮಿಟಿಯನ್ನು ಮಾಡಿ, ಆ ಕಮಿಟಿಯವರು ಆ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡುವುದಕ್ಕಿಂತ, ಸರ್ಕಾರದ ಲೆವೆಲ್‌ನಲ್ಲೇ ಒಂದು ಶೀಘ್ರವಾದ ಕ್ರಮ ತೆಗೆದುಕೊಂಡರೆ ಹೆಚ್ಚು ಅನುಕೂಲವಾಗುತ್ತದೆ. ಹಾನಗಲ್ ತಾಲ್ಲೂಕಿನಲ್ಲಿ, ಅದರಲ್ಲೂ ನಮ್ಮ ತಾಲ್ಲೂಕಿನ ದಕ್ಷಿಣ ಭಾಗದಲ್ಲಿ ಸುಮಾರು ೯-೧೦ ಕೆರೆಗಳು ಒಡೆದು ಅನೇಕ ಹಳ್ಳಿಗಳಿಗೆ ನೀರು ನುಗ್ಗಿ ಮನೆಗಳು ಕುಸಿದು ಬಿದ್ದಿವೆ. ಅನೇಕರ ಆಸ್ತಿಪಾಸ್ತಿಗಳಿಗೆ ಅಪಾರ ಹಾನಿಯುಂಟಾಗಿದೆ. ಅಷ್ಟೇ ಅಲ್ಲ ಸವಣೂರು ಹೊಸಹಳ್ಳಿ, ಬೆಲ್ಲಗಟ್ಟಿ ಇತ್ಯಾದಿ ಊರುಗಳಲ್ಲಿ ಪ್ರತಿನಿತ್ಯ ಮಳೆ ಬಂದು ಜನಗಳಿಗೆ ಸಾಕಷ್ಟು ತೊಂದರೆಯುಂಟಾಗಿದೆ. ಅಲ್ಲಿನ ಪರಿಸ್ಥಿತಿ ತೀರಾ ವಿಕೋಪಕ್ಕೆ ಹೋಗಿದೆ. ಇದರ ಬಗ್ಗೆ ಸರ್ಕಾರದವರು ಹೆಚ್ಚು ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಸರ್ಕಾರದ ಗಮನವನ್ನು ಸೆಳೆಯುತ್ತೇನೆ. ಹಾವೇರಿಯ ತಾಲ್ಲೂಕಿನಲ್ಲಿಯೂ ಸಹ ಮಳೆ ಮತ್ತು ಪ್ರವಾಹದಿಂದ ಅನೇಕ ಹಳ್ಳಿಗಳಲ್ಲಿ ಜನಗಳಿಗೆ ತೊಂದರೆಯಾಗಿದೆ. ಮತ್ತು ಜನಗಳ ಆಸ್ತಿಪಾಸ್ತಿಗಳಿಗೆ ಅಪಾರ ಹಾನಿಯುಂಟಾಗಿದೆ. ಈ ಪ್ರದೇಶದಲ್ಲಿಯೂ ಸಹ ಸರ್ಕಾರದವರು, ಇಂಥಾ ಪ್ರವಾಹದ ಹಾವಳಿಯಿಂದ ಉಂಟಾಗತಕ್ಕ ತೊಂದರೆಯನ್ನು ತಪ್ಪಿಸುವುದಕ್ಕಾಗಿ ಒಂದು ವಿಸ್ತಾರವಾದ ಯೋಜನೆಯನ್ನು ಹಾಕಿಕೊಂಡು ತೊಂದರೆಯನ್ನು ತಡೆಗಟ್ಟಬೇಕು. ೧೯೬೨ ನೇ ಇಸವಿಯಲ್ಲಿ ಇದೇ ರೀತಿ ಪ್ರವಾಹ ಬಂದಾಗ ಯಾವುದೋ ಒಂದು ತಾತ್ಕಾಲಿಕವಾದ ಪರಿಹಾರವನ್ನು ಒದಗಿಸಿದರು. ಇಲ್ಲಿಯವರೆಗೂ ಕೂಡ ಇದಕ್ಕೆ ಒಂದು ಶಾಶ್ವತವಾದ ಪರಿಹಾರವನ್ನು ಕಂಡುಹಿಡಿದಿಲ್ಲ, ಇದಕ್ಕೆ ಒಂದು ಶಾಶ್ವತವಾದ ಪರಿಹಾರವನ್ನು ಒದಗಿಸತಕ್ಕ ವ್ಯವಸ್ಥೆಯನ್ನು ಮಾಡಬೇಕು ಇಷ್ಟು ಹೇಳಿ, ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಸುಬ್ಬಯ್ಯಶೆಟ್ಟಿ (ಸುರತ್‌ಕಲ್).—ಮಾನ್ಯ ಅಧ್ಯಕ್ಷರೇ, ಮಳೆಗಾಲ ಎಂದರೆ ಈ ಸಮಯವನ್ನು ಇಡೀ ಮಲೆನಾಡಿನಲ್ಲಿ ಒಂದು ಲೀನ್ ಪೀರಿಯಡ್ ಎಂದು ಹೇಳಬಹುದು. ಅಲ್ಲಿ ಎಲ್ಲರಿಗೂ ಕೂಡ ಬಹಳ ಕಷ್ಟ. ಈ ಸಮಯದಲ್ಲಿ ಮಹಾಪೂರ ಬಂದಾಗ ಜನಗಳಿಗೆ ಕಷ್ಟ ಇನ್ನಷ್ಟು ಉಲ್ಬಣವಾಗುತ್ತದೆ ಮಹಾಪೂರ ಬಂದಾಗ ೨-೩ ಸಂಕಷ್ಟಗಳು ಉಂಟಾಗುತ್ತವೆ. ಒಂದನೆಯದು ಬಹಳ ನೀರು ಬಂದು ಮನೆಗಳು ಉರುಳಿ ಹೋಗುತ್ತವೆ, ಕುಸಿದು ಬೀಳುತ್ತವೆ. ಬರುವಂತಹ ಬೆಳೆ ಕೂಡ ಹಾಳಾಗುತ್ತದೆ. ಇವೆಲ್ಲಾ ನಡೆಯುತ್ತದೆ. ಇನ್ನೊಂದು ವಿಷಯವೇನೆಂದರೆ ಜಾಸ್ತಿಮಳೆ ಆದಾಗ ಬಡವರ ಮನೆಗಳು ಕುಸಿದು ಬೀಳುತ್ತವೆ. ಅದೂ ಅಲ್ಲದೆ ಸಮುದ್ರದ ಕೊರೆತ ಕೂಡ ಉಂಟಾಗುತ್ತದೆ. ಬೇಂದ್ರ, ಅಂಕೋಲ, ಕಾರವಾರ, ಸುರತ್‌ಕಲ್ ಮತ್ತು ಕಾಪು ಮುಂತಾದ ಕಡೆಗಳಲ್ಲಿ ಸಮುದ್ರದ ಕೊರೆತ ನಡೆಯುತ್ತಿದೆ.

(Sri S. S. Arakeri in the Chair)

ಇದರ ಬಗ್ಗೆ ಹೆಚ್ಚಿನ ಒಂದು ಕಾಳಜಿ ಅಗತ್ಯ ಇದೆ ಎಂದು ಹೇಳುತ್ತೇನೆ. ಮಾನ್ಯ ಕಂದಾಯ ಮಂತ್ರಿಗಳು ಇಲ್ಲಿಯೇ ಕೂತಿದ್ದಾರೆ. ಅವರು ಇಲ್ಲಿ ಇದ್ದರೂ ಸಹ ಅವರೇ ಹೋಗಿ ಏನು ಮಾಡಬೇಕಾದ್ದಿಲ್ಲಾ. ಈ ಬಗ್ಗೆ ಬೇರೆ ಬೇರೆ ಇಲಾಖೆಗಳು ಏನು ಇವೆ ಅವುಗಳು ಇವನ್ನೆಲ್ಲಾ ಪರಿಶೀಲಿಸತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಅಗತ್ಯ ಇದೆ, ಮಾನ್ಯ ಕಂದಾಯ ಮಂತ್ರಿಗಳು ಇಲ್ಲಿ ಕೂತುಕೊಂಡು ನೋಟ್ ಮಾಡಿಕೊಳ್ಳುತ್ತಿದ್ದರೂ ಸಹ ಇದನ್ನು ಸಂಬಂಧಪಟ್ಟ ಬೇರೆ ಬೇರೆ ಇಲಾಖೆಯವರಿಗೆ ತಿಳಿಸುವುದು ಅಗತ್ಯ ಇದೆ. ಈ ಸಮುದ್ರದ ಒಂದು ಕೊರೆತಕ್ಕೋಸ್ಕರವಾಗಿ ಒಂದು ಸಬ್ ಡಿವಿಷನಲ್ ಅನ್ನು ಮಾಡಿದ್ದಾರೆ. ಅವರು ಇದನ್ನು ಇನ್‌ವೆಸ್ಟಿಗೇಷನ್ ಮಾಡಿ ಏನು ಕ್ರಮ ತೆಗೆದುಕೊಳಬೇಕೋ ಅದನ್ನು ತೆಗೆದು ಕೊಳ್ಳಬೇಕು. ಆದರೆ ಆ ಕೆಲಸಗಳನ್ನು ಮಾಡುವುದಕ್ಕೆ ಎಷ್ಟು ಹಣ ಇಟ್ಟಿದ್ದಾರೋ ಎನ್ನುವುದು ನನಗೆ ಗೊತ್ತಿಲ್ಲ. ಅದಕ್ಕಾಗಿ ಹೆಚ್ಚು ಹಣ ಒದಗಿಸಬೇಕು ಎಂದು ಇಷ್ಟು ಮಾತ್ರ ನಾನು ಹೇಳುತ್ತೇನೆ.

ಇನ್ನು ಕ್ರಾಪ್ ಡಿಸ್ಟ್ರಕ್ಷನ್ ಇದೆ. ಇದಕ್ಕೆ ತಕ್ಕ ಪರಿಹಾರ ಕೊಡುವುದು, ಮತ್ತು ಬೀಜ ಒದಗಿಸುವುದು, ಅವರಿಗೆ ಬೇಕಾದ ಪರಿಹಾರ ಕ್ರಮವನ್ನು ತೆಗೆದುಕೊಳ್ಳುವುದು ಅಗತ್ಯ ಇದೆ. ಈ ಬಗ್ಗೆ ಬೇರೆ ಬೇರೆ ಇಲಾಖೆಯವರು ಏನೇನು ಕ್ರಮವನ್ನು ತೆಗದುಕೊಂಡಿದ್ದಾರೋ ನನಗೆ ಗೊತ್ತಿಲ್ಲ. ಈ ನೆರೆಹಾವಳಿ ಈಗ ಜಾಸ್ತಿಯಾಗಿದೆ. ಮೊದಲು ಏತಕ್ಕೆ ಇರಲಿಲ್ಲ ಎಂದರೆ, ಈಗ ಪಶ್ಚಿಮಘಾಟ್‌ನಲ್ಲಿ ಇರತಕ್ಕಂಥಾ ನದಿಗಳ ನೀರೆಲ್ಲಾ ಹರಿದು ಒಂದು ಕಡೆ ಸಿಲ್ಟ್ ಆಗಿಬಿಟ್ಟಿದೆ. ಇದರಿಂದಾಗಿ ರಿವರ್‌ಬೆಡ್ ಎಲ್ಲಾ ಸಿಲ್ಟ್ ಆಗಿಬಿಟ್ಟಿದೆ. ಆದುದರಿಂದ ಈ ಡೀಸಿಲ್ಟೇಷನ್ ಕಾರ್ಯಕ್ರಮವನ್ನು ಕೂಡಲೇ ತೆಗೆದು ಕೊಳ್ಳಬೇಕಾದ್ದು ಅಗತ್ಯ ಇದೆ ಎಂದು ಹೇಳುತ್ತೇನೆ.

ಇನ್ನು ಹೋದ ಸಲ ನಮ್ಮ ಕಡೆಯ ರೈತರು ಈ ಕೋ-ಆಪರೇಟೀವ್ ಸೊಸೈಟಿಗಳಲ್ಲಿ ಕ್ರಾಪ್ ಸಾಲ ಏನು ತೆಗೆದುಕೊಂಡಿದ್ದಾರೋ ಅದನ್ನು ವಜಾ ಮಾಡ ಬೇಕು ಇಲ್ಲವೇ ಅವರಿಗೆ ಸ್ವಲ್ಪ ಹೆಚ್ಚು ಕಾಲ ಕೊಡುವುದು ಅಗತ್ಯ ಇದೆ. ಇನ್ನೊಂದು ವಿಷಯ. ೧೯೭೪ ರಲ್ಲಿ ಮಳೆ ಬಂದಾಗ ಆ ನೊಂದ ಜನರಿಗೆ ಮನೆಗಳನ್ನು ಕಟ್ಟಲಿಕ್ಕೆ ಸಾಲ ಕೊಟ್ಟಿದ್ದರು. ಅದನ್ನು ಈಗ ವಸೂಲ್ಮಾಡುವುದಕ್ಕೆ ಹೊರಟಿದ್ದಾರೆ. ಆ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳು ಗಮನ ನೀಡಬೇಕು. ತಮಗೆ ಹೇಳಬೇಕಾದರೆ ಮಳೆಗಾಲದಲ್ಲಿ ಆ ಸಾಲವನ್ನು ವಸೂಲ್ಮಾಡುವುದಕ್ಕೆ ಹೋದರೆ ಅವರಿಂದ ಏನೂ ಹಣ ಸಿಕ್ಕುವುದಿಲ್ಲ. ಏತಕ್ಕೆಂದರೆ ಬಡವರಿಗೆ ಮಳೆಗಾಲದಲ್ಲಿ ಕೆಲಸವೇ ಇಲ್ಲದೇ ಇರುವಾಗ ಅವರು ಹೇಗೆ ಸಾಲವನ್ನು ಕಟ್ಟುವುದಕ್ಕಾಗುತ್ತದೆ ಎಂಬು ದನ್ನು ತಾವೇ ಯೋಚನೆ ಮಾಡಿ. ಆದುದರಿಂದ ಈವಾಗ ಅವರಿಂದ ಸಾಲವನ್ನು ವಸೂಲ್ಮಾಡುವುದನ್ನು ನಿಲ್ಲಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೇತ್ರಾವತಿ ಮತ್ತು ಗುರುಪುರ ನದಿಗಳಲ್ಲಿ ಸಿಲ್ಟಿಂಗ್ ಆಗಿ ಬಿಟ್ಟಿದೆ. ಆಕ್ಕಲ ಕಡೆ ಎರೋಷನ್ ಆಗಿ ನದಿ ಅಗಲವಾಗಿಬಿಟ್ಟಿದೆ. ಇದರಿಂದ ಹತ್ತಿರದಲ್ಲಿರುವ ಗದ್ದೆ ಗಳು ಏನು ಇವೆ ಅವುಗಳಿಗೆ ಸರಿಯಾಗಿ ನೀರು ಹೋಗುವುದಿಲ್ಲ. ಇದರಿಂದಾಗಿ ಅಲ್ಲಿ ಬೆಳೆ ಸರಿಯಾಗಿ ಆಗುವುದಿಲ್ಲ. ಈ ದಿಶೆಯಿಂದ ಆ ನದಿಗಳ ಕೆಲಸವನ್ನು ಜಾಗ್ರತೆ ತೆಗೆದುಕೊಳ್ಳಬೇಕು ಎಂದು ಸರ್ಕಾರ ವನ್ನು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ, ಈ ನೆರೆಹಾವಳಿಗೆ ಸಿಕ್ಕಿಹಾಕಿಕೊಂಡಿರತಕ್ಕಂಥಾದ್ದು ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಒಂದೇ ಅಲ್ಲ, ಇದರ ಜೊತೆಗೆ ಶಿವಮೊಗ್ಗ, ಕಾರವಾರ, ಬೆಳಗಾಂ, ಧಾರವಾಡ ಈ ಜಿಲ್ಲೆಗಳ ಮೇಲೂ ಕೂಡ ಮಹಾಪೂರ ಬಂದು ಅಲ್ಲಿಯ ಜನರು ಏನು ಒಂದು ಸಂಕಷ್ಟಕ್ಕೆ ಈಡಾಗಿದ್ದಾರೆ ಅವೆಲ್ಲ ವನ್ನೂ ಸಮಗ್ರವಾಗಿ ಪರಿಶೀಲಿಸಿ ತಕ್ಷಣವಾಗಿ ಪರಿಹಾರ ಕಾರ್ಯಕ್ರಮವನ್ನು ಕೈಗೊಳ್ಳಬೇಕು ಎಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

† ಶ್ರೀ ಬಿ. ಎ. ಮೊಹಿದ್ದೀನ್: (ಬಂಟ್ವಾಳ್).—ಅಧ್ಯಕ್ಷರೇ, ಸುಮಾರು ೯ ಜಿಲ್ಲೆಯಲ್ಲಿ ಈ ಅನಾವೃಷ್ಟಿ ಬಂದಿದೆ ಎನ್ನುವುದು ಎಲ್ಲರಿಗೂ ಗೊತ್ತು, ಆದರೆ ಇದರಲ್ಲಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಯವರಿಗೆ ಅತಿವೃಷ್ಟಿಯಾಗುವುದು ಸರ್ವೇಸಾಮಾನ್ಯವಾಗಿದೆ. ಅದರಲ್ಲೂ ಕೂಡ ನಮ್ಮ ಬಂಟ್ವಾಳ ತಾಲ್ಲೂಕಿನ ಬಗ್ಗೆ ತಾವೆಲ್ಲಾ ಪತ್ರಿಕೆಯಲ್ಲಿ ಓದಿರಬಹುದು. ಕಳೆದ ೪ ದಿವಸ ಮಳೆ ಬಂದಿದೆ. ಅಲ್ಲಿ ಯಾವ ಸಂಪರ್ಕವೂ ಇಲ್ಲ ಅನ್ನುವ ವಿಷಯ ಬಂದಿದೆ. ೧೯೭೮ ರಲ್ಲಿ ಇಂತಹ ಒಂದು ನೆರೆ ಬಂದಾಗ ಆವಾಗ ಶ್ರೀ ಬಂಗಾರಪ್ಪನವರು ಲೋಕೋಪಯೋಗಿ ಇಲಾಖಾ ಮಂತ್ರಿಗಳಾಗಿದ್ದರು, ಆ ಸಂದರ್ಭ ದಲ್ಲಿ ಅವರನ್ನು, ಇಲ್ಲಿ ಒಂದು ಫ್ಲಡ್ ಎಸ್ಕೇಪ್ ರೋಡ್ ಮಾಡಿಸಿಕೊಡಿ ಎಂದು ಕೇಳಿದೆವು. ಮುಂದೆ ಆ ವಿಚಾರ ಏನಾಯಿತೋ ಏನೋ ಗೊತ್ತಿಲ್ಲ. ಈ ರೀತಿ ನೆರೆ ಬಂದಾಗ ನೇತ್ರಾವತಿ ಮತ್ತು ಗುರುಪುರ ಪ್ರದೇಶಗಳ ಹತ್ತಿರ ಇರತಕ್ಕಂಥಾ ಭೂಮಿಗಳಲ್ಲಿ ಬೆಳೆ ಬೆಳೆಯುವುದಿಲ್ಲ. ಏತಕ್ಕೆಂದರೆ ಅದು ಎತ್ತರದ ಪ್ರದೇಶವಾಗಿರುವುದರಿಂದ ಕೆಳಗಿನ ಪ್ರದೇಶಕ್ಕೆ ನೀರು ಹರಿಯದೇ ನಿಂತುಬಿಡುತ್ತದೆ. ಆದುದರಿಂದ ಈ ಕೆಲಸವನ್ನು ಮಾಡಿಕೊಡಬೇಕು ಎಂದು ಕೇಳಿದೆವು. ಈಗ ಏನಾಗಿದೆ ಎಂದರೆ ಫ್ಲಡ್ ರೆಸಿಸ್ಟೆನ್ಸ್ ಮಾಡತಕ್ಕಂಥಾ ತಳಿ ನಮ್ಮಲ್ಲಿ ಇಲ್ಲ. ಆದುದರಿಂದ ಇದಕ್ಕೆ ಒಂದು ಸಂಶೋಧನೆ ಅಗತ್ಯವಿದೆ. ಬಂಗಾಳದಲ್ಲಿ ಮತ್ತು ಬಿಹಾರ್‌ನಲ್ಲಿ ಇಂತಹ ಒಂದು ಸಂಶೋಧನೆ ನಡೆಯುತ್ತಾ ಇದೆ. ಆ ಪ್ರದೇಶದಲ್ಲಿರ ತಕ್ಕಂಥಾ ಜನರಿಗೆ ಹೆಚ್ಚು ಇಳುವರಿ ಬರತಕ್ಕಂಥಾ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಕೆಲಸ ಮಾಡುತ್ತಿದ್ದಾರೆ. ಅದೇ ರೀತಿ ನಮ್ಮ ರಾಜ್ಯದಲ್ಲೂ ಕೂಡ ಮಾಡತಕ್ಕದ್ದು ಬಹಳ ಅಗತ್ಯ ಇದೆ; ಎಂದು ನಾನು ಭಾವಿಸುತ್ತೇನೆ. ಅಲ್ಲದೆ ಈ ಡೀಸಿಲ್ಟಿಂಗ್ ಕಾರ್ಯಕ್ರಮವನ್ನು ನಮ್ಮ ರಾಜ್ಯದಲ್ಲಿ

ಮಾಡಬೇಕಾದರೆ ಇದಕ್ಕೆ ಹೆಚ್ಚು ಹಣ ಬೇಕಾಗುತ್ತದೆ, ನಮ್ಮ ರಾಜ್ಯದ ಆರ್ಥಿಕ ಕಷ್ಟದ ಒಂದು ಪರಿಸ್ಥಿತಿಯಿಂದ ಈ ಕೆಲಸವನ್ನು ನಾವೊಬ್ಬರೇ ಮಾಡುವುದಕ್ಕಾಗುವುದಿಲ್ಲ ಎಂದು ಭಾವಿಸುತ್ತೇನೆ. ಆದುದರಿಂದ ತಾವು ಕೇಂದ್ರ ಸರ್ಕಾರಕ್ಕೆ ಪ್ರಭಾವ ಬೀರಿ ಈ ಡೀಸಿಲ್ಟಿಂಗ್ ಮಾಡುವ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಅಲ್ಲದೆ ಇದನ್ನು ಸುಮಾರು ೧೦—೧೫ ಮೈಲಿಯುವರೆಗೆ ವಿಸ್ತರಿಸುವಂತೆ ಒಂದು ಕಾರ್ಯಕ್ರಮ ತೆಗೆದುಕೊಳ್ಳಬೇಕು. ಏತಕ್ಕೆಂದರೆ ಈಗ ೨೦ ವರ್ಷದ ಹಿಂದೆ ನೇತ್ರಾವತಿ ಮತ್ತು ಗುರುಪುರ ನದಿಗಳಲ್ಲಿ ಏನು ಆದೆ ಮಣ್ಣು ಮಂಗಳೂರಿಗೆ ಬರುತ್ತಿತ್ತೋ ಆ ಮಣ್ಣನ್ನು ಉಪಯೋಗಿಸಿ ಹೆಂಚಿನ ಕಾರ್ಖಾನೆಗಳನ್ನು ನಡೆಸುತ್ತಿದ್ದರು. ಸಾವಿರಾರು ಜನರು ಇದರಿಂದ ಉಪಯೋಗ ಪಡೆದಿದ್ದಾರೆ. ಡೀಸಿಲ್ಟಿಂಗ್ ಇದು ಒಂದು ದೊಡ್ಡ ಕಾರ್ಯಕ್ರಮವಾಗಿರುವುದರಿಂದ ಇದಕ್ಕಾಗಿ ಒಂದು ಸಮಿತಿಯನ್ನು ರಚಿಸುವುದು ಅಗತ್ಯ. ಈ ಸದನದ ಸದಸ್ಯರ ಒಂದು ಕಮಿಟಿಯನ್ನು ರಚನೆ ಮಾಡಿ ಅವರಿಂದ ಈ ಬಗ್ಗೆ ಸಲಹೆ ತೆಗೆದುಕೊಂಡರೂ ಸಹ ಅದರಿಂದೇನೂ ಪರಿಣಾಮವಾಗುವುದಿಲ್ಲ ಎಂದು ಭಾವಿಸುತ್ತೇನೆ. ಅದಕ್ಕೆ ಒಂದು ತಜ್ಞರ ಕಮಿಟಿ ಮಾಡಿ ಅವರಿಂದ ಸಲಹೆಯನ್ನು ಪಡೆಯಬೇಕು ಎಂದು ನಾನು ಮತ್ತೊಮ್ಮೆ ಒತ್ತಾಯ ಮಾಡುತ್ತೇನೆ.

ಇನ್ನು ನಮ್ಮ ಮಲೆನಾಡು ಪ್ರದೇಶದಲ್ಲಿ ಅಫಾರ್‌ಸ್ಟೇಷನ್ ಕೆಲಸ ಏನು ನಡೆಯುತ್ತಾ ಇದೆ ಅದರ ಬಗ್ಗೆ ಹೇಳುವುದಾದರೆ ಇದು ತೃಪ್ತಿಕರವಾಗಿಲ್ಲ. ನಮ್ಮ ಕಡೆಯ ವೆಸ್ಟರ್ನ್ ಘಾಟ್‌ನಲ್ಲಿ ಏನಾಗಿದೆ ಎಂದರೆ ಕಾಡುಗಳು ಕಡಿಯುವ ಕೆಲಸ ನಡೆಯುತ್ತಾ ಇರುವುದರಿಂದ ಅಲ್ಲಿರುವ ಮಣ್ಣೆಲ್ಲಾ ಕೊಚ್ಚಿಕೊಂಡು ಹೋಗಿ ಒಂದು ಕಡೆ ಡೀಸಿಲ್ಟ್ ಆಗಿಬಿಟ್ಟಿದೆ. ಅದು ಮಳೆ ಬಂದಾಗ ಕುಸಿದು ಬಿಡುತ್ತದೆ. ಇದರಿಂದ ಅಲ್ಲಿ ಬೆಟ್ಟವೆಲ್ಲಾ ಕುಸಿತವಾಗಿದೆ. ಆದುದರಿಂದ ಇದನ್ನು ವೈಜ್ಞಾನಿಕ ದೃಷ್ಟಿಯಿಂದ ನೋಡುವುದು ಒಳ್ಳೆಯದು ಎಂದು ನಾನು ಭಾವಿಸುತ್ತೇನೆ.

ಇನ್ನು ಕ್ರಾಪ್ ಇನ್‌ಷೂರೆನ್ಸ್ ಬಗ್ಗೆ ಹೇಳುವುದಾದರೆ ಈ ಫ್ಲಡ್ ಎಫೆಕ್ಟೆಡ್ ಏರಿಯಾದಲ್ಲಿರುವ ರೈತರು ಬೆಳೆಸತಕ್ಕಂಥಾ ಭೂಮಿಗೆ ಒಳ್ಳೆಯ ತಳಿ ಸಿಗಬೇಕು, ಅವರು ಚೆನ್ನಾಗಿ ಬೆಳೆಸಬೇಕು, ಅವರಿಗೆ ಇದಕ್ಕೆ ತಕ್ಕ ಸೌಲಭ್ಯಗಳನ್ನು ಒದಗಿಸಿಕೊಡಬೇಕಾಗಿದೆ. ಇದಕ್ಕಾಗಿ ಅವರಿಗೆ ಕ್ರಾಪ್ ಇನ್‌ಷೂರೆನ್ಸ್ ಮಾಡಿ ಕೊಡಬೇಕಾದ ಅವಶ್ಯಕತೆಯೂ ಇದೆ ಎಂದು ನಾನು ಭಾವಿಸುತ್ತೇನೆ. ನಾನು ಮೊದಲೇ ಹೇಳಿದ ಹಾಗೆ ಈ ಫ್ಲಡ್ ಏರಿಯಾದಲ್ಲಿರತಕ್ಕಂಥಾ ಜನರ ವಿಮೋಚನೆಗೆ ಏನು ಅಗತ್ಯವಾದ ಕೆಲಸಗಳನ್ನು ಮಾಡಿಕೊಡಬೇಕೋ ಅಂದರೆ ಫ್ಲಡ್ ಎಸ್ಕೇಪ್ ರೋಡ್ ಮುಂತಾದವುಗಳನ್ನು ಕೂಡಲೇ ಮಾಡಿಸಿಕೊಡಬೇಕು ಎಂದು ಹೇಳುತ್ತೇನೆ. ಅಲ್ಲದೆ ತಾತ್ಕಾಲಿಕವಾಗಿ ಅವರಿಗೆ ಕೊಟ್ಟಿರತಕ್ಕಂಥಾ ಪರಿಹಾರ ಏನು ಇದೆ ೧೯೭೪ರಲ್ಲಿ ಅವರಿಗೆ ಸುಮಾರು ೨ ಕೋಟಿ ರೂಪಾಯಿಗಳನ್ನು ಪರಿಹಾರ ಕೊಟ್ಟಿದ್ದೀರಿ. ಅದನ್ನು ರಿಕವರಿ ಮಾಡಲಿಕ್ಕೆ ಈಗ ತಮ್ಮ ಅಧಿಕಾರಿಗಳು ಹೊರಟಿದ್ದಾರೆ. ಕೆಲವು ಮನೆಗಳವರು ನನ್ನ ಹತ್ತಿರ ಬಂದಿದ್ದರು, ಅದಕ್ಕೆ ನಾನು ಹೇಳುತ್ತಿದ್ದೇನೆ. ಈ ನೆರೆಹಾವಳಿಗೆ ಸಿಕ್ಕಿಕೊಂಡಿರತಕ್ಕಂಥಾ ಜನರಿಗೆ ಏನು ಪರಿಹಾರ ಕೊಡುತ್ತಿದ್ದೀರೋ ಆ ಜನರೆಲ್ಲಾ ಡಿಸ್‌ಪ್ಲೇಸ್ಡ್ ಆಗ್ರಿಕಲಚರಲ್ ಲೇಬರರ್ಸ್ ಅದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು ; ಅವರು ಈವೊತ್ತು ಏನೂ ಕೆಲಸ ಇಲ್ಲದೇ ಇದ್ದಾರೆ. ಅವರು ಗದ್ದೆಗಳಿಗೆ ಕೂಲಿಗೆ ಬರಬೇಕಾದರೂ ಕೂಡ ೨—೩ ಮೈಲಿ ನಡೆದುಕೊಂಡು ಬರಬೇಕಾಗಿದೆ. ಅವರು ಎಲ್ಲಿ ಕೆಲಸ ಮಾಡುತ್ತಾರೋ ಎಲ್ಲಿ ಇರುತ್ತಾರೋ ಗೊತ್ತಿಲ್ಲ. ಆದುದರಿಂದ ಅವರಿಗೆ ಒಂದು ಕೆಲಸ ದೊರೆಯುವ ಹಾಗೆ ಒಂದು ಕಾಟೇಜ್ ಇಂಡಸ್ಟ್ರೀಸ್‌ಗಳನ್ನು ಯಾವುದಾದರೂ ಒಂದು ಸರ್ಕಾರಿ ಅಧೀನದ ಕೈಗಾರಿಕೆಯನ್ನು ಸ್ಥಾಪನೆ ಮಾಡಿ ಈ ಸಂಕಷ್ಟ ಸಮಯದಲ್ಲಿ ಅವರಿಗೆ ಒಂದು ಹೊಸ ವಾತಾವರಣ ಕಲ್ಪಿಸಿ ಕೊಡುವುದು ಅಗತ್ಯ ಇದೆ ಎಂದು ನಾನು ಭಾವಿಸುತ್ತೇನೆ. ಕಳೆದ ೪-೫ ದಿನಗಳಿಂದ ಮಂಗಳೂರು ಕಡೆಯಲ್ಲಿ ಆಗಲಿ ಅಥವಾ ನಮ್ಮ ಬಂಟ್ವಾಳದಲ್ಲಿ ಯಾಗಲೀ ಧಾರಾಕಾರವಾಗಿ ಮಳೆ ಬಂದು ಏನು ಅನಾಹುತವಾಗುತ್ತಾ ಇದೆ ಎನ್ನುವುದು ಎಲ್ಲರಿಗೂ ಗೊತ್ತು. ಈ ಸಂದರ್ಭದಲ್ಲಿ ನನಗೆ ಒಂದು ಗಾದೆ ಜ್ಞಾಪಕಕ್ಕೆ ಬರುತ್ತದೆ. ಅವೇನೆಂದರೆ "ಎಲ್ಲಿ ನೋಡಿದರೂ ಅಲ್ಲೆಲ್ಲಾ ನೀರು ಇದೆ, ಆದರೆ ಕುಡಿಯುವುದಕ್ಕೆ ಮಾತ್ರ ಒಂದು ತೊಟ್ಟೂ ನೀರು ಇಲ್ಲ" ಎಂಬಂತೆ ಈವೊತ್ತು ನಮ್ಮ ಪ್ರದೇಶ ಕುಡಿಯುವುದಕ್ಕೆ ಒಂದು ತೊಟ್ಟೂ ನೀರು ಇಲ್ಲದಂತೆ ಆಗಿದೆ. ಕೋಲಾರ ಪ್ರದೇಶದ ಕಡೆ ಅನಾವೃಷ್ಟಿಯಾದರೆ ನಮ್ಮ ಪ್ರದೇಶದಲ್ಲಿ ಎಲ್ಲಾ ಕಡೆಯೂ ನೀರು ಇದ್ದರೆ ಕುಡಿಯಲು ಮಾತ್ರ ಒಂದು ತೊಟ್ಟೂ ನೀರು ಇಲ್ಲದಂತಾಗಿದೆ. ಈಗ ಇರತಕ್ಕಂಥಾ ನೀರನ್ನು ಕುಡಿದರೆ ರೋಗಗಳು ಬರುತ್ತಿದೆ. ಆದುದರಿಂದ ಮಾನ್ಯ ಸಚಿವರು ಸಮಗ್ರವಾಗಿ ಆಲೋಚನೆ ಮಾಡುವುದು ಬಹಳ ಅಗತ್ಯ ಇದೆ. ಎಂದು ನಾನು ಈ ಸಂದರ್ಭದಲ್ಲಿ

ಹೇಳಬಯಸುತ್ತೇನೆ. ತಾತ್ಕಾಲಿಕವಾಗಿ ಈ ಸಮಸ್ಯೆ ಪರಿಹಾರವಾಗುವುದಿಲ್ಲ. ತಾತ್ಕಾಲಿಕವಾಗಿ ಮನಸ್ಸು ಮಾಡಿ ಸಹಾಯ ಮಾಡಿದರೂ ಸಹ ಈ ಅಗ್ರಿಕಲ್‌ಚರಲ್ ಲೇಬರರ್ಸ್‌ನ್ನು ವಕ್ಕಲೆಬ್ಬಿಸಿದ ಹಾಗಾಗುತ್ತದೆ. ಇದರಿಂದ ಅವರಿಗೇನೂ ಅನುಕೂಲವಾಗುವುದಿಲ್ಲ. ಲ್ಯಾಂಡ್ ಗ್ರ್ಯಾಂಡ್ ಸೆಕ್ಷನ್ ೩೮ರ ಪ್ರಕಾರ ಅವರಿಗೆ ತಮ್ಮ ಭೂಮಿ ತಮಗೇ ಸಿಗುತ್ತದೆ, ಲ್ಯಾಂಡ್‌ಲಾರ್ಡ್ಸ್ ಆಗುತ್ತೇವೆ ಎನ್ನುವ ಒಂದು ಭಾವನೆ ಇದ್ದುದ್ದು, ಈಗ ಬಂದಿರತಕ್ಕಂಥಾ ನೆರೆಯಿಂದ ಈ ಒಂದು ವರ ಪ್ರಸಾದವೆಲ್ಲಾ ಗುಡ್ಡಕ್ಕೆ ಹಾರಿ ಹೋದಂತಾಗಿದೆ.

ಆದ್ದರಿಂದ ಈ ಜನರಿಗೆ ತಾತ್ಕಾಲಿಕ ಪರಿಹಾರ ಕೊಟ್ಟರೆ ಏನೂ ಪ್ರಯೋಜನವಾಗುವುದಿಲ್ಲ. ಶಾಶ್ವತವಾದ ಪರಿಹಾರಗಳನ್ನು ಒದಗಿಸಬೇಕು. ಈಗ ಅವರು ಎಲ್ಲಿದ್ದಾರೋ, ಅಂತಹ ಕಡೆಯಲ್ಲಿಯೇ ಕುಡಿಯುವ ನೀರಿನ ಸೌಲಭ್ಯ, ಶಾಲೆ ಹಾಗೂ ಇನ್ನಿತರ ಸೌಲಭ್ಯಗಳನ್ನು ಒದಗಿಸಿಕೊಡಬೇಕು ಮತ್ತು ಅಲ್ಲಿಯೇ ಏನಾದರು ಕೆಲಸ ಮಾಡುವಂತಹ ಸನ್ನಿವೇಶವನ್ನು ಕಲ್ಪಿಸಿಕೊಡುವುದು ಸರ್ಕಾರದ ಕರ್ತವ್ಯವಾಗಿದೆ ಎಂದು ನಾನು ಭಾವಿಸುತ್ತೇನೆ. ಈ ಬಗ್ಗೆ ನಾವೂ ಸಹ ಕೆಲವು ಸಲಹೆಗಳನ್ನು ಕೊಡಲು ತಯಾರಿದ್ದೇವೆ. ಮುಖ್ಯವಾಗಿ ಈ ವಿಚಾರದಲ್ಲಿ ಒಂದು ತಜ್ಞರಿಂದ ಕೂಡಿದ ಕಮಿಟಿಯನ್ನು ರಚನೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಈ ಭಾಗದಲ್ಲಿ ನದಿಗಳು ಮತ್ತು ಉಪನದಿಗಳು ರಭಸದಿಂದ ಹರಿದು ಸಾವಿರಾರು ಎಕರೆ ಭೂಮಿ ವ್ಯವಸಾಯಕ್ಕೆ ಅನರ್ಹವಾಗುತ್ತಿರುವ ಕಾರಣದಿಂದ, ಸಾಯಿಲ್-ಕನ್‌ಸರ್‌ವೇಷನ್ ಹಾಗೂ ಬಂಡಿಂಗ್ ಕೆಲಸದ ಅಗತ್ಯವಿದೆ. ಸರ್ಕಾರದವರು ಈ ಒಂದು ಸಮಸ್ಯೆಯನ್ನು ಸರಿಯಾಗಿ ಅರ್ಥ ಮಾಡಿಕೊಂಡು ವೈಜ್ಞಾನಿಕವಾಗಿ ಬಗೆಹರಿಸಲು ಪ್ರಯತ್ನ ಮಾಡಬೇಕು, ಮತ್ತು ಈ ಒಂದು ರಿಲೀಫ್-ವರ್ಕ್ಸ್‌ಗೆ ಉತ್ತರ ಪ್ರದೇಶ ಹಾಗೂ ಬಿಹಾರ ರಾಜ್ಯದವರು ಕೇಂದ್ರದಿಂದ ತಮ್ಮ ಒಂದು ಪ್ರಭಾವವನ್ನು ಬೀರುವುದರ ಮೂಲಕ ಹೆಚ್ಚಿನ ಹಣದ ಸಹಾಯ ಪಡೆದುಕೊಂಡಂತೆ ನಮ್ಮ ಸರ್ಕಾರದವರು ಕೂಡ ಪಡೆಯಬೇಕೆಂದು ಕೇಳಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ).—ಮಾನ್ಯ ಅಧ್ಯಕ್ಷರೇ, ಈ ವಿಷಯವನ್ನು ನಾನು ಬಹಳ ವೇದನೆಯಿಂದ ಇಲ್ಲಿ ಪ್ರಸ್ತಾಪ ಮಾಡಬೇಕಾಗಿದೆ, ಏಕೆಂದರೆ ನಮ್ಮ ಭಾಗದಲ್ಲಿ ಅತಿವೃಷ್ಟಿ ಹಾಗೂ ಅನಾವೃಷ್ಟಿ ಈ ಎರಡರ ಅನುಭವವನ್ನೂ ನಾವು ಹೊಂದಿದ್ದೇವೆ. ಈಗಿನ ಅತಿವೃಷ್ಟಿಯ ಬಗ್ಗೆ ಅನೇಕ ಮಾನ್ಯ ಸದಸ್ಯರು ಗಂಭೀರವಾಗಿ ಪ್ರಸ್ತಾಪ ಮಾಡಿರುವ ಕಾರಣ ನಾನು ಹೆಚ್ಚು ಹೇಳುವುದಿಲ್ಲ ಈಗ ನಮ್ಮ ಮುಂದೆ ಎರಡು ಸಮಸ್ಯೆಗಳಿವೆ ಒಂದು, ಈಗ ತ್ವರಿತವಾಗಿ ಕೈಕೊಳ್ಳಬೇಕಾಗಿರುವ ಪರಿಹಾರದ ಕೆಲಸಗಳು; ಎರಡು, ಶಾಶ್ವತವಾಗಿ ಯಾವ ರೀತಿಯಿಂದ ಪರಿಹಾರ ಕೈಕೊಳ್ಳಬೇಕು ಎಂಬುದು. ನನ್ನ ಒಂದು ಮತಕ್ಷೇತ್ರದಲ್ಲಿಯೇ ಕರಲಕೋಪ್ಪ, ಹಾಗನೂರು, ತಳಕವಾಡ, ಆಲೂರು, ಬೀರನೂರು, ಗೋವಿನಕೊಪ್ಪ, ಕಳಸ ಹಾಗೂ ಕಿತ್ತಲಿ ಹಳ್ಳಿಗಳು ಈ ಮಳೆಯ ನೀರಿನ ಪ್ರವಾಹಕ್ಕೆ ತುತ್ತಾಗಿವೆ. ಕಳೆದ ನಾಲ್ಕು ವರ್ಷಗಳಿಂದಲೂ ಈ ಹಳ್ಳಿಗಳು ಮಳೆಯ ನೀರಿನ ಪ್ರವಾಹಕ್ಕೆ ತುತ್ತಾಗುತ್ತಿವೆ. ಈ ಹಳ್ಳಿಗಳು ಕೇವಲ ಮಳೆಯ ನೀರಿನ ಹಾವಳಿಗೆ ತುತ್ತಾಗುತ್ತಿಲ್ಲ, ಇದರ ಜೊತೆಗೆ ಮಾನ್ಯ ಆರ್. ಎಸ್. ಪಾಟೀಲ್ ಅವರು ಹೇಳಿದಂತೆ ಮಲಪ್ರಭಾ ಡ್ಯಾಮ್ ಸೈಟ್‌ನಿಂದ ಬಿಡತಕ್ಕಂಥ ನೀರಿನಿಂದಲೂ ಈ ಹಳ್ಳಿಯ ಜನರು ತೊಂದರೆ ಅನುಭವಿಸುತ್ತಿದ್ದಾರೆ. ಈ ವಿಷಯವನ್ನು ನಾನು ಕಳೆದ ೩-೪ ವರ್ಷಗಳಿಂದಲೂ ಸರ್ಕಾರದ ಗಮನಕ್ಕೆ ತರುತ್ತಿದ್ದರೂ ಸಹ ಆ ಭಾಗದಲ್ಲಿ ಶಾಶ್ವತ ಪರಿಹಾರವನ್ನಾಗಲೀ ಅಥವಾ ಪರಿಹಾರ ಕೊಡುವ ಕೆಲಸವನ್ನಾಗಲೀ ಕೈಗೊಂಡಿಲ್ಲ. ನಾನು ಹೋದ ವರ್ಷ ಸಹ ಈ ವಿಷಯವನ್ನು ಪ್ರಸ್ತಾಪ ಮಾಡಿದಾಗ ಸರ್ಕಾರದವರು ಪರಿಹಾರ ಕೊಡುತ್ತೇವೆಂದು ಹೇಳಿದ್ದರು. ಆದು ಕೂಡಲೇ ಕೊಡದೆ ಹೋದವರ್ಷದ ಪರಿಹಾರವನ್ನು ಈ ವರ್ಷ ಕೊಟ್ಟಿದ್ದಾರೆಂದು ನಾನು ಕೇಳಿದ್ದೇನೆ. ಈ ವಿಚಾರದಲ್ಲಿ ನಾನು ತಮ್ಮ ಮೂಲಕ ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಪ್ರವಾಹ ಯಾವಾಗ ಬರುತ್ತದೆಂದು ಹೇಳುವುದಕ್ಕಾಗುವುದಿಲ್ಲ, ಮತ್ತು ಡ್ಯಾಮ್‌ನಿಂದ ನೀರನ್ನು ಯಾವ ವೇಳೆಯಲ್ಲಿ ಬಿಡುತ್ತಾರೆಂಬುದೂ ಸಹ ಗೊತ್ತಿರುವುದಿಲ್ಲವಾದ ಕಾರಣ, ಆ ಹಳ್ಳಿಯ ಜನರು ನೆಮ್ಮದಿಯಿಂದ ಬಾಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದಕಾರಣ ಅವರಿಗೆ ಒಂದು ಶಾಶ್ವತವಾದಂಥ ಒಂದು ನೆಲೆಯನ್ನು ಒದಗಿಸಿ ಕೊಟ್ಟರೆ ಅವರು ನೆಮ್ಮದಿಯಿಂದ ಅಲ್ಲಿ ಬಾಳುವುದಕ್ಕೆ ಅವಕಾಶವಾಗುತ್ತದೆಂದು ಹೇಳುತ್ತೇನೆ. ಇದರ

ಜೊತೆಗೆ ನೆರೆಯ ಹಾವಳಿಯಿಂದ ರೈತರಿಗೆ ಬೆಳೆಯ ನಷ್ಟವಾಗಿದ್ದರೆ, ತಮ್ಮ ಆಸ್ತಿಗಳನ್ನು ಏನಾದರೂ ಕಳೆದುಕೊಂಡಿದ್ದರೆ, ಪಂಪ್‌ಸೆಟ್ಟುಗಳು ನಷ್ಟವಾಗಿದ್ದರೆ, ಅದಕ್ಕೆಲ್ಲಾ ಕೂಡಲೇ ಪರಿಹಾರವನ್ನು ಒದಗಿಸಿಕೊಡಬೇಕೆಂದು ತಮ್ಮ ಮೂಲಕ ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ.

†ಶ್ರೀಮತಿ ಅನುಸೂಯ ಗಜಾನನ ಶರ್ಮ (ಅಂಕೋಲ).—ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಈ ವಿಚಾರದಲ್ಲಿ ೩೧೨ನೇ ರೂಲ್ ಪ್ರಕಾರ ಒಂದು ನೋಟೀಸ್ ಕೊಟ್ಟಿದ್ದೆ. ಇವೊತ್ತೇ ಈ ವಿಚಾರವನ್ನು ತೆಗೆದುಕೊಂಡಿದ್ದು ಬಹಳ ಒಳ್ಳೆಯದಾಯಿತು. ೧೯೭೮ನೇ ಇಸವಿಯಲ್ಲಿ ನನ್ನ ಭಾಗದಲ್ಲಿ ಇದೇ ರೀತಿಯ ನೆರೆ ಹಾವಳಿ ಆಯಿತು. ಆಗ ನಾನು ಆ ಭಾಗಗಳಿಗೆ ಹೋದಾಗ, ಮನೆ ಮಠ, ಆಕಳು ಮೊದಲುಗೊಂಡು ಎಲ್ಲವನ್ನೂ ಕಳೆದುಕೊಂಡು ಜೀವ ಉಳಿಸಿಕೊಂಡು ಬಂದವರು, ನನ್ನ ಮುಂದೆ ಬಂದು ತಮ್ಮ ಕಷ್ಟವನ್ನು ಹೇಳಿಕೊಂಡ ಚಿತ್ರ ಈಗಲೂ ನನ್ನ ಕಣ್ಣಮುಂದೆ ಬಂದು ಕಾಣುತ್ತಿದೆ. ನಾನು ಆ ಜನರ ಪ್ರತಿನಿಧಿಯಾದ ಕಾರಣ. ಅವರುಗಳು ನನ್ನ ಮುಂದೆ ಬಂದು ಧೈರ್ಯವಾಗಿ ತಮ್ಮ ಕಷ್ಟವನ್ನು ಹೇಳಿಕೊಳ್ಳುತ್ತಾರೆ. ನನ್ನ ಕ್ಷೇತ್ರದ ಹಳ್ಳಿಗಳಿಗೆ ವೈರ್‌–ಲೆಸ್ ಸಂಪರ್ಕವಿಲ್ಲ. ಈ ಒಂದು ಸಂಪರ್ಕವನ್ನು ಏರ್ಪಡಿಸಿದರೆ, ಇಂತಹ ಸಂದರ್ಭಗಳಲ್ಲಿ ಜಿಲ್ಲಾ ಕೇಂದ್ರಗಳಿಗೆ ಸಂಪರ್ಕ ಪಡೆಯಲು ಅನುಕೂಲವಾಗುತ್ತದೆ. ಇಲ್ಲದಿದ್ದರೆ ಆ ಜನರ ಜೀವ ಹೋದರೂ ಸಹ ಯಾರಿಗೂ ತಿಳಿಸಲು ಸಾಧ್ಯವಾಗುವುದಿಲ್ಲ. ನನ್ನ ಭಾಗದಲ್ಲಿ ತುಂಬಾ ಮಳೆಯಾಗಿ, ನೆರೆ ಬಂದು ಬಹಳ ಹಾನಿಯಾಗಿದೆ ಎಂದು ರೇಡಿಯೋ ಮೂಲಕ ತಿಳಿದುಕೊಂಡೆ. ನನ್ನ ಮತಕ್ಷೇತ್ರವಾದ ಅಂಕೋಲ, ಯಲ್ಲಾಪುರ, ಸಿರ್ಸಿ ಮುಂತಾದ ಪ್ರದೇಶಗಳು ನದಿಗಳಿಂದ ಕೂಡಿದ ಪ್ರದೇಶವಾದ ಕಾರಣ, ಈ ಮಳೆಯ ಹಾನಿಯಿಂದ ಅಡಿಕೆ, ಕಬ್ಬು ಮುಂತಾದ ಬೆಳೆಗಳಿಗೆಲ್ಲಾ ಹಾನಿಯಾಗಿದೆ. ೧೯೭೮ರಲ್ಲಿ ಇದೇ ರೀತಿಯಲ್ಲಿ ಮಳೆ ನೀರಿನ ಹಾವಳಿ ಬಂದು ಜನರು ತೊಂದರೆಗೊಳಗಾದಾಗ, ೧೦೦ ರಿಂದ ೨೦೦ ರೂಪಾಯಿಗಳವರೆಗೆ ಪರಿಹಾರ ಕೊಡಲು ತಹಶೀಲ್‌ದಾರರಿಗೆ ಅಧಿಕಾರವಿದೆ. ಜಿಲ್ಲಾಧಿಕಾರಿಗಳಿಗಾದರೆ ಇದಕ್ಕೂ ಹೆಚ್ಚು ಪರಿಹಾರ ಕೊಡಲು ಅಧಿಕಾರವಿದೆ ಹಾಗೂ ಸಚಿವರ ಮಟ್ಟದಲ್ಲಿಯಾದರೆ ಅತಿ ಹೆಚ್ಚಿನ ಪರಿಹಾರ ಕೊಡಲು ಅವಕಾಶವಿದೆ ಎಂದು ನಾನು ತಿಳಿದುಕೊಂಡೆ. ಆದ್ದರಿಂದ, ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ನಮ್ಮ ಭಾಗದ ಜನರಿಗೆ ಹೆಚ್ಚಿನ ಪರಿಹಾರ ಸಿಗುವಂತಹ ವ್ಯವಸ್ಥೆ ಮಾಡಬೇಕು ಎಂದು; ಏಕೆಂದರೆ, ನಮ್ಮ ಭಾಗದ ಜನರು ಹಿಂದುಳಿದ ಪ್ರದೇಶದ ಜನರಾದ ಕಾರಣ ಅವರಿಗೆ ಹೆಚ್ಚಿನ ವಿಚಾರಗಳು ಗೊತ್ತಿರುವುದಿಲ್ಲ, ಸಾಲ ಯಾವ ರೀತಿ ಸಿಗುತ್ತದೆಂಬುದು ಸಹ ಅವರಿಗೆ ಗೊತ್ತಿರುವುದಿಲ್ಲ, ಆದಕಾರಣ, ಕೂಡಲೇ ಅಲ್ಲಿಗೆ ತಮ್ಮ ಅಧಿಕಾರಿಗಳನ್ನು ಕಳುಹಿಸಿಕೊಟ್ಟು ಯಾರು ಯಾರಿಗೆ ಎಷ್ಟೆಷ್ಟು ಹಾನಿಯಾಗಿದೆ ಎಂಬ ಬಗ್ಗೆ ಪಂಚನಾಮೆ ಮಾಡಿಸಬೇಕು. ಮತ್ತು ಅವರಿಗೆ ಕೂಡಲೇ ಹೆಚ್ಚಿನ ಆರ್ಥಿಕ ಸಹಾಯವನ್ನು ದೊರಕಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮಾನ್ಯ ಭಾಸ್ಕರಶೆಟ್ಟರು ಹೇಳಿದಂತೆ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟಂತೆ ಇಬ್ಬರು ಮಂತ್ರಿಗಳಿದ್ದಾರೆ ಹಾಗೂ ೧೦–೧೫ ಜನ ಶಾಸಕರಿದ್ದಾರೆ. ಆದರೆ ನಮ್ಮ ಜಿಲ್ಲೆಯ ಕಷ್ಟ ಹೇಳಿಕೊಳ್ಳುವುದಕ್ಕೆ ನಮ್ಮ ಜಿಲ್ಲೆಗೆ ಸೇರಿದ ಒಬ್ಬರೂ ಮಂತ್ರಿಗಳಿಲ್ಲ. ಆದರೂ ಒಂದು ಸಮಾಧಾನದ ವಿಚಾರವೆಂದರೆ, ಮೀನುಗಾರಿಕೆಯ ಬಗ್ಗೆ ಬಹಳ ಕಳಕಳಿಯಿರುವಂತಹ ಶ್ರೀಮತಿ ಮನೋರಮಾ ಮಧ್ವರಾಜ್ ಅವರು ನಮ್ಮ ಜಿಲ್ಲೆಯನ್ನು ಪ್ರತಿನಿಧಿಸುತ್ತಾರೆ. ನಮ್ಮ ಜಿಲ್ಲೆಯಲ್ಲಿ ಕೇವಲ ನೆರೆಯ ಹಾವಳಿಯಿಂದ ಮಾತ್ರ ಜನರು ತೊಂದರೆಪಡುತ್ತಿಲ್ಲ, ಸಮುದ್ರ ಕೊರೆತದಿಂದ ಸಹ ಜನರು ತೊಂದರೆ ಪಡುತ್ತಿದ್ದಾರೆ. ಸಮುದ್ರದ ಕೊರೆತದಿಂದ *ಹಡವ ಗ್ರಾಮದ ಜನರು ಮನೆಮಠ ಕಳೆದುಕೊಂಡಿದ್ದಾರೆ. ಈ ಗ್ರಾಮ ನಮ್ಮ ಅಂಕೋಲ ತಾಲ್ಲೂಕಿಗೆ ಸೇರಿದೆ. ಈ ಬಗ್ಗೆ ನಾನು ಕಾಲಿಂಗ್ ಅಟೆನ್‌ಷನ್ ನೋಟೀಸ್ ಸಹ ಕೊಟ್ಟಿದ್ದೇನೆ. ಈ ರೀತಿ ತೊಂದರೆಗೊಳಗಾದ ಜನರಿಗೆ ನಿಮ್ಮ ಅಧಿಕಾರಿಗಳ ಮೂಲಕ ಕೂಡಲೇ ಪರಿಹಾರವನ್ನು ಒದಗಿಸಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ನಮ್ಮ ಜಿಲ್ಲೆಯ ಪರಿಸ್ಥಿತಿ ಏನೆಂಬುದು ಮಾನ್ಯ ಕಂದಾಯ ಸಚಿವರಿಗೆ ಗೊತ್ತಿರುವ ಕಾರಣದಿಂದ ನನಗೆ ಎಷ್ಟೋ ಸಮಾಧಾನವಾಗುತ್ತಿದೆ. ಹೊನ್ನಾವರದಲ್ಲಿ ೫೦೦ ಮನೆಗಳು ಹಾಳಾಗಿವೆ ಎಂದು ಕೇಳಿದ್ದೇನೆ. ಮುಖ್ಯವಾಗಿ ಹೇಳಬೇಕೆಂದರೆ, ನನ್ನ ಮತಕ್ಷೇತ್ರದಲ್ಲಿ ಹೆಚ್ಚಿನ ತೊಂದರೆಯಾಗಿದೆ. ಆದಕಾರಣ ಇಲ್ಲಿಂದ ಒಂದು ಕಮಿಟಿಯನ್ನು ಅಲ್ಲಿಗೆ ಕಳುಹಿಸಿಕೊಡುವುದಕ್ಕೆ ಮೊದಲು ಕಷ್ಟದಲ್ಲಿ ಸಿಕ್ಕಿರುವಂತಹ ಜನರ ಕಡೆಗೆ ತಮ್ಮ ಅಧಿಕಾರಿಗಳನ್ನು ಕಳುಹಿಸಿಕೊಟ್ಟು ಆ ಜನರಿಗೆ ಸಹಾಯ ಸಿಗುವಂತಹ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಂಡು ನನಗೆ ಇಷ್ಟು ಹೇಳಲು ಅವಕಾಶ ಮಾಡಿಕೊಟ್ಟ ತಮಗೆ ಅಭಾರ ಮನ್ನಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

೧೨-೩೦ ಪಿ. ಎಂ.

† ಆನಂದಕುಂದ ಹೆಗ್ಡೆ (ಬ್ರಹ್ಮಾವರ).—ಮಾನ್ಯ ಅಧ್ಯಕ್ಷರೇ, ನಾನು ಈ ವಿಚಾರದಲ್ಲಿ ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಒಂದೆರಡು ವಿಚಾರಗಳನ್ನು ಮಾತ್ರ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ನಮ್ಮ ಜಿಲ್ಲೆಯಲ್ಲಿ ಸುಮಾರು ೧೩ ನದಿಗಳು ಹರಿಯುತ್ತವೆ. ಈ ನದಿಗಳು ನೀರು ತುಂಬಿ ಹರಿಯುವಾಗ ಸುತ್ತಮುತ್ತಲಿನ ಗ್ರಾಮಗಳಿಗೆ ನುಗ್ಗಿ ತುಂಬಾ ಹಾವಳಿಯನ್ನು ಉಂಟು ಮಾಡುತ್ತವೆ. ಈ ನದಿಗಳ ನೀರಿನ ಹಾವಳಿಯನ್ನು ತಪ್ಪಿಸುವುದಕ್ಕೆ ಕೇಂದ್ರ ಸರ್ಕಾರದವರೂ ಕೂಡ ತಮ್ಮ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಈ ೧೩ ನದಿಗಳ ನೀರನ್ನು ೮೦ ಮೈಲಿಯೊಳಗೆ ನಿಯಂತ್ರಿಸುವುದಕ್ಕೆ ೧೩ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕಾಗಿ ಅವರು ಒಪ್ಪಿಗೆಯನ್ನು ಕೊಟ್ಟಿದ್ದಾರೆ ಅದು ಈಗಾಗಲೇ ನಮ್ಮ ಸರ್ಕಾರದ ಮುಂದೆ ಇದೆ. ಅದು ಇನ್ನೂ ಕಾರ್ಯಗತವಾಗಲಿಲ್ಲ. ಅದು ಕಾರ್ಯಗತವಾದರೆ ಈ ನದಿಗಳ ನೀರಿನ ಹಾವಳಿಯು ನಮ್ಮ ಕಡೆ ಬೇಗ ಪರಿಹಾರವಾದೀತು ಎಂದು ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ೧೪೦ ರಿಂದ ೧೫೦ ಇಂಚುಗಳಷ್ಟು ಮಳೆ ಬರುವ ಕ್ಷೇತ್ರಗಳಲ್ಲಿ ನೀರಿನ ಹಾವಳಿಯ ಪರಿಸ್ಥಿತಿ ಯಾವತ್ತೂ ಇದ್ದೇ ಇದೆ. ಇದನ್ನು ತಾವು ಆದಷ್ಟು ಜಾಗ್ರತೆ ಪರಿಹಾರ ಮಾಡಬೇಕು. ಈಗ ನಮ್ಮ ಕಡೆ ಅಂದಾಡಿ ಮತ್ತು ಉಪ್ಪೂರುಗಳಲ್ಲಿ ಈ ನದಿಗಳ ಪಾತ್ರ ಬದಲಾಯಿಸುತ್ತಿದೆ. ಮತ್ತು ನದಿಗಳು ಹರಿಯುವ ದಿಕ್ಕೇ ಬದಲಾಯಿಸುತ್ತಿದೆ ಇದರಿಂದ ಸುತ್ತಮುತ್ತಲಿನ ಗ್ರಾಮಗಳು ನದಿಗಳ ನೀರಿನ ಹಾವಳಿಗೆ ಸಿಕ್ಕಿ ಕೊಚ್ಚಿಕೊಂಡು ಹೋಗುವ ಪರಿಸ್ಥಿತಿ ಇದೆ. ಇದೂ ಅಲ್ಲದೇ ಬೆಳೆಗಳೂ ಸಹ ನೀರಿನ ಹಾವಳಿಗೆ ಸಿಕ್ಕಿ ಕೊಚ್ಚಿಕೊಂಡು ಹೋಗುವ ಪರಿಸ್ಥಿತಿ ಇದೆ. ಇದಕ್ಕೆ ತಾವು ಸೂಕ್ತ ಪರಿಹಾರವನ್ನು ಶೀಘ್ರದಲ್ಲಿ ಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಎಂ. ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಅಧ್ಯಕ್ಷರೇ, ಈಗಾಗಲೇ ಅನೇಕ ಮಾನ್ಯ ಸದಸ್ಯರುಗಳು ಅವರ ಜಿಲ್ಲೆಯ ನೀರಿನ ಹಾವಳಿಯ ಬಗ್ಗೆ ಅವರವರ ಅಭಿಪ್ರಾಯಗಳನ್ನು ಸೂಚನೆ ಮಾಡಿದ್ದಾರೆ ಹಾಗೂ ಅವರವರ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ. ಹಾಗೆಯೇ ನಮ್ಮ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಈ ವಿಚಾರದಲ್ಲಿ ನಾನು ಕೆಲವು ಸಲಹೆಗಳನ್ನು ಕೊಡುವುದಕ್ಕೆ ಬಯಸುತ್ತೇನೆ. ಅನೇಕ ಮಾನ್ಯ ಸದಸ್ಯರುಗಳು ಹೇಳಿದ ಹಾಗೆ ಈ ಮಲೆನಾಡು ಪ್ರದೇಶದಲ್ಲಿ ಹೆಚ್ಚಾಗಿ ಪ್ರವಾಹದ ಹಾವಳಿ ಆಗುತ್ತಾ ಇದೆ. ಇದರಿಂದಾಗಿ ಬೆಳೆಗಳು ಹಾಳಾಗಿ ಹೋಗುತ್ತಾ ಇದೆ. ಈಗ ಮಲೆನಾಡಿನಲ್ಲಿ ಯಾವ ಒಂದು ಪರಿಸ್ಥಿತಿ ಇದೆಯೋ ಅದೇ ಪರಿಸ್ಥಿತಿ ನಮ್ಮ ಭಾಗದಲ್ಲಿ ಬರುತ್ತಾ ಇದೆ. ನಮ್ಮ ಬೆಳಗಾಂ ಜಿಲ್ಲೆಯಲ್ಲಿರತಕ್ಕಂಥ ಹಿಡಕಲ್ ಮತ್ತು ನವಿಲುತೀರ್ಥ ಜಲಾಶಯಗಳಿಂದ ನಮ್ಮ ಭಾಗದಲ್ಲಿ ಇರತಕ್ಕಂಥ ಹಳ್ಳಿಗಳಿಗೆ ಬಹಳ ಅನಾನುಕೂಲತೆಗಳು ಆಗುತ್ತಿವೆ. ನಮ್ಮ ಭಾಗದಲ್ಲಿ ಹೆಚ್ಚು ಮಳೆಯಾಗಿ ಪ್ರವಾಹ ಬಂದು ಅನೇಕ ಗ್ರಾಮಗಳು ಜಮೀನುಗಳು ಮುಳುಗಡೆಯಾಗುತ್ತಿವೆ. ಮುಳುಗಡೆಯಾದಂಥ ಜಮೀನುಗಳಿಗೆ ಪರಿಹಾರಧನ ಸಿಕ್ಕುತ್ತಾ ಇಲ್ಲ. ಸರ್ಕಾರದವರು ತ್ವರಿತವಾಗಿ ಅಂತಹ ಜಮೀನುಗಳಿಗೆ ಪರಿಹಾರಧನವನ್ನು ಕೊಡುವುದಕ್ಕೆ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಸುಮಾರು ೨೦ ವರ್ಷಗಳಿಂದ ನಮ್ಮ ಭಾಗದಲ್ಲಿ ಜನರು ಈ ರೀತಿಯ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಅವರಿಗೆ ತ್ವರಿತವಾಗಿ ಪರಿಹಾರವನ್ನು ಕೊಡಬೇಕು. ಯಾರಿಗೆ ನಿಜವಾಗಿಯೂ ತೊಂದರೆಯಾಗಿ ಪರಿಹಾರ ಧನವನ್ನು ಪಡೆದುಕೊಳ್ಳಲು ಅರ್ಹರಾಗಿರುತ್ತಾರೋ ಅಂತಹವರ ಅರ್ಜಿಗಳನ್ನು ಪುರಸ್ಕರಿಸಿ ಪರಿಹಾರ ಧನವನ್ನು ಕೊಡುವಂಥ ಕಾರ್ಯಕ್ರಮವನ್ನು ಏರ್ಪಡಿಸಬೇಕು. ಇಲ್ಲದಿದ್ದರೆ ಪ್ರವಾಹದ ತೊಂದರೆಗೆ ಒಳಗಾಗದೇ ಇರತಕ್ಕಂಥವರು ಯಾರೋ ಒಂದು ಅರ್ಜಿಯನ್ನು ಕೊಡುತ್ತಾರೆ ಎಂದರೆ ಅವರಿಗೂ ಪರಿಹಾರ ಧನವನ್ನು ಕೊಡಬೇಕಾದಂಥ ಪ್ರಸಂಗ ಬರಬಹುದು. ಈ ಬಗ್ಗೆ ತಾವು ಅರ್ಹರಾದವರನ್ನು ನೋಡಿ ಅಂತಹವರಿಗೆ ಪರಿಹಾರಧನವನ್ನು ತ್ವರಿತವಾಗಿ ಕೊಡಬೇಕು. ನಮ್ಮ ಭಾಗದಲ್ಲಿ ಬಡಕುಂದರಗಿ ಮತ್ತು ಮಂದರೆ ಗ್ರಾಮಗಳಲ್ಲಿ ಅತಿ ಹೆಚ್ಚು ಮಳೆ ಬಿದ್ದದ್ದರಿಂದ ಪ್ರವಾಹ ಉಂಟಾಗಿ ಇಡೀ ಗ್ರಾಮಗಳೇ ಮುಳುಗಡೆಯಾಗಿ ಜನರಿಗೆ ಬಹಳ ತೊಂದರೆಯಾಗಿದೆ. ಆ ಭಾಗದ ಜನರಿಗೆ ೩೦ ವರ್ಷಗಳಿಂದ ಈ ರೀತಿಯ ತೊಂದರೆಯುಂಟಾಗುತ್ತಿದೆ. ಇಂತಹ ಸಂದರ್ಭದಲ್ಲಿ ಅಕ್ಕಪಕ್ಕದ ಹಳ್ಳಿಗಳಿಗೆ ಹೋಗಲು ಸಂಪರ್ಕದ ವ್ಯವಸ್ಥೆಯೂ ಸಿಕ್ಕುವುದಿಲ್ಲ. ಆದ್ದರಿಂದ ಅಲ್ಲಿ ಸೇತುವೆಯನ್ನು ಕಟ್ಟುವುದಕ್ಕೆ ತಾವು ವ್ಯವಸ್ಥೆ ಮಾಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ (ಬೇಲೂರು).—ಮಾನ್ಯ ಅಧ್ಯಕ್ಷರೇ, ಈ ಸಾರಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಅನೇಕ ಕಡೆ ಮಳೆ ಬಹಳವಾಗಿ ಬಿದ್ದಿದೆ. ನಮ್ಮ ಹಾಸನ ಜಿಲ್ಲೆಯ ಬೇಲೂರು, ಹಾಲೂರು ಮತ್ತು ಸಕಲೇಶಪುರ ತಾಲ್ಲೂಕುಗಳಲ್ಲಿ ಈ ಸಾರಿ ಬಿದ್ದ ಜಾಸ್ತಿ ಮಳೆಯಿಂದಾಗಿ ಅನೇಕ ಅನಾಹುತಗಳು ನಡೆದಿವೆ. ನಮ್ಮ ಬೇಲೂರು ತಾಲ್ಲೂಕಿನಲ್ಲಿ ಎಗಚಿ ನದಿ ಹಾಗೂ ಅದರ ಉಪ ನದಿಗಳು ತುಂಬಿ ಹರಿದಿರುವುದರಿಂದ ಸಾವಿರಾರು ಎಕರೆಗಳಷ್ಟು ಗದ್ದೆಯಲ್ಲಿ ಬೆಳೆದಂಥ ಬೆಳೆ ನೀರಿನಲ್ಲಿ ಮುಳುಗಡೆಯಾಗಿದೆ. ಹೀಗೆ ಸಾವಿರಾರು ಎಕರೆಗಳಷ್ಟು ಗದ್ದೆಯ ಬೆಳೆ ನೀರಿನಲ್ಲಿ ಮುಳುಗಡೆಯಾಗಿರುವುದರಿಂದ ಅಲ್ಲಿಯ ರೈತರಿಗೆ ತುಂಬಾ ಅನಾನುಕೂಲವಾಗಿದೆ ಅವರೆಲ್ಲಾ ಸಣ್ಣಪುಟ್ಟ ರೈತರಾಗಿರುವುದರಿಂದ ಅವರ ಜಮೀನುಗಳಿಗೆ ಕೂಡ ಬಹಳ ತೊಂದರೆಯಾಗಿದೆ, ನಮ್ಮ ಬೇಲೂರು, ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳಲ್ಲಿ ಮಳೆ ಜಾಸ್ತಿಯಾಗಿ ಬಿದ್ದಿರುವುದರಿಂದ ಅನೇಕ ಕಡೆ ವಾಸದ ಮನೆಗಳು ಕುಸಿದುಬಿದ್ದಿವೆ; ಅನೇಕ ಜನರು ಈಗ ವಸತಿಹೀನರಾಗಿದ್ದಾರೆ, ಆದ್ದರಿಂದ ತಾವು ಈ ಕೂಡಲೇ ಎಲ್ಲೆಲ್ಲಿ ಮಳೆಯಿಂದಾಗಿ ಅನಾಹುತ ನಡೆದಿದೆ, ಯಾರ್ಯಾರು ವಸತಿಹೀನರಾಗಿದ್ದಾರೆ, ಯಾರ್ಯಾರು ತೊಂದರೆಗೆ ಒಳಗಾಗಿದ್ದಾರೆ ಆ ಜನರಿಗೆ ಪರಿಹಾರವನ್ನು ಕೊಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಬೇಕು ಎಂದು ಹೇಳುತ್ತೇನೆ. ತೊಂದರೆಗೆ ಒಳಗಾಗಿರತಕ್ಕಂಥ ಜನರನ್ನು ಗುರುತಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಎಲ್ಲೆಲ್ಲಿ ಬೆಳೆಗಳು ಮುಳುಗಡೆಯಾಗಿದೆ, ಎಲ್ಲೆಲ್ಲಿ ಜನರು ವಸತಿಹೀನರಾಗಿದ್ದಾರೆ ಮತ್ತು ಎಷ್ಟು ಜನ ತೊಂದರೆಗೆ ಈಡಾಗಿದ್ದಾರೆ, ಅವರನ್ನು ಸರ್ಕಾರದವರು ಗುರುತಿಸಿ ತಕ್ಷಣ ಅವರಿಗೆ ಪರಿಹಾರವನ್ನು ಕೊಡಬೇಕು ಮತ್ತು ಆ ಭಾಗದ ರೈತರಿಂದ ವಸೂಲು ಮಾಡತಕ್ಕಂಥ ಸಾಲವನ್ನು ಈ ಕೂಡಲೇ ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಸರ್ಕಾರದವರನ್ನು ನಾನು ಒತ್ತಾಯಿಸುತ್ತೇನೆ.

ಶ್ರೀ ಡಿ. ವೈಗಾವ್‌ಕರ್ (ಕಾರವಾರ).—ಮಾನ್ಯ ಅಧ್ಯಕ್ಷರೇ, ನಾನು ಪ್ರತಿನಿಧಿಸುತ್ತಿರುವ ಮತದಾರರ ಕ್ಷೇತ್ರ ಆ ಕಡೆ ಸಮುದ್ರದ ಕೊರೆತ, ಈ ಕಡೆ ನದಿಯ ಮಹಾಪೂರ ಇವೆರಡಕ್ಕೂ ತುತ್ತಾಗಿದೆ. ಈ ಸಮುದ್ರದ ಕೊರೆತದ ಗ್ರಾವಿಟಿ ಎಷ್ಟಿದೆಯೆಂದು ಹೇಳುವುದಾದರೆ ನನಗೆ ಬಂದ ಮಾಹಿತಿ ಪ್ರಕಾರ ೨೦೦೦ ಟನ್‌ನಷ್ಟು ಇದೆ. ಇದರಿಂದ ಬಹಳ ಅನಾಹುತಗಳು ಆಗುತ್ತಿವೆ. ಈ ನದಿಗಳ ಮಹಾಪೂರದ ಬಗ್ಗೆ ಹೇಳುವುದಾದರೆ ೧೯೬೧ನೇ ಇಸವಿಯಲ್ಲಿ ನಮ್ಮ ಕಡೆ ಈ ಕಾಳೀ ನದಿ ರುದ್ರಾವತಾರ ತಾಳಿತ್ತು. ಈಗ ಎರಡನೇ ಸಾರಿ ಈ ವರ್ಷ ಆ ತರಹದ ರುದ್ರಾವತಾರವನ್ನು ತಾಳಿ ಜನರಿಗೆ ತೊಂದರೆಯುನ್ನುಂಟು ಮಾಡಿದೆ. ಈ ಸಮುದ್ರದ ಕೊರೆತದ ವಿಚಾರದಲ್ಲಿ ಕಳೆದ ಒಂದು ವರ್ಷದ ಹಿಂದೆ ಇದೇ ಸದನದಲ್ಲಿ ನಾನು ಪ್ರಶ್ನೆಗಳನ್ನು ಕೇಳಿದ್ದೇನೆ. ಸಾಮಾನ್ಯವಾಗಿ ನಮ್ಮ ಕಾರವಾರ ತಾಲ್ಲೂಕಿನ ಉತ್ತರ ಭಾಗದಲ್ಲಿ ನಿರಂತರವಾಗಿ ಈ ಸಮುದ್ರದ ಕೊರೆತದಿಂದ ತೊಂದರೆಗಳು ಉಂಟಾಗುತ್ತಿವೆ. ಕಳೆದ ಒಂದು ವರ್ಷದ ಹಿಂದೆ ಮಹದಾಳಿ ಪ್ರದೇಶದಲ್ಲಿ ದೊಡ್ಡ ದೊಡ್ಡ ಕಲ್ಲುಬಂಡೆಗಳನ್ನು ಹಾಕಿ ಸಮುದ್ರದ ಕೊರೆತವನ್ನು ತಡೆಗಟ್ಟತಕ್ಕಂಥ ಒಂದು ಯೋಜನಾ ಕಾರ್ಯವನ್ನು ಮಾಡಿದ್ದಾರೆ. ಅದೇ ರೀತಿ ಕೊಲ್ಲಾಪುರದಲ್ಲಿಯೂ ಮಾಡಿದ್ದಾರೆ. ಅಂತಹ ಒಂದು ಯೋಜನೆಯನ್ನು ನಮ್ಮ ತಾಲ್ಲೂಕಿನಲ್ಲಿ ಏತಕ್ಕೆ ಮಾಡಬಾರದು ಎಂದು ಕೇಳಿದಾಗ ಅಂದಿನ ಮಾನ್ಯ ಮುಖ್ಯ ಮಂತ್ರಿಯವರು ಸರ್ಕಾರ ಇದನ್ನು ಪರಿಶೀಲಿಸುತ್ತಿದೆ ಎಂದು ಹೇಳಿದ್ದರು ಮತ್ತು ಸಮುದ್ರದ ಕೊರೆತದಿಂದ ಉಂಟಾಗಿರುವ ನಿರಂತರವಾದ ದುಃಖವನ್ನು ಪರಿಹಾರ ಮಾಡುವ ಒಂದು ಯೋಜನೆಯನ್ನು ನಾವು ಮಾಡುತ್ತೇವೆ ಎಂದು ಸಹ ಹೇಳಿದ್ದರು. ಆದರೆ ಈ ದಿಶೆಯಲ್ಲಿ ಇಂದಿನವರೆಗೆ ಯಾವ ಒಂದು ಯೋಜನೆಯನ್ನು ಕಾರ್ಯಗತ ಮಾಡಿದ್ದಾಗಲೀ ಅಥವಾ ಅದಕ್ಕೆ ಒಂದು ಸೂಕ್ತವಾದ ಕ್ರಮವನ್ನು ಹಾಕಿಕೊಂಡು ಕಾರ್ಯ ನಡೆಸಿದ್ದು ಕಂಡು ಬರಲಿಲ್ಲ. ಆದ್ದರಿಂದ ತಮ್ಮನ್ನು ಈ ಸಂದರ್ಭದಲ್ಲಿ ಕೇಳಿಕೊಳ್ಳುವುದೇನೆಂದರೆ ನಮ್ಮ ಭಾಗದಲ್ಲಿ ಈ ಸಮುದ್ರದ ಕೊರೆತದಿಂದ ಉಂಟಾಗಿರುವ ನಿರಂತರವಾದ ದುಃಖವನ್ನು ಪರಿಹಾರ ಮಾಡುವ ಒಂದು ಯೋಜನೆಯನ್ನು ಈಗಲಾದರೂ ರೂಪಿಸಿಕೊಂಡು ಅದನ್ನು ಕಾರ್ಯಗತಗೊಳಿಸಲು ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಎರಡನೆಯದಾಗಿ ಈ ವರ್ಷ ಕಾಳಿ ನದಿಯಲ್ಲಿ ಪ್ರವಾಹ ಬಂದು ನದಿಯ ಎರಡೂ ಬದಿಗಳಲ್ಲಿ ಇದ್ದಂತಹ ಗಜನಿ ಹೊಲಗಳಿಗೆ ನೀರು ನುಗ್ಗಿ ಬೆಳೆಯೆಲ್ಲಾ ನಾಶವಾಗಿದೆ. ಈ ಗಜನಿ ಹೊಲಗಳಿಗೆ ನೀರು ನುಗ್ಗದಂತೆ ಒಡ್ಡುಗಳನ್ನು ಕಟ್ಟುವ ಒಂದು ಯೋಜನೆಯನ್ನು ನಮ್ಮಲ್ಲಿ ರೂಪಿಸಿಕೊಂಡಿದ್ದರೂ ಕೂಡ ಅದು ಇದುವರೆಗೆ ಕಾರ್ಯಗತವಾಗಲಿಲ್ಲ. ಸರ್ಕಾರದವರು ಆ ಭಾಗದಲ್ಲಿ ಒಡ್ಡುಗಳನ್ನು ಕಟ್ಟಿಸಿದ್ದರೆ ಇವತ್ತು ಆ ಭಾಗದ ಜನರು ದುಃಖದುಮ್ಮಾನಗಳನ್ನು ಅನುಭವಿಸುವ ಪರಿಸ್ಥಿತಿ ಬರುತ್ತಾ ಇರಲಿಲ್ಲ. ಈ ಎರಡು ಸಂಗತಿಗಳನ್ನು ಸರ್ಕಾರದವರು ತೀವ್ರ ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. ತಾವು ಕೂಡಲೇ ಆ ಭಾಗಕ್ಕೆ ಭೇಟಿ ಕೊಟ್ಟು

ತೊಂದರೆಗೆ ಒಳಗಾಗಿರತಕ್ಕಂಥವರಿಗೆ ಪರಿಹಾರವನ್ನು ಒದಗಿಸಿ ಕೊಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ.ಎಚ್. ತಹಶೀಲ್ದಾರ್ (ಹಾನಗಲ್).--ಮಾನ್ಯ ಅಧ್ಯಕ್ಷರೇ, ಧಾರವಾಡ ಜಿಲ್ಲೆಯ ಹಾನಗಲ್ ತಾಲ್ಲೂಕಿನ ವಿಚಾರವಾಗಿ ನಾನು ಮಾತನಾಡಬೇಕೆಂದಿದ್ದೇನೆ. ಏಕೆಂದರೆ, ಹಾನಗಲ್ ತಾಲ್ಲೂಕು ಮಲೆನಾಡಿನ ಸರಹದ್ದಿನಲ್ಲಿರುವುದರಿಂದ ಅಲ್ಲಿ ಮೊನ್ನೆ ಎರಡು ದಿವಸ ಸುಮಾರು ೨೦೦ ಮಿಲಿ ಮೀಟರ್ ಮಳೆಯಾದದ್ದು ಪೇಪರಿನಲ್ಲಿ ಬಂದಿದೆ. ತಾವೂ ಕೂಡ ವರದಿಯನ್ನು ತರಿಸಿಕೊಂಡಿರಬಹುದು.

(ಮಾನ್ಯ ಅಧ್ಯಕ್ಷರು ತಮ್ಮ ಪೀಠವನ್ನಲಂಕರಿಸಿದರು)

ನಮ್ಮಲ್ಲಿ ಧರ್ಮಾ ನದಿ ಇದೆ, ವರದಾ ನದಿ ಇದೆ. ಜೊತೆಗೆ ಧರ್ಮಾ ಪ್ರಾಜೆಕ್ಟ್ ಇದೆ. ಅಲ್ಲಿ ೫೪೦ ಪಿಡಬ್ಲ್ಯೂಡಿ ಕೆರೆಗಳಿವೆ, ನಾಲ್ಕು ದೊಡ್ಡ ಹಳ್ಳಗಳಿವೆ. ಈ ಒಂದು ಹೆಚ್ಚಿನ ಮಳೆಯಿಂದಾಗಿ ಎಲ್ಲಾ ನದಿಗಳು. ಎಲ್ಲಾ ಕೆರೆಗಳು ಮತ್ತು ಧರ್ಮಾ ಪ್ರಾಜೆಕ್ಟ್ ತುಂಬಿ ಪಕ್ಕದಲ್ಲಿರತಕ್ಕ ಐವತ್ತಾರು ಹಳ್ಳಿಗಳು ನೀರು ಪಾಲಾಗಿವೆ. ಅಲ್ಲಿ ಯಾವುದೇ ರೀತಿಯ ಸಂಪರ್ಕಕೂಡ ಕಡಿದುಹೋಗಿದೆ, ಅಧಿಕಾರಿಗಳು ಈಗಾಗಲೇ ಅಲ್ಲಿದ್ದವರನ್ನು ಸ್ಥಳಾಂತರ ಮಾಡಿಸುತ್ತಿದ್ದಾರೆಂದು ತಿಳಿದುಬಂದಿದೆ. ಈ ಒಂದು ಹೆಚ್ಚಿನ ಪ್ರವಾಹ ದಿಂದ ದನಗಳ ಮೇವು, ಹುಲ್ಲಿನ ಬವಣೆಗಳು, ಬಡವರು ಹಾಕತಕ್ಕಂಥ ಕಟ್ಟಿಗೆ ವ್ಯವಸಾಯಕ್ಕೆ ಬೇಕಾಗು ವಂಥ ಟೆಂಕೆ, ಕುಂಟೆ ಸಲಕರಣೆಗಳು ನದಿ ಪಾಲಾಗಿವೆ. ಜೊತೆಗೆ ಎಲ್ಲೆಲ್ಲಿ ಹೊಳೆ ಆವರಿಸಿದೆ ಅಲ್ಲಿ ರೈತರ ಜಮೀನುಗಳು ಮುಳುಗಡೆಯಾಗಿವೆ. ಬೆಳೆಗಳು ನೀರು ಪಾಲಾಗಿವೆ, ಜೊತೆಗೆ ಫಲವತ್ತತೆ ಕೂಡ ಹೋಗಿದೆ. ಅಲ್ಲದೆ ಅಲ್ಲಿರತಕ್ಕ ರಸ್ತೆಗಳು ಬಂದ್ ಆಗಿವೆ. ಹೆಚ್ಚಿನ ಮಳೆಯಿಂದ ಕ್ರಾಸಿಂಗ್ ಕೂಡ ಕೊಚ್ಚಿಕೊಂಡು ಹೋಗಿದೆ. ಈ ಸಾರಿ ಮಳೆ ಸ್ವಲ್ಪ ಲೇಟಾದುದರಿಂದ ಬಿತ್ತಿದ ತಕ್ಷಣ ಮಳೆ ಪ್ರಾರಂಭ ವಾಯಿತು, ಮೊಳಕೆ ಕೂಡ ಹೊಡೆದಿಲ್ಲ. ಒಂದೇ ಸಮನೆ ಬಂದಂಥ ಮಳೆಯಿಂದ ಓವರ್ ಫ್ಲೋ ಆಗಿದ್ದ ರಿಂದ ಎಲ್ಲಾ ಕೊಚ್ಚಿಕೊಂಡು ಹೋಗಿದೆ. ಜೊತೆಗೆ ಇವತ್ತು ಫೋನ್‌ನಲ್ಲಿ ೮-೧೦ ದೊಡ್ಡ ದೊಡ್ಡ ಕೆರೆಗಳು ಒಡೆದುಹೋಗಿವೆ. ಎಲ್ಲಾ ಜಮೀನುಗಳು ಕೊಚ್ಚಿಕೊಂಡು ಹೋಗಿವೆ ಎಂದು ತಿಳಿದುಕೊಂಡೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಪರಿಹಾರವನ್ನು ಕೊಡಬೇಕು. ಜೊತೆಗೆ ಅಧಿಕಾರಿಗಳ ವರದಿ ಅಲ್ಲದೆ, ಒಂದು ಪರಿಹಾರ ಕಮಿಟಿಯನ್ನು ನೇಮಿಸಿ, ಆ ಸಮಿತಿಯ ವರದಿಯನ್ನು ತರಿಸಿಕೊಂಡು ಸೂಕ್ತ ಪರಿಹಾರ ಕೊಡಬೇಕು ಎಂದು ಸರ್ಕಾರದಲ್ಲಿ ನಿವೇದಿಸಿಕೊಳ್ಳುತ್ತೇನೆ. ಜೊತೆಗೆ ಅಗತ್ಯವಾಗಿರುವಂಥ ರಸಗೊಬ್ಬರ, ಬೀಜ ಇತ್ಯಾದಿ ನಮಗೆ ಸಿಕ್ಕುತ್ತಾ ಇಲ್ಲ. ಬಿತ್ತಿದ್ದೆಲ್ಲಾ ಈಗಾಗಲೇ ನೀರು ಪಾಲಾಗಿದೆ. ಆದ್ದರಿಂದ ನಿರಾಶ್ರಿತರಿಗೆ, ಮನೆ ಕಳೆದುಕೊಂಡವರಿಗೆ ಮನೆ, ಬೆಳೆ ಕಳೆದುಕೊಂಡವರಿಗೆ ಪರಿಹಾರ ಕೊಡ ಬೇಕು. ಈಗ ಬೆಟರ್‌ಮೆಂಟ್ ಲೆವಿ ಇತ್ಯಾದಿ ವಸೂಲು ಮಾಡುವುದನ್ನು ಜೋರು ಮಾಡುತ್ತಿದ್ದಾರೆ, ಆದ್ದರಿಂದ ವಸೂಲು ಮಾಡುವುದನ್ನು ತಕ್ಷಣ ಬಂದ್ ಮಾಡಿಸಬೇಕು ಎಂದು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇದರ ಜೊತೆಗೆ ಎಲ್ಲೆಲ್ಲಿ ಒಡ್ಡುಗಳು ಒಡೆದಿವೆ, ಕೆರೆಗಳು ಒಡೆದಿವೆ ಅಲ್ಲಿ ಕೂಡಲೇ ಕಾಮಗಾರಿ ಕೆಲಸವನ್ನು ತೆಗೆದುಕೊಂಡು ದುರಸ್ತಿ ಮಾಡಬೇಕು ಮತ್ತು ಸುಲಭ ದರದಲ್ಲಿ ನಮಗೆ ಸಾಲ ಸಿಗುವಂಥ ವ್ಯವಸ್ಥೆ ಮಾಡಬೇಕು, ಕೊಟ್ಟಂಥ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತಿಸಿ, ಫ್ರೆಷ್ ಆಗಿ ಬೆಳೆ ಸಾಲವನ್ನು ಕೊಡುವಂಥ ವ್ಯವಸ್ಥೆಯಾಗಬೇಕು. ಮತ್ತು ಕಡು ಬಡವರಿಗೆ ಪರಿಹಾರ ರೂಪದಲ್ಲಿ ಹಣವನ್ನು ಕೊಡಬೇಕು ಎಂದು ಸರ್ಕಾರಕ್ಕೆ ನಿವೇದಿಸಿಕೊಂಡು, ಇದರ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳುತ್ತಾರೆಂದು ಆಶಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಸಿದ್ದಮಾದಯ್ಯ (ಕೊಳ್ಳೆಗಾಲ).—ಮಾನ್ಯ ಅಧ್ಯಕ್ಷರೇ, ನಾನು ಸುಮಾರು ಅರ್ಧ ಗಂಟೆಯಿಂದ ತಮ್ಮ ಅಪ್ಪಣೆಯನ್ನು ಕೇಳುತ್ತಿದ್ದೇನೆ. ಬರೀ ಮಲೆನಾಡಿನವರಿಗೇ ಅವಕಾಶ ಕೊಡುತ್ತಿದ್ದೀರಿ ಈಗ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಈಗ ಮೈಸೂರು ಜಿಲ್ಲೆಯ ಕೊಳ್ಳೆಗಾಲ ತಾಲ್ಲೂಕಿನಲ್ಲಿ ಕಾವೇರಿ, ಕಬಿನಿಯಿಂದ ಬಂದಿರತಕ್ಕ ಪ್ರವಾಹದಲ್ಲಿ ಸುಮಾರು ೫ ಗ್ರಾಮಗಳು ನೀರಿನಲ್ಲಿ ಸಿಕ್ಕಿ ಮನೆಗಳಿಗೆ ಮತ್ತು ದನಕರುಗಳಿಗೆ ಬಹಳ ತೊಂದರೆಯಾಗಿದೆ. ನಾನು ನಿನ್ನೆ ೪ನೇ ತಾರೀಖು ಪ್ರವಾಸಮಾಡಿ ಪ್ರತಿಯೊಂದನ್ನೂ ನೋಡಿಕೊಂಡು ಬಂದಿದ್ದೇನೆ. ದಾಸನಪುರ ಪೂರ್ತಿ ನೀರಿನಲ್ಲಿ ಮುಳುಗಡೆಯಾಗಿದೆ. ಹಂಪಾಪುರ ನೀರಿನಲ್ಲಿ ಮುಳುಗಿ ಹೋಗಿದೆ. ಮುಳ್ಳೂರು ಮುಳುಗಿ ಹೋಗಿದೆ. ನಾಲ್ಕೈದು ಗ್ರಾಮಗಳು ವಿಪರೀತ ನೀರಿನಲ್ಲಿ ಮುಳುಗಿ ಹೋಗಿವೆ. ಅಲ್ಲಿಗೆ ಹೋಗಿ ಮುಟ್ಟಬೇಕಾದರೆ

೧೦ ಮೈಲಿ ನೀರಿನ ಮೇಲೆ ಹೋಗಬೇಕು. ನಾನು ದೋಣಿಯಲ್ಲಿ ಹೋಗಿ ನೋಡಿ ಅಲ್ಲಿರತಕ್ಕ ಜನರನ್ನು ಕೊಳ್ಳೆಗಾಲ ಟೌನಿಗೆ ಕರೆದುಕೊಂಡು ಬಂದು ಊಟ, ಉಪಚಾರಕ್ಕೆ ವ್ಯವಸ್ಥೆ ಮಾಡಿದ್ದೇನೆ. ಇದರ ಜೊತೆಗೆ ನಮ್ಮಲ್ಲಿ ಮೂರು ಲಿಫ್ಟ್ ಇರಿಗೇಷನ್‌ಗಳಿವೆ. ಸದ್ಯಾಲ ಮುಂತಾದ ಮೂರು ಲಿಫ್ಟ್ ಇರಿಗೇಷನ್ಸ್ ನೀರಿನಲ್ಲಿ ಮುಳುಗಿಹೋಗಿವೆ, ಕೆಲಸಕ್ಕೆ ಬಾರದಂತಾಗಿದೆ. ಇದರಿಂದ ಆ ಪ್ರದೇಶದಲ್ಲಿರತಕ್ಕ ಜನಕ್ಕೆ ಬಹಳ ಕಷ್ಟಕರವಾದ ಸ್ಥಿತಿ ಬಂದಿದೆ. ಆದ್ದರಿಂದ ಇವರುಗಳಿಗೆ ತಾವು ಯೋಗ್ಯವಾದಂಥ ಕ್ರಮ ತೆಗೆದುಕೊಂಡು ಬದಲಿ ವ್ಯವಸ್ಥೆ ಅಂದರೆ ಸ್ಥಳಾಂತರ ಮಾಡುವಂಥ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಸುಮಾರು ೮ ಮೈಲಿ ಉದ್ದಕ್ಕೂ ಬೆಳೆಯನ್ನು ಹಚ್ಚಿದ್ದರು, ಮುಳ್ಳೂರು ಮುಂತಾದ ಕಡೆ ಕಬ್ಬು, ಭತ್ತ ಇನ್ನೂ ಅನೇಕ ರೀತಿಯ ಬೆಳೆಗಳನ್ನು ಹಚ್ಚಿದ್ದರು. ಇವೆಲ್ಲಾ ನಾಶವಾಗಿದೆ. ಆದ್ದರಿಂದ ಇವರಿಗೆ ಏನು ತೊಂದರೆಯಾಗಿದೆ, ಎಷ್ಟು ನಷ್ಟವಾಗಿದೆ ಎಂದು ಕಂಡುಹಿಡಿದು ಅದಕ್ಕೆ ಜಿಲ್ಲಾಧಿಕಾರಿಗಳ ಮುಖಾಂತರ ತಕ್ಕ ಪರಿಹಾರವನ್ನು ತಕ್ಷಣ ಕೊಡುವ ಬಗ್ಗೆ ಸರ್ಕಾರ ಆಲೋಚನೆ ಮಾಡಿ ಕೊಡಬೇಕು ಎಂದು ಸರ್ಕಾರಕ್ಕೆ ಒತ್ತಾಯಮಾಡಿ ಕೇಳಿಕೊಳ್ಳುತ್ತೇನೆ. ಹಿಂದೆ ಇದೇ ರೀತಿ ಒಂದೆರಡು ಬಾರಿ ನಷ್ಟಕ್ಕೆ ಈಡಾಗಿದ್ದಾರೆ. ಆ ಜನರನ್ನು ಕರೆದುಕೊಂಡು ಬಂದು ಊಟೋಪಚಾರಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಆದ್ದರಿಂದ ದಯುವಿಟ್ಟು ಸರ್ಕಾರದವರು ಅತ್ತಕಡೆ ಹೆಚ್ಚಿನ ಗಮನಕೊಟ್ಟು ಕೊಳ್ಳೆಗಾಲ ತಾಲ್ಲೂಕಿನ ಐದಾರು ಗ್ರಾಮಗಳು ಏನು ನೀರಿನಲ್ಲಿ ಮುಳುಗಡೆಯಾಗಿವೆ, ಆ ಭಾಗದವರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕು, ಸ್ಥಳಾವಕಾಶ ಮಾಡಿಕೊಡಬೇಕು. ಮತ್ತೆ ಬೆಳೆಗಳು ಹೋಗಿರತಕ್ಕವರಿಗೆ ಸರಿಯಾದ ಪರಿಹಾರವನ್ನು ಕಂಡುಹಿಡಿದು ಅವರಿಗೆ ದುಡ್ಡು ಕೊಡುವಂಥ ವ್ಯವಸ್ಥೆ ಮಾಡಬೇಕು. ಪರಿಹಾರ ಕೊಡುವಾಗ ಅನೇಕ ಲೋಪದೋಷಗಳು ಬರುತ್ತವೆ. ಸರ್ಕಾರದವರು ದೊಡ್ಡ ಮನಸ್ಸುಮಾಡಿ ಕೊಟ್ಟರೆ ಲೋಪದೋಷ ಮಾಡುವಂಥ ವಿಚಾರ ಅಲ್ಲಲ್ಲಿ ಇರುತ್ತದೆ. ಆದುದರಿಂದ ಯಾರಾದರೂ ಎಂ.ಎಲ್.ಎ. ಮುಂತಾದ ಮುಖಂಡರು ಪರಿಶೀಲನೆ ಮಾಡಿ, ಜಿಲ್ಲಾಧಿಕಾರಿಗಳು, ತಹಶೀಲ್ದಾರರು, ಬಿ.ಡಿ.ಓ. ಮುಖಾಂತರ ಪರಿಹಾರವನ್ನು ಕೊಡಬೇಕು ಎಂದು ಸರ್ಕಾರವನ್ನು ಒತ್ತಾಯ ಮಾಡಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕಾಲಮರಿಗೌಡ (ಪಿರಿಯಾಪಟ್ಟಣ).—ಮಾನ್ಯ ಅಧ್ಯಕ್ಷರೇ, ಈ ನೆರೆ ಹಾವಳಿಯಿಂದ ಕಾವೇರಿ ನದಿ ಪಕ್ಕದಲ್ಲಿರತಕ್ಕ ಅನೇಕ ಜಮೀನುಗಳಲ್ಲಿ ಭತ್ತ ಹಾಕಿದ್ದರು ಅದೆಲ್ಲಾ ಇವತ್ತು ಮುಳುಗಿ ರೈತರಿಗೆ ಅಪಾರವಾದ ನಷ್ಟವಾಗಿದೆ. ಎರಡನೆಯದಾಗಿ ೨೪ ಗಂಟೆಯಿಂದ ನಮ್ಮ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಮಳೆ ಬೀಳುತ್ತಿರುವುದರಿಂದ ಈ ಹೊಗೆಸೊಪ್ಪಿನ ಬ್ಯಾರನ್‌ಗಳನ್ನೇನು ಹಾಕಿಕೊಡಿದ್ದರು ಅದೆಲ್ಲಾ ಬಿದ್ದು ಹೋಗಿದೆ. ಹೊಗೆಸೊಪ್ಪನ್ನು ಬೆಳೆಯುತಕ್ಕಂತವರಿಗೆ ತುಂಬಾ ಲಾಸ್ ಆಗಿದೆ ಅದಕ್ಕೆ ಸರ್ಕಾರದವರು ಯಾವ ರೀತಿಯಿಂದಲಾದರೂ ಪರಿಹಾರವನ್ನು ತಾತ್ಕಾಲಿಕವಾಗಿ ಕೊಟ್ಟು ಅಲ್ಲಿರುವ ಜನಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಬಿ. ಮಲ್ಲಪ್ಪ (ಅರಕಲಗೂಡು).—ಮಾನ್ಯ ಅಧ್ಯಕ್ಷರೇ ಈಗ ನಮ್ಮ ಮಾನ್ಯ ಸ್ನೇಹಿತರು ನೆರೆ ಹಾವಳಿಯ ವಿಚಾರದಲ್ಲಿ ಬಹಳ ವಿಧವಾಗಿ ತಮಗೆಲ್ಲರಿಗೂ ಮತ್ತು ಸರ್ಕಾರಕ್ಕೂ ಎಲ್ಲಾ ವಿಚಾರವನ್ನೂ ಸಹ ವಿಶಾದವಾಗಿ ಹೇಳಿದ್ದಾರೆ. ನಾನಾದರೂ ಕೂಡ ಹೇಳುವುದೇನೆಂದರೆ ನಮ್ಮ ತಾಲ್ಲೂಕಿನ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ. ನಮ್ಮ ತಾಲ್ಲೂಕು ಹಾಸನ ಡಿಸ್ಟ್ರಿಕ್ಟ್‌ಗೆ ಸೇರಿದ್ದು ಕೂರ್ಗ್ ಬಾರ್ಡರ್‌ನಲ್ಲಿ ಬರುತ್ತದೆ. ಈ ಕಾವೇರಿ ನದಿ ನಮ್ಮ ತಾಲ್ಲೂಕಿನಲ್ಲಿ ಹರಿದು ಅದು ಮುಂದೆ ಕೊಣನೂರು, ರಾಮನಾಥಪುರದಲ್ಲಿ ಹರಿದು ಹೋಗತಕ್ಕಂಥ ನದಿ. ಇದೇ ರೀತಿ ೧೯೬೪ ನೇ ಇಸ್ವಿಯಲ್ಲೂ ಸಹ ಫ್ಲಡ್ ಬಂದು ಕಾವೇರಿ ನದಿ ದಡದಲ್ಲಿರತಕ್ಕ ಕೆಲವು ಹಳ್ಳಿಗಳು, ಜಮೀನುಗಳೆಲ್ಲಾ ಮುಳುಗಿ ಹೋದವು ಅದೇ ರೀತಿ ಈ ವರ್ಷವೂ ಆಗಿದೆ. ಆದರೆ ಆ ವಿಷಯ ನನಗೆ ಗೊತ್ತೇ ಇರಲಿಲ್ಲ. ನಿನ್ನೆ ರಾತ್ರಿ ನಾವು ಇಲ್ಲಿಂದ ರೂಂಗೆ ಹೋದ ಮೇಲೆ ಈ ರೀತಿಯಾಗಿ ಫ್ಲಡ್‌ನಿಂದ ತೊಂದರೆಯಾಗಿದೆಂದು ಫೋನ್ ಬಂದಿತ್ತು. ನನ್ನ ಸಧ್ಯ ಚಿಕ್ಕಪ್ಪನವರಾದ ಶ್ರೀ ಬಸವನಗೌಡ ಎನ್ನುವವರಿಗೆ ಎರಡು ಎಕರೆ ಜಮೀನು ಇದೆ ಅದರಲ್ಲಿ ಅವರು ಒಂದು ಪಂಪ್‌ಸೆಟ್ ಹಾಕಿಸಿಕೊಂಡಿದ್ದರು. ಅದು ಸಹ ಮುಳಿಗಿ ಹೋಗಿ ಭಿಟ್ಟಿದೆಯಂತೆ. ಮತ್ತೆ ಕೆಲವು ಕಡೆ ಮನೆಗಳೂ ಸಹ ಬಿದ್ದು ಹೋಗಿವೆಯಂತೆ. ಅವರು ಕಡಲೆಕಾಯಿ ಹಾಕಿಸಿದ್ದರು ಅದೆಲ್ಲಾ ನಾಶವಾಗಿ ಹೋಗಿದೆಯಂತೆ. ಮತ್ತೆ ಮಾನ್ಯ ಸದಸ್ಯರು ಹೇಳಿದ ಹಾಗೆ ಬ್ಯಾರನ್‌ಗಳನ್ನು ಏನು ಕಟ್ಟಿದ್ದರು ಅವೆಲ್ಲಾ ಬಿದ್ದು ಹೋಗಿ ತುಂಬಾ ನಷ್ಟ ಉಂಟಾಗಿದೆಯಂತೆ. ಎರಡನೆಯದಾಗಿ ಸುಮಾರು ೩೦೦, ೪೦೦ ಜನಕ್ಕೆ ಹಾನಿಯಾಗಿದೆಂದು ರಾತ್ರಿ ನನಗೆ

ವರ್ತಮಾನ ಬಂತು. ನಾನು ಈ ವಿಷಯದ ಬಗ್ಗೆ ಕಾಲಿಂಗ್ ಅಟೆನ್‌ಷನ್ ನೋಟೀಸ್ ಕಳುಹಿಸ ಬೇಕೆಂದಿದ್ದೆ ಅಂದರೆ ನಮ್ಮ ಊರಿನಲ್ಲಿ ಇದು ಆಗಿಲ್ಲವೇನೋ ಎಂದು ಸುಮ್ಮನೇ ಇದ್ದೆ ಆದರೆ ಇಲ್ಲಿಂದ ನಾನು ರೂಂಗೆ ಹೋದ ಮೇಲೆ ವಿಷಯ ತಿಳಿದು ಬಂತು. ನನ್ನ ಸ್ವಂತ ಜಮೀನು ೬ ಎಕರೆ ಇತ್ತು. ಅದು ಸಹ ಮುಳುಗಿ ಹೋಗಿದೆಂದು ವರ್ತಮಾನ ಬಂದಿತು. ಆದುದರಿಂದ ಇವತ್ತು ಏನು ಕಾವೇರಿ ನದಿ ದಡದಲ್ಲಿರತಕ್ಕ ಜಮೀನುಗಳವರಿಗೆ ನಷ್ಟ ಉಂಟಾಗಿದೆ ಅದಕ್ಕೆ ಸೂಕ್ತ ಪರಿಹಾರವನ್ನು ಒದಗಿಸಿ ಕೊಡಬೇಕು ಒಟ್ಟು ಎಷ್ಟು ಹಾನಿಯಾಗಿದೆ ಎನ್ನುವ ಅಂದಾಜು ಗೊತ್ತಿಲ್ಲ. ಆದುದರಿಂದ ಸರ್ಕಾರದವರು ಇದರ ಬಗ್ಗೆ ಕೂಡಲೇ ಡಿ.ಸಿ. ಯವರಿಗೆ ಆರ್ಡರ್ ಮಾಡಿ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರದವರಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಕಾಪು ಸಂಜೀವಶೆಟ್ಟಿ (ಕುಂದಾಪುರ್).--ಅಧ್ಯಕ್ಷರೇ, ಈ ನೆರೆಹಾವಳಿ ನಮ್ಮ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಮಾತ್ರವಾಗದೇ ರಾಜ್ಯದ ಹೆಚ್ಚಿನ ಜಿಲ್ಲೆಗಳಲ್ಲೂ ಸಹ ಉಂಟಾಗಿದೆ. ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ನೆರೆಹಾವಳಿಯು ಒಂದು ಭೀಕರತೆ ಹೆಚ್ಚಾಗಿದೆ.

ಇದೇ ರೀತಿ ೧೯೭೮ ನೇ ಇಸ್ವಿಯಲ್ಲಿ ನೀರು ಬಂತು, ಬಂದಾಗ ಪೈರೆಲ್ಲಾ ಕೊಚ್ಚಿಕೊಂಡು ಹೋಗಿ ರೈತರಿಗೆ ತುಂಬಾ ನಷ್ಟ ಉಂಟಾಗಿತ್ತು. ಆಗ ಸಹ ಸರ್ಕಾರದವರು ಸೂಕ್ತ ಪರಿಹಾರ ಕಾರ್ಯಕ್ರಮ ವನ್ನು ಕೈಗೊಳ್ಳುತ್ತೇವೆಂಬುದಾಗಿ ಹೇಳಿದ್ದರು. ಆದರೆ ಇಲ್ಲಿಯವರೆಗೆ ಯಾವುದೇ ಒಂದು ಪರಿಹಾರ ಅಲ್ಲಿಯ ಜನರಿಗೆ ದೊರೆತಿಲ್ಲ. ಅದೇ ರೀತಿ ಈ ಸಾರಿ ಆಗಬಾರದೆಂದು ಸರ್ಕಾರದವರಲ್ಲಿ ವಿನಂತಿ ಮಾಡಿ ಕೊಳ್ಳುತ್ತೇನೆ. ಎಷ್ಟೋ ಜನ ಪೈರುಗಳನ್ನು ಹಾಕಿಕೊಂಡಿದ್ದವರು ಕಳೆದುಕೊಂಡಿದ್ದಾರೆ, ಮತ್ತೆ ಎಷ್ಟೋ ಜನ ನಾಟಿ ಮಾಡಿದ್ದರು ಆದನ್ನು ಸಹ ಕಳೆದುಕೊಂಡಿದ್ದಾರೆ. ಇವತ್ತು ಅಲ್ಲಿ ಎಷ್ಟು ಲಾಸ್ ಆಗಿದೆ ಎನ್ನುವ ಬಗ್ಗೆ ಇನ್ನು ಅಂದಾಜು ಸಿಕ್ಕಿಲ್ಲ. ಮತ್ತೆ ನಮ್ಮ ಸರ್ಕಾರದವರು ಸಬ್ ಡಿವಿಜನ್ ಎಂದು ಮಾಡಿ ಒಳ್ಳೆಯ ಕೆಲಸ ಮಾಡಿದ್ದಾರೆ. ಪರಿಹಾರ ಕಾರ್ಯವನ್ನು ಸರ್ಕಾರದವರು ಕೈಗೊಳ್ಳುವಾಗ ಕೇಂದ್ರ ಸರ್ಕಾರದವರಿಂದ ಸ್ವಲ್ಪ ಹೆಚ್ಚಿನ ಧನ ಸಹಾಯವನ್ನು ಪಡೆದುಕೊಂಡು ಮಾಡಬೇಕು. ಏತ ಕ್ಕೆಂದರೆ ನಮ್ಮ ಉಡುಪಿ ಕಾಪು, ಬಂಗೇರ, ಪಟ್ಟಿ; ಮರವಂತೆ ಇಲ್ಲೆಲ್ಲಾ ಸಮುದ್ರದ ಕೊರೆತ ವಿಶೇಷ ವಾಗಿ ಉಂಟು. ಇದಕ್ಕೆ ಖಾಯಂ ಪರಿಹಾರವನ್ನು ಕೇಂದ್ರದವರಿಂದ ಸಹಾಯ ಪಡೆದು ಮಾಡುವುದು ಉತ್ತಮ. ಮತ್ತೆ ಎಷ್ಟೋ ರೈತರು ಏನು ಬೀಜ ಹಾಕಿದ್ದರು. ಅದೆಲ್ಲಾ ಕೊಚ್ಚಿಕೊಂಡು ಸಮುದ್ರ ದಲ್ಲಿ ಸೇರಿ ಹೋಗಿದೆ. ಬಡ ರೈತರಿಗೆ ಬೀಜವನ್ನು ಒದಗಿಸುವ ವ್ಯವಸ್ಥೆಯನ್ನು ಕೃಷಿ ಇಲಾಖೆಯವರು ಮಾಡಿಲ್ಲ. ಇದರಿಂದ ಸಾಮಾನ್ಯ ರೈತರಿಗೆ ತುಂಬಾ ತೊಂದರೆಯಾಗಿದೆ. ಆದುದರಿಂದ ತಾವು ಕ್ರಾಪ್ ಇನ್ಸೂರೆನ್ಸ್ ಯೋಜನೆಯನ್ನು ಜಾರಿಗೆ ತಂದು, ರೈತರಿಗೆ ಸಹಾಯ ಮಾಡಿಕೊಡಬೇಕೆಂದು ಈ ಮೂಲಕ ತಮ್ಮಲ್ಲಿ ಕೇಳಿಕೊಂಡು ಮತ್ತು ಅಲ್ಲಿಗೆ ಕೂಡಲೇ ಪರಿಹಾರ ಕಾರ್ಯವನ್ನು ಒದಗಿಸಿಕೊಡಬೇಕೆಂದು ಮತ್ತೊಮ್ಮೆ ತಮ್ಮಲ್ಲಿ ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

SRI B.B. SAYANAK.—Mr. Speaker Sir, in Belgaum there is a Bellary Nala. The Commissioner for Revenue. was the Deputy Commissioner in Belgaum. He knows that problem There was a heavy rainfall last week and about one thousand acres of land where paddy has Cultivated were submmerged in that Nala. The people have approached the Deputy Commissioner, Belgaum. I must thank the Deputy Commissioner because he has visited the place. But he has not assured what relief measures he is going to give. I request the Government to give relief to the agriculturists. People have encroached upon this Bellary Nala. The Government must remove this encroachment and find a permanent solution. so that agriculturists by the side of this Bellary Nala will produce more. With these words, I thank the Chair for giving me an opportunity to speak.

ಶ್ರೀ ಡಿ.ಟಿ. ರಾಮು (ಚನ್ನಪಟ್ಟಣ).—ಉತ್ತರ ಕನ್ನಡ ಜಿಲ್ಲೆ ದಕ್ಷಿಣ ಕನ್ನಡ ಜಿಲ್ಲೆ, ಹಾಸನ ಮತ್ತು ಇನ್ನಿತರ ಎಲ್ಲಾ ಜಿಲ್ಲೆಗಳಲ್ಲೂ ಸಹ ಪ್ರವಾಹ ಬಂದು ಹಾವಳಿ ಉಂಟು ಮಾಡಿದೆ. ಆದ ಕಾರಣ ಪ್ರವಾಹ ಇಲ್ಲದೇ ಇರತಕ್ಕಂಥ ಜಿಲ್ಲೆಗಳಲ್ಲಿ ನನ್ನ ಜಿಲ್ಲೆ ಸಹ ಒಂದು. ಆದುದರಿಂದ ನಾನು ಈ ಪ್ರವಾಹ ಇಲ್ಲದೇ ಇರತಕ್ಕಂಥವರ ಜಿಲ್ಲೆಯವರ ಪರವಾಗಿ ನಾನು ದುಃಖವನ್ನು ವ್ಯಕ್ತಪಡಿಸುತ್ತೇನೆ. ಅದಕ್ಕೆ ಒಂದು ಪ್ರವಾಹ ನಿಯಂತ್ರಣ ಮಂಡಳಿಯನ್ನು ಸರ್ಕಾರದವರು ಶಾಶ್ವತವಾಗಿರುವಂತೆ ಮಾಡಿ, ಅದಕ್ಕೆ ಸಾಕಷ್ಟು ಹಣ ತೆಗೆದಿಟ್ಟು ಇಂಥ ನೆರೆಹಾವಳಿ ಎಲ್ಲೆಲ್ಲಿ ಉಂಟಾಗುತ್ತದೆ ಅಲ್ಲೆಲ್ಲಾ ಪರಿಹಾರವನ್ನು ಕೂಡಲೇ ಕೈಗೊಳ್ಳುವ ವ್ಯವಸ್ಥೆ ಮಾಡಬೇಕೆಂದು ಸಲಹೆ ಮಾಡಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

1-00 ಪಿ.ಎಂ.

ಶ್ರೀ ಭಾಸ್ಕರ ನಾಯಿಡು.—ಸ್ವಾಮಿ ಈಗ ಒಂದು ಗಂಟೆ ಆಯಿತು. ಇನ್ನೂ ಎಷ್ಟು ಹೊತ್ತು ಕುಳಿತುಕೊಳ್ಳಬೇಕು?

ಶ್ರೀ ಪಿ. ರಾಮದೇವ್.—ಸ್ವಾಮಿ, ನಾನು ಈ ಮನೆಯ ಸಮಯವನ್ನು ಹೆಚ್ಚು ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಒಂದೇ ಒಂದು ಸಲಹೆಯನ್ನು ಮಾತ್ರ ಕೊಡುವುದಕ್ಕೆ ಇಷ್ಟಪಡುತ್ತೇನೆ. ಹಿಂದೆ ಬೇರೆ ರಾಜ್ಯಗಳಲ್ಲಿ ಚುನಾವಣೆಯಾದಾಗ ವಿಧಾನಸಭೆಯನ್ನು ೧೦-೧೫ ದಿವಸ ಮುಂದೆ ಹಾಕಿದ್ದಿರಿ. ಅದೇರೀತಿ ನಮ್ಮ ರಾಜ್ಯದಲ್ಲಿ ಚುನಾವಣೆಯಾದಾಗ ಎಂಟು ದಿವಸ ಮುಂದೆ ಹಾಕಿದ್ದಿರಿ. ಅದೇ ರೀತಿ ಪ್ರವಾಹ ಪರಿಹಾರ ಕಾಲದಲ್ಲಿ ಶಾಸಕರು ಪಾಲ್ಗೊಳ್ಳುವುದಕ್ಕೆ ಅನುಕೂಲವಾಗುವಂತೆ ಈಗಲೂ ೩-೪ ದಿವಸವಾದರೂ ಸಭೆಯನ್ನು ಮುಂದಕ್ಕೆ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಿ.ಎಂ. ಘಾಡಿ.—೧೯೭೮ರಲ್ಲಿ ಕಾರವಾರದಲ್ಲಿ ಇದೇ ರೀತಿ ಅನಾಹುತವಾಗಿದ್ದಾಗ ಕೆಲವು ಕಾರ್ಯಕ್ರಮಗಳನ್ನು ಕೈಗೊಳ್ಳುವುದಾಗಿ ಅಂದಿನ ಕಂದಾಯ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದರು. ಆದರೆ ಅವರು ಅದನ್ನು ಪೂರೈಸಲಿಲ್ಲ. ಈ ಸಲ ಹಾಗಾಗಬಾರದು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಈ ವಿಷಯದಲ್ಲಿ ೨೬ ಜನ ಸದಸ್ಯರು ಭಾಗವಹಿಸಿ ೨ ಗಂಟೆ ೧೦ ನಿಮಿಷ ಮಾತನಾಡಿದ್ದಾರೆ. ಆದ್ದರಿಂದ ಸಾಕಷ್ಟು ಸಮಯಾವಕಾಶ ಮಾನ್ಯ ಸದಸ್ಯರಿಗೆ ಕೊಟ್ಟಿದ್ದೇನೆ ಎಂಬುದನ್ನು ಮಾನ್ಯ ಸದನದ ಗಮನಕ್ಕೆ ತರುತ್ತಿದ್ದೇನೆ.

†ಶ್ರೀ ಎಸ್. ಬಂಗಾರಪ್ಪ (ಕಂದಾಯ ಮತ್ತು ಕೃಷಿ ಮಂತ್ರಿಗಳು).—ಮಾನ್ಯಅಧ್ಯಕ್ಷರೇ, ಮಾನ್ಯ ಬೊಮ್ಮಾಯಿಯವರು, ಮಾನ್ಯ ರಾಮದೇವ್‌ರವರು ಮತ್ತು ಇನ್ನೂ ಅನೇಕ ಜನ ಮಾನ್ಯ ಸದಸ್ಯರುಗಳು ನಿನ್ನೆ ಈ ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಚರ್ಚೆ ಆಳವಾಗಲಿ ಎಂಬ ದೃಷ್ಟಿಯಿಂದ ತಾವು ಹೆಚ್ಚು ಕಾಲಾವಕಾಶವನ್ನು ನೀಡಿ ಚರ್ಚೆಗೆ ಅನುವು ಮಾಡಿಕೊಟ್ಟಿದ್ದೀರಿ. ಸುಮಾರು ೨೬ ಜನ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಯಾವ ಕ್ಷೇತ್ರದಲ್ಲಿ ಹೆಚ್ಚು ಹಾನಿಯಾಗಿ ನಷ್ಟವಾಗಿ ಜನತೆ ಸಂಕಷ್ಟಕ್ಕೊಳಗಾಗಿದ್ದಾರೋ ಆ ಭಾಗಗಳಿಂದ ಬಂದಿರತಕ್ಕ ಮಾನ್ಯ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ಹೇಳುವುದಕ್ಕೆ ಅವಕಾಶವಾಗಿದೆ ಎಂದು ನಾನು ಭಾವಿಸಿದ್ದೇನೆ. ಕಡಿಮೆ ಕಾಲದಲ್ಲಿ ಎಲ್ಲ ವಿಷಯವನ್ನೂ ಯಾರಿಗೂ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಆ ಒಂದು ವಿಷಯದ ಮನವರಿಕೆಯ ಹಿನ್ನೆಲೆಯಲ್ಲಿ ನಾನು ಉತ್ತರ ಕೊಡುವ ಪ್ರಯತ್ನ ಮಾಡುತ್ತಿದ್ದೇನೆ. ಇನ್ನೂ ಅನೇಕ ಜನ ಮಾನ್ಯ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಸಿದ್ಧರಾಗಿರುವವರು ಇಲ್ಲಿದ್ದಾರೆ. ಇವತ್ತು ಇದರ ಕಳಕಳಿ ಬರೀ ಹಾನಿಗೊಳಗಾಗಿರತಕ್ಕ ಪ್ರದೇಶದಿಂದ ಬಂದಿರುವವರಿಗೆ ಮಾತ್ರ ಸೀಮಿತವಾಗಿಲ್ಲ. ಆದರೆ ಹಾನಿಗೊಳಗಾಗಿರತಕ್ಕ ಪ್ರದೇಶದಿಂದ ಬರತಕ್ಕವರು ಹೆಚ್ಚು ನೋವನ್ನನುಭವಿಸಿದ್ದಾರೆ. ರಾಜ್ಯದ ಬೇರೆ ಕಡೆಗಳಿಂದ ಬಂದಿರುವವರೂ ಕಳವಳಕ್ಕೆ ಈಡಾಗಿರುವುದು ಮೆಚ್ಚತಕ್ಕ ಸಂಗತಿ. ಇಡೀ ಸದನವೇ ಒಟ್ಟು ಚರ್ಚೆಯಲ್ಲಿ ಭಾಗವಹಿಸಿದೆ ಎಂಬ ಭಾವನೆ ನನ್ನದು, ಅದಕ್ಕೆ ಮಾನ್ಯ ಅಧ್ಯಕ್ಷರು ಅವಕಾಶವನ್ನು ಮಾಡಿಕೊಟ್ಟಿದ್ದಾರೆ ವಿಷಯಗಳನ್ನು ಪ್ರಸ್ತಾಪ ಮಾಡತಕ್ಕ ಸಂದರ್ಭದಲ್ಲಿ ಮಾನ್ಯ ಬೊಮ್ಮಾಯಿಯವರು ಕೆಲವು ಪ್ರಮುಖವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅದೇ ಸಂದರ್ಭದಲ್ಲಿ ಕೆಲವು ಮಾನ್ಯ ಸದಸ್ಯರುಗಳು ಸರ್ಕಾರ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದರಲ್ಲಿ ವಿಫಲವಾಗಿದೆ, ಇಲ್ಲವೇ

ತಡವಾಗಿ ಕಾರ್ಯಕ್ರಮ ತೆಗೆದುಕೊಂಡಿದೆ ಎಂಬ ಖಂಡನೆ ಮಾಡತಕ್ಕ ಕೆಲವು ಪದಗಳನ್ನೂ ಪ್ರಯೋಗ ಮಾಡಿದ್ದಾರೆ. ನಾನು ಈಗ ಸರ್ಕಾರದ ಪರವಾಗಿ ನನ್ನ ಉತ್ತರವನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ನನ್ನ ಉತ್ತರವನ್ನು ಕೇಳಿದಮೇಲೆ ತಮಗೆ ಸಮಾಧಾನವಾಗಿ ಬೇರೆ ರೀತಿಯ ಅಭಿಪ್ರಾಯವನ್ನು ತಾಳಬಹುದು ಎಂದು ನನ್ನ ಭಾವನೆ. ದಕ್ಷಿಣ ಕನ್ನಡ ಜಿಲ್ಲೆ, ಶಿವಮೊಗ್ಗ, ಹಾಸನ, ಕೊಡಗು, ಮೈಸೂರು ಮಂತಾದ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮತ್ತು ಪೋಲೀಸ್ ಅಧಿಕಾರಿಗಳು ಮತ್ತು ಇನ್ನುಳಿದಿರತಕ್ಕ ಎಲ್ಲಾ ಇಲಾಖಾಧಿಕಾರಿಗಳು ಸ್ಥಳಕ್ಕೆ ಭೇಟಿ ಕೊಟ್ಟು ತ್ವರಿತವಾದ ಕಾರ್ಯಕ್ರಮವನ್ನು ಕೈಗೊಂಡಿರುವುದು ಮೆಚ್ಚತಕ್ಕ ವಿಷಯ. ಪರಿಹಾರ ಕಾರ್ಯಕ್ರಮವನ್ನು ತೆಗೆದುಕೊಂಡು ಜನರಿಗೆ ಎಚ್ಚರಿಕೆ ಕೊಡುವ ಕೆಲಸವನ್ನು ಅವರು ಮಾಡಿದ್ದಾರೆಂಬುದು ಮೆಚ್ಚತಕ್ಕ ವಿಷಯ ಎಂಬ ಮಾತನ್ನು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಅದಕ್ಕಾಗಿ ನಾನು ಸರ್ಕಾರದ ಪರವಾಗಿ ಅಭಿನಂದಿಸುತ್ತೇನೆ. ಸರ್ಕಾರ ತಪ್ಪು ಮಾಡಿದ್ದರೆ ಅದನ್ನು ಖಂಡಿಸತಕ್ಕ ಹಕ್ಕು ತಮಗಿದೆ. ಆ ಖಂಡನೆ ಸರ್ಕಾರಕ್ಕೆ ಎಚ್ಚರಿಕೆ ಎಂಬ ರೂಪದಲ್ಲಿ ನಾನು ಸ್ವೀಕಾರ ಮಾಡುತ್ತೇನೆ. ಒಂದು ವೇಳೆ ನಾವು ತೆಗೆದುಕೊಂಡ ಕಾರ್ಯಕ್ರಮದಲ್ಲಿ ವೈಫಲ್ಯತೆಯನ್ನು ಹೊಂದಿದ್ದರೆ ನಮ್ಮ ಪ್ರಯತ್ನ ಸರಿಯಾದ ದಾರಿಯಲ್ಲಿ ತ್ವರಿತವಾದ ರೀತಿಯಲ್ಲಿ ಮಾಡುವುದಕ್ಕೆ ಸಾಧ್ಯವಿತ್ತು ಎಂಬ ಅಭಿಪ್ರಾಯದಲ್ಲೂ ಸ್ವೀಕಾರ ಮಾಡುತ್ತೇನೆ. ತಮ್ಮ ನೋವು, ಕಳಕಳಿ, ಸರ್ಕಾರದ ನೋವು ಮತ್ತು ಕಳಕಳಿ ಎಲ್ಲಾ ಒಂದೇ. ಆ ದೃಷ್ಟಿಯಿಂದಲೇ ನಾನು ಶೀಘ್ರಗತಿಯಿಂದ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಕಾರ್ಯಕ್ರಮ ತೆಗೆದುಕೊಂಡಿದ್ದೇನೆ, ಶೀಘ್ರಗತಿಯಿಂದ ಕಾರ್ಯಕ್ರಮವನ್ನು ಕೈಗೊಳ್ಳುವಂತೆ ಸರ್ಕಾರದಿಂದ ಆದೇಶವನ್ನು ಕೊಡಲಾಗಿದೆ. ಬರೀ ತಾಲ್ಲೂಕು ಅಥವಾ ಒಂದು ಜಿಲ್ಲೆಗೆ ಸೀಮಿತಗೊಳ್ಳತಕ್ಕ ಆದೇಶವನ್ನು ನಾವು ಕೊಡಲಿಲ್ಲ. ಎಲ್ಲ ಕಡೆಗೂ ಸಂಬಂಧಪಡುವಂತೆ ಆದೇಶ ಕೊಟ್ಟಿದ್ದೇವೆ. ರೆವಿನ್ಯೂ ಇಲಾಖೆಯ ಅಧಿಕಾರಿಗಳು, ಪೋಲೀಸ್ ಇಲಾಖೆ ಮೇಲಾಧಿಕಾರಿಗಳು ಮತ್ತು ಇನ್ನುಳಿದ ಅಧಿಕಾರಿಗಳು ಏನು ಕ್ರಮವನ್ನು ತಕ್ಷಣ ತೆಗೆದುಕೊಳ್ಳಬೇಕೋ ಆ ಬಗ್ಗೆ ತೆಗೆದುಕೊಳ್ಳುವುದಕ್ಕೆ ಆದೇಶ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಮಾತನಾಡುವಾಗ ಹಾನಿಗೊಳಗಾಗಿರತಕ್ಕ ಕಡೆಗಳಲ್ಲಿ ಶಾಶ್ವತ ಪರಿಹಾರ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಇದಕ್ಕೋಸ್ಕರ ಬೋರ್ಡ್ ರಚನೆಯಾಗಲಿ ಎಂಬ ಸಲಹೆಯನ್ನು ಕೊಟ್ಟಿದ್ದಾರೆ ಮತ್ತು ಸಮುದ್ರ ಕೊರೆತದಿಂದ ಆಗಿರತಕ್ಕ ಹಾವಳಿ ಬಗ್ಗೆ ಶಾಶ್ವತ ಕಾರ್ಯಕ್ರಮ ಆಗಬೇಕು ಎಂಬ ಅಭಿಪ್ರಾಯವನ್ನು ಕೊಟ್ಟು ಕೇಂದ್ರ ಸರ್ಕಾರದವರು ಇದಕ್ಕೆ ದೊಡ್ಡ ಪ್ರಮಾಣದಲ್ಲಿ ಧನಸಹಾಯ ನೀಡುವುದಕ್ಕೆ ಮುಂದೆ ಬರಬೇಕು ಎಂದು ಹೇಳಿದ್ದಾರೆ. ನೇತ್ರಾವತಿ, ಕಾವೇರಿ, ಕಬಿನಿ, ವರದಾ ತುಂಗಭದ್ರಾ ಕೃಷ್ಣಾ, ಯಾವುದೇ ನದಿ ಇದ್ದರೂ ಕೂಡ ಅಲ್ಲಿ ಮಹಾಪೂರ ಬಂದಾಗ ಜನತೆಗೆ ನಷ್ಟ ಆಗದಂಥ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು, ಏತಕ್ಕೆಂದರೆ ಒಂದು ವರ್ಷ ಮಹಾಪೂರ ಸಣ್ಣದಾಗಿ ಬಂದರೆ ಮತ್ತೊಂದು ವರ್ಷ ಜಾಸ್ತಿ ಪ್ರಮಾಣದಲ್ಲಿ ಬರಬಹುದು, ೧೯೬೧-೬೨ನೇ ಸಾಲಿನಲ್ಲಿ ೧೯೭೪ನೇ ಸಾಲಿನಲ್ಲಿ ಮತ್ತು ಈ ಸಾಲಿನಲ್ಲಿ ಮಹಾಪೂರ ಬಂದಿದೆ. ಯಾವ ಕಡೆ ಮಳೆ ಹೆಚ್ಚಾಗಿ ಬೀಳುತ್ತದೆ ಅಲ್ಲಿ ಹೆಚ್ಚು ನೆರೆ ಹಾವಳಿಯಾಗಿ ನಷ್ಟ ಹೆಚ್ಚು ಆಗುವ ಸಂಭವವಿರುತ್ತದೆ. ೧೯೭೪ರಲ್ಲಿ ಮಹಾಪೂರ ಬಂದಾಗ ಈ ಸದನದಲ್ಲಿ ಹೆಚ್ಚು ಚರ್ಚೆ ಆಗಿರುವುದನ್ನು ನಾನು ನೋಡಿದ್ದೇನೆ. ಆಗ ಏನು ಶಾಶ್ವತ ಪರಿಹಾರ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದರೋ ಅದಕ್ಕಿಂತ ಹೆಚ್ಚು ಈಗ ತೆಗೆದುಕೊಳ್ಳಬೇಕಾಗಿದೆ ಸಮುದ್ರ ಕೊರೆತದ ವಿಷಯ ತೆಗೆದುಕೊಳ್ಳುವುದಾದರೆ ಅದರಿಂದ ಹಾನಿಗೊಳಗಾಗತಕ್ಕವರಿಗೆ ಶಾಶ್ವತ ಪರಿಹಾರ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂಬುದನ್ನು ಸರ್ಕಾರ ಒಪ್ಪಿಕೊಳ್ಳುತ್ತದೆ. ಕಾರ್ಯಕ್ರಮವನ್ನು ತೆಗೆದುಕೊಳ್ಳತಕ್ಕದ್ದಕ್ಕೆ ಮತ್ತು ಕಾರ್ಯಗತಗೊಳಿಸತಕ್ಕದ್ದಕ್ಕೆ ವಿಳಂಬ ಏತಕ್ಕೆ ಆಯಿತು ಎಂಬ ಬಗ್ಗೆ ಕಾರಣ ಏನೇ ಕೊಡಬಹುದು, ಆದರೆ ಆಗಿರತಕ್ಕದ್ದನ್ನು ಸರ್ಕಾರ ಒಪ್ಪುತ್ತದೆ. ಶೀಘ್ರವಾಗಿ ಶಾಶ್ವತ ಪರಿಹಾರ ಕಾರ್ಯ ಆಗಬೇಕು ಎಂಬುದನ್ನು ನಾನೂ ಒಪ್ಪುತ್ತೇನೆ. ಆದರೆ ಪ್ರಕೃತಿ ವಿಕೋಪವಾದಾಗ ಅದನ್ನು ತಡೆಗಟ್ಟುವುದು ನಮ್ಮ ಕೈಯಲ್ಲಿಲ್ಲ. ನಾವು ಎಷ್ಟೇ ಪರಿಹಾರ ಕಾರ್ಯವನ್ನು ಕೈಗೊಂಡರೂ ಪ್ರಕೃತಿ ವಿಕೋಪವಾದಾಗ ಏನೂ ಮಾಡುವುದಕ್ಕೆ ಆಗದಂಥ ಪರಿಸ್ಥಿತಿ ಬರುತ್ತದೆ. ನಾವು ನಮ್ಮ ಶಕ್ತಿಯ ವ್ಯಾಪ್ತಿಯಲ್ಲಿ ವಿಚಾರ ಮಾಡುತ್ತೇವೆ. ಕೆಲವೊಮ್ಮೆ ನಾವು ಹಾಕತಕ್ಕ ಶಾಶ್ವತ ಪರಿಹಾರ ಕಾರ್ಯಕ್ರಮ ತಾತ್ಕಾಲಿಕವಾದುದಾಗಬಹುದು. ಪ್ರಕೃತಿಯ ವಿಕೋಪ ದೊಡ್ಡ ಮಟ್ಟಕ್ಕೆ ಹೋದಾಗ ಹಾಗಾಗಬಾರದು.

